ಸಂಪುಟ: 05 ಸಂಚಿಕೆ: 130 ಪುಟಗಳು: 08 ಬುಧವಾರ 23 ಜುಲೈ 2025
www.udayavahini.in epaper.udayavahini.in Udayavahini news Udayavahini news Udayavahini news youtube udayavahininews@gmail.com
ಸಂಪಾದಕರು: ಟಿ. ಹೊಂಬೇಗೌಡ
RNI No. KARKAN/2021/80833
9448225696 +91 8035841833 ₹5

ಮುಂಜಾನೆ ಮಾತು

ನಮ್ಮ ಜೀವನವನ್ನೇ ಬದಲಾಯಿಸಬಲ್ಲ ಎಲ್ಲಾ ಸಾಧ್ಯತೆಗಳನ್ನು ಹೊಂದಿದ ಒಬ್ಬ ವ್ಯಕ್ತಿಯನ್ನು ಕಾಣಲು ದೂರ ಹೋಗಬೇಕಿಲ್ಲ. ಕನ್ನಡಿಯ ಮುಂದೆ ನಿಂತರೆ ಸಾಕು.

ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

ಶಾಸಕ ಬಸವರಾಜ್ ಬಂಧನಕ್ಕೆ ಆಗ್ರಹಿಸಿ ಕೈ ಪ್ರತಿಭಟನೆ

• ಉದಯವಾಹಿನಿ, ಕೆ.ಆರ್.ಪುರ

ಬಿಕ್ಲು ಸಿವಿ ಹತ್ಯೆ ಪ್ರಕರಣದಲ್ಲಿ ಆರೋಪಿಯಾಗಿರುವ ಶಾಸಕ ಭೈರತಿ ಬಸವರಾಜ ಅವರನ್ನು ಬಂಧಿಸಿ ಸೂಕ್ತ ರೀತಿಯಲ್ಲಿ ತನಿಖೆಮಾಡುವಂತೆ ಒತ್ತಾಯಿಸಿ ಇಲ್ಲಿನ ಬಿಬಿಎಂಪಿ ಕಚೇರಿ ಎದುರು ಕಾಂಗ್ರೇಸ್ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಪ್ರತಿಭಟನೆಯ ನೇತೃತ್ವವಹಿಸಿ ಮಾತನಾಡಿದ ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಡಿ.ಕೆ ಮೋಹನ್ ಅವರು ಮಾತನಾಡಿ ಹಲವಾರು ಅಪರಾಧ ಚಟುವಟಿಕೆಯ ಭಾಗವಾಗಿರುವ ಶಾಸಕ ಭೈರತಿ ಬಸವರಾಜ್ ವಿರುದ್ಧ ಎಸ್ ಐಟಿ ತನಿಖೆ ಯಾಗಬೇಕೆಂದು ಒತ್ತಾಯಿಸಿದರು. ಭೈರತಿ ಬಸವರಾಜ್ ಶಾಸಕರಾದ ನಂತರ ಕೆಆರ್ ಪುರ ಕ್ಷೇತ್ರದಲ್ಲಿ ಅವರ ಬೆಂಬಲಿಗರಿಂದ ಕೊಲೆ ಪ್ರಕರಣ, ಸಾರ್ವಜನಿಕರ ಮೇಲೆ ಹಲ್ಲೆಗಳು ಹೆಚ್ಚಾಗಿವೆ ಈ ಬಗ್ಗೆ ಪೊಲೀಸ್ ಠಾಣೆಗಳಲ್ಲಿ ದೂರು ಸಹ ದಾಖಲಾಗಿದೆ. ತಮ್ಮ ಅಧಿಕಾರದ ಪ್ರಭಾವ ಬಳಸಿಕೊಂಡು ಎಲ್ಲಾ ಪ್ರಕರಣಗಳನ್ನು ಮುಚ್ಚಿ ಹಾಕಿದ್ದಾರೆ. ಮಾಜಿ ಶಾಸಕಿ ಪೂರ್ಣಿಮಾ ಶ್ರೀನಿವಾಸ್ ಅವರು ಮಾತನಾಡಿ ಕೆಆರ್ ಪುರ ಕ್ಷೇತ್ರವೂ ಶಾಂತಿ ಸುವ್ಯವಸ್ಥೆಯಿಂದ ಕೂಡಿತ್ತು. ಈಗ ರೌಡಿಸಂ ಕ್ಷೇತ್ರವಾಗಿ ಮಾರ್ಪಾಡಾಗಿದೆ ಎಂದು ದೂರಿದರು.

ನಗರದ ಸಂರಕ್ಷಿತ ಕೆರೆಗಳಿಗೆ ವಿಧಾನಮಂಡಲ ಸಮಿತಿ ಭೇಟಿ

• ಉದಯವಾಹಿನಿ, ಬೆಂಗಳೂರು

ಕರ್ನಾಟಕ ವಿಧಾನಮಂಡಲದ ಸ್ಥಳೀಯ ಸಂಸ್ಥೆಗಳ ಮತ್ತು ಪಂಚಾಯತ್ ರಾಜ್ ಸಂಸ್ಥೆಗಳ ಸಮಿತಿಯು ಜುಲೈ 23 ರಂದು ಬೆಂಗಳೂರು ನಗರದ ಕೆಲವು ಸಂರಕ್ಷಿತ ಕೆರೆಗಳಿಗೆ ಮತ್ತು ಎಸ್.ಟಿ.ಪಿ ಘಟಕಗಳಿಗೆ ಭೇಟಿ ನೀಡಿ ಪರಿವೀಕ್ಷಣೆ ನಡೆಸಲಿದ್ದಾರೆ. ಭಾರತದ ಲೆಕ್ಕ ನಿಯಂತ್ರಕರು ಮತ್ತು ಮಹಾ ಲೆಕ್ಕ ಪರಿಶೋಧಕರು ನೀಡಿರುವ ಕೆರೆ ಅಭಿವೃದ್ಧಿ ಪ್ರಾಧಿಕಾರ ಮತ್ತು ನಗರ ಸ್ಥಳೀಯ ಸಂಸ್ಥೆಗಳ ಅಧಿಕಾರ ವ್ಯಾಪ್ತಿಯ ಕೆರೆಗಳ ಸಂರಕ್ಷಣೆ ಮತ್ತು ಪರಿಸರ ಪುನಶ್ಚೇತನದ ಮೇಲಿನ ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆ 2015 ನೇ ವರ್ಷದ ವರದಿ ಸಂಖ್ಯೆ-1ರ ಆಡಿಟ್ ಆಕ್ಷೇಪಣೆಗಳ ಪರಿಶೀಲನೆಯ ಭಾಗವಾಗಿ ಬೆಂಗಳೂರು ನಗರ ವ್ಯಾಪ್ತಿಯಲ್ಲಿ ಬರುವ ಎಲೆಮಲ್ಲಪ್ಪಶೆಟ್ಟಿ ಕೆರೆ, ವರ್ತೂರು ಕೆರೆ ಬೆಳ್ಳಂದರು ಕೆರೆ ಮತ್ತು ಅಗರ ಕೆರೆಗಳಿಗೆ ಮತ್ತು ಎಸ್.ಟಿ.ಪಿ ಘಟಕಗಳ ಸ್ಥಳ ಪರಿವೀಕ್ಷಣೆಯನ್ನು ಸಮಿತಿ ನಡೆಸಲಿದೆ ಎಂದು ಕರ್ನಾಟಕ ವಿಧಾನಸಭೆ ಸಚಿವಾಲಯ ಸ್ಥಳೀಯ ಸಂಸ್ಥೆಗಳ ಮತ್ತು ಪಂಚಾಯತ್ ರಾಜ್ ಸಂಸ್ಥೆಗಳ ಸಮಿತಿ ಶಾಖೆಯ ಅಧೀನ ಕಾರ್ಯದರ್ಶಿಗಳಾದ ಪಿ.ಸೀನ ಅವರು ತಿಳಿಸಿದ್ದಾರೆ.

ಕುಸುಮ್-ಬಿ ಯೋಜನೆಯಡಿ 40 ಸಾವಿರ ಪಂಪ್‌ಸೆಟ್‌ಗಳಿಗೆ ಅನುಮೋದನೆ

• ಉದಯವಾಹಿನಿ, ಬೆಂಗಳೂರು

ಸೌರ ಕೃಷಿ ಪಂಪ್ ಸೆಟ್ ಯೋಜನೆ ಕುಸುಮ್-ಬಿ ಅಡಿ 40 ಸಾವಿರ ಪಂಪ್ ಸೆಟ್‌ಗಳ ಅಳವಡಿಕೆಗೆ ಅನುಮೋದನೆ ನೀಡಲಾಗಿದ್ದು, ತ್ವರಿತ ಅನುಷ್ಠಾನಕ್ಕೆ ಕ್ರಮ ಕೈಗೊಳ್ಳುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಂಗಳವಾರ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ. ಕುಸುಮ್ ಬಿ ಯೋಜನೆಯ ಪ್ರಗತಿ ಪರಿಶೀಲನಾ ಸಭೆ ನಡೆಸಿದ ಸಿಎಂ, ಕುಸುಮ್-ಬಿ ಯೋಜನೆ ಅನುಷ್ಠಾನವನ್ನು ತ್ವರಿತಗೊಳಿಸುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಈ ಸಭೆಯಲ್ಲಿ ಇಂಧನ ಸಚಿವ ಕೆ.ಜೆ. ಜಾರ್ಜ್, ಇಲಾಖೆಯ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು. ಕುಸುಮ್-ಬಿ ಪ್ರಧಾನ ಮಂತ್ರಿ ಕಿಸಾನ್ ಉರ್ಜಾ ಸುರಕ್ಷಾ ಏವಮ್ ಉತ್ಥಾನ ಮಹಾಭಿಯಾನ(ಪಿಎಂ ಕುಸುಮ್) ಯೋಜನೆಯ ಬಿ ಘಟಕವಾಗಿದ್ದು, ಇದು ನೀರಾವರಿಗಾಗಿ 14 ಲಕ್ಷ ಸ್ಟ್ಯಾಂಡ್-ಅಲೋನ್ ಸೌರ ಕೃಷಿ ಪಂಪ್‌ಸೆಟ್‌ಗಳ ಸ್ಥಾಪನೆಯ ಮೇಲೆ ಕೇಂದ್ರೀಕರಿಸುತ್ತದೆ. ಈ ಯೋಜನೆಯಡಿಯಲ್ಲಿ, ಸೋಲಾರ್ ಕೃಷಿ ಪಂಪ್‌ಸೆಟ್ ಅಳವಡಿಸಲು ಕೇಂದ್ರ ಸರ್ಕಾರ ಶೇ.30 ರಷ್ಟು, ರಾಜ್ಯ ಸರ್ಕಾರ ಶೇ.50ರಷ್ಟು ಸಬ್ಸಿಡಿ ಒದಗಿಸುತ್ತಿದ್ದು, ಫಲಾನುಭವಿಗಳು ಶೇ. 20ರಷ್ಟು ಭರಿಸಬೇಕಿದೆ. ಸಭೆಯಲ್ಲಿ ಮುಖ್ಯಮಂತ್ರಿಗಳು, 40,000 ಪಂಪ್‌ಸೆಟ್‌ಗಳ ಅಳವಡಿಕೆಗೆ ಅನುಮೋದನೆ ನೀಡಿರುವುದನ್ನು ಗಮನಿಸಿದರು ಮತ್ತು ಅವುಗಳ ಅನುಷ್ಠಾನಕ್ಕೆ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದರು ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

ಈ ಯೋಜನೆಯಡಿಯಲ್ಲಿ ಹೆಚ್ಚುವರಿಯಾಗಿ 25,000 ರೈತರು ಅರ್ಜಿ ಸಲ್ಲಿಸಿದ್ದಾರೆ ಮತ್ತು ರಾಜ್ಯ ಸರ್ಕಾರವು ಇದಕ್ಕಾಗಿ 752 ಕೋಟಿ ರೂ.ಗಳನ್ನು ಖರ್ಚು ಮಾಡಲಿದೆ.

ಧನ್‌ಕರ್ ರಾಜೀನಾಮೆ ಸುತ್ತ ಅನುಮಾನದ ಹುತ್ತ

• ಉದಯವಾಹಿನಿ, ನವದೆಹಲಿ

ಆರೋಗ್ಯ ಕಾರಣ ನೀಡಿ ಉಪ ರಾಷ್ಟ್ರಪತಿ ಸ್ಥಾನಕ್ಕೆ ಜಗದೀಪ್ ಧನ್‌ಕರ್ ಅವರು ನೀಡಿರುವ ರಾಜೀನಾಮೆಯನ್ನು ರಾಷ್ಟ್ರಪತಿ ದ್ರೌಪದಿ ಮುರ್ಮು ಅಂಗೀಕರಿಸಿದ್ದಾರೆ. ಈ ಕುರಿತು ಕೇಂದ್ರ ಗೃಹ ಸಚಿವಾಲಯ ಮಾಹಿತಿ ನೀಡಿದ್ದು, ತಕ್ಷಣದಿಂದಲೇ ಜಾರಿಗೆ ಬರುವಂತೆ ರಾಜೀನಾಮೆಯನ್ನು ಅಂಗೀಕರಿಸಲಾಗಿದೆ ಎಂದು ತಿಳಿಸಿದೆ.

ರಾಜ್ಯಸಭೆಯಲ್ಲಿ ಪ್ರಶ್ನೋತ್ತರ ಅವಧಿ ಮುಗಿಯುತ್ತಿದ್ದಂತೆ, ಸಭಾಪತಿ ಸ್ಥಾನದಲ್ಲಿದ್ದ ಘನಶ್ಯಾಮ್ ತಿವಾರಿ ಅವರು ರಾಜೀನಾಮೆ ಅಂಗೀಕಾರಗೊಂಡ ಕುರಿತು ಸದಸ್ಯರಿಗೆ ಮಾಹಿತಿ ನೀಡಿದರು. ಸಂವಿಧಾನದ 67(ಎ) ವಿಧಿಯ ಅಡಿಯಲ್ಲಿ ಭಾರತದ ಉಪರಾಷ್ಟ್ರಪತಿ ಜಗದೀಪ್ ಧನ್‌ಕರ್ ಅವರ ರಾಜೀನಾಮೆಯನ್ನು ಸ್ವೀಕರಿಸಿದ್ದು, ತಕ್ಷಣದಿಂದ ಜಾರಿಗೆ ಬರಲಿದೆ ಎಂದು ತಿವಾರಿ ಹೇಳಿದರು. ಸೋಮವಾರ ಸಂಜೆ ಆರೋಗ್ಯ ಕಾರಣಗಳನ್ನು ಪ್ರಸ್ತಾಪಿಸಿ ಉಪರಾಷ್ಟ್ರಪತಿ ಹುದ್ದೆಗೆ ರಾಜೀನಾಮೆ ನೀಡಿರುವ ಧನ್‌ಕರ್, ತಕ್ಷಣವೇ ಜಾರಿಗೆ ಬರುವಂತೆ ಅಂಗೀಕರಿಸುವಂತೆ ರಾಷ್ಟ್ರಪತಿಗೆ ಮನವಿ ಮಾಡಿದ್ದರು.

ಜಗದೀಪ್ ಧನ್‌ಕರ್ ದಿಢೀರ್ ರಾಜೀನಾಮೆ ಹಲವು ಅನುಮಾನಕ್ಕೆ ಕಾರಣವಾಗಿದ್ದು, ಇದರ ಹಿಂದೆ ಬೇರೆ ಕಾರಣವಿದ್ದಂತೆ ತೋರುತ್ತಿದೆ ಎಂದು ಕಾಂಗ್ರೇಸ್ ಸೇರಿದಂತೆ ವಿಪಕ್ಷಗಳು ಆರೋಪಿಸಿವೆ. ರಾಜಸ್ಥಾನದ ಮಾಜಿ ಮುಖ್ಯಮಂತ್ರಿ ಅಶೋಕ್ ಗೆಹ್ಲೋಟ್ ಪ್ರತಿಕ್ರಿಯಿಸಿ, ಧನ್‌ಕರ್ ರಾಜೀನಾಮೆಗೆ ಅಸಲಿ ಕಾರಣ ಏನೆಂಬುದು ಪ್ರಧಾನಿ ಮೋದಿ, ಬಿಜೆಪಿ ಅಥವಾ ಆರ್‌ಎಸ್‌ಎಸ್‌ಗೆ ತಿಳಿದಿದೆ ಎಂದು ಹೇಳಿದ್ದಾರೆ. ಕಳೆದ ಹತ್ತು ದಿನಗಳ ಹಿಂದೆ ರಾಜ್ಯಸಭಾ ಸ್ಪೀಕರ್ ಮತ್ತು ಲೋಕಸಭಾ ಸ್ಪೀಕರ್ ಒತ್ತಡದಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ ಎಂದು ನಾನು ಹೇಳಿದ್ದೆ. ನಿಜಕ್ಕೂ ಏನೋ ಆಗಿದೆ. ಇದೀಗ ಧನ್‌ಕರ್ ರಾಜೀನಾಮೆ ನೀಡಿರುವುದು ರಾಜಸ್ಥಾನಕ್ಕೆ ಹಿನ್ನಡೆಯಾಗಿದೆ ಎಂದು ತಮ್ಮ ನಿವಾಸದೆದುರು ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದರು.

ರಾಜೀನಾಮೆ ಪತ್ರದಲ್ಲೇನಿದೆ..?: ರಾಷ್ಟ್ರಪತಿ ಮುರ್ಮು ಅವರಿಗೆ ರವಾನಿಸಿರುವ ರಾಜೀನಾಮೆ ಪತ್ರದಲ್ಲಿ, ಉಪರಾಷ್ಟ್ರಪತಿಗಳಾಗಿ ತಾವು ಪಡೆದ ಅಮೂಲ್ಯ ಅನುಭವಗಳು ಮತ್ತು ಒಳನೋಟಗಳಿಗೆ ತಾವು ತುಂಬಾ ಕೃತಜ್ಞರಾಗಿರುವುದಾಗಿ ಜಗದೀಪ್ ಧನ್‌ಕರ್ ಹೇಳಿದ್ದಾರೆ. ಈ ಮಹತ್ವದ ಅವಧಿಯಲ್ಲಿ ಭಾರತದ ಗಮನಾರ್ಹ ಆರ್ಥಿಕ ಪ್ರಗತಿ ಮತ್ತು ಅಭೂತಪೂರ್ವ ಅಭಿವೃದ್ಧಿಯನ್ನು ವೀಕ್ಷಿಸುವುದು ಮತ್ತು ಅದರಲ್ಲಿ ಭಾಗವಹಿಸುವುದು ತೃಪ್ತಿ ತಂದಿದೆ. ನಮ್ಮ ರಾಷ್ಟ್ರದ ಇತಿಹಾಸದ ಈ ಪರಿವರ್ತನಾ ಯುಗದಲ್ಲಿ ಸೇವೆ ಸಲ್ಲಿಸುವುದು ನಿಜವಾದ ಗೌರವವಾಗಿದೆ ಎಂದು ಧನ್‌ಕರ್ ತಮ್ಮ ರಾಜೀನಾಮೆ ಪತ್ರದಲ್ಲಿ ಉಲ್ಲೇಖಿಸಿದ್ದಾರೆ. ಜಗದೀಪ್ ಧನ್‌ಕರ್ ಇತ್ತೀಚೆಗೆ ದೆಹಲಿಯ ಅಖಿಲ ಭಾರತ ವೈದ್ಯಕೀಯ ವಿಜ್ಞಾನ ಸಂಸ್ಥೆಯಲ್ಲಿ ಆಂಜಿಯೋಪ್ಲಾಸ್ಟಿಗೆ ಒಳಗಾಗಿದ್ದರು. ಈ ತಿಂಗಳ ಆರಂಭದಲ್ಲಿ, ಧನ್‌ಕರ್ ಅವರು ಸರಿಯಾದ ಸಮಯದಲ್ಲಿ ನಿವೃತ್ತರಾಗುವುದಾಗಿ ಘೋಷಿಸಿದ್ದರು. ನಾನು ಸರಿಯಾದ ಸಮಯದಲ್ಲಿ ದೈವಿಕ ಹಸ್ತಕ್ಷೇಪಕ್ಕೆ ಒಳಪಟ್ಟು, ಆಗಸ್ಟ್ 2027ರಲ್ಲಿ ನಿವೃತ್ತಿ ಹೊಂದುತ್ತೇನೆ ಎಂದು ದೆಹಲಿಯ ಜವಾಹರಲಾಲ್ ನೆಹರು ವಿಶ್ವವಿದ್ಯಾಲಯದಲ್ಲಿ (ಜೆಎನ್‌ಯು) ನಡೆದ ಕಾರ್ಯಕ್ರಮವೊಂದರಲ್ಲಿ ಜಗದೀಪ್ ಧನ್‌ಕರ್ ಹೇಳಿದ್ದರು.

14ನೇ ಉಪರಾಷ್ಟ್ರಪತಿಯಾಗಿ ಜಗದೀಪ್ ಧನ್‌ಕರ್ ಅವರ ಐದು ವರ್ಷಗಳ ಅವಧಿ ಆಗಸ್ಟ್ 10, 2027ರಂದು ಕೊನೆಗೊಳ್ಳಬೇಕಿತ್ತು. ಬಿಜೆಪಿ ನೇತೃತ್ವದ ಎನ್‌ಡಿಎಯಿಂದ ಉಪರಾಷ್ಟ್ರಪತಿಯಾಗಿ ಆಯ್ಕೆಯಾಗುವ ಮೊದಲು, ಜಗದೀಪ್ ಧನ್‌ಕರ್ 2019ರಿಂದ 2022ರವರೆಗೆ ಪಶ್ಚಿಮ ಬಂಗಾಳದ ರಾಜ್ಯಪಾಲರಾಗಿ ಸೇವೆ ಸಲ್ಲಿಸಿದ್ದಾರೆ. ಜಗದೀಪ್ ಧನ್‌ಕರ್ ಅವರು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸಂಸತ್ತು ಶ್ರೇಷ್ಠ ಎಂದು ಹೇಳುವ ಮೂಲಕ, ನ್ಯಾಯಾಂಗದೊಂದಿಗೆ ಸುದೀರ್ಘ ಜಟಾಪಟಿಗೆ ಕಾರಣರಾಗಿದ್ದರು.

ಉಪರಾಷ್ಟ್ರಪತಿ ಸ್ಥಾನಕ್ಕೆ ಶೀಘ್ರ ಚುನಾವಣೆ ಅನಿವಾರ್ಯ

ಜಗದೀಪ್ ಧನ್‌ಕರ್ ಅವರು ಉಪ ರಾಷ್ಟ್ರಪತಿ ಸ್ಥಾನಕ್ಕೆ ರಾಜೀನಾಮೆ ನೀಡಿರುವುದರಿಂದ, ಅವರ ಉತ್ತರಾಧಿಕಾರಿಯನ್ನು ನೇಮಿಸುವ ಚುನಾವಣೆಯನ್ನು ಸಾಧ್ಯವಾದಷ್ಟು ಬೇಗ ನಡೆಸಬೇಕಾಗುತ್ತದೆ. ಸಂವಿಧಾನದ 68 ನೇ ವಿಧಿಯ 2 ನೇ ವಿಧಿಯ ಪ್ರಕಾರ, ಉಪ ರಾಷ್ಟ್ರಪತಿಗಳ ನಿಧನ, ರಾಜೀನಾಮೆ ಅಥವಾ ಪದಚ್ಯುತಿಗೆ ಸಂಬಂಧಿಸಿದಂತೆ ಅವರ ಹುದ್ದೆಯಲ್ಲಿನ ಖಾಲಿ ಹುದ್ದೆಯನ್ನು ಭರ್ತಿ ಮಾಡಲು ಚುನಾವಣೆಯನ್ನು ಸಾಧ್ಯವಾದಷ್ಟು ಬೇಗ ನಡೆಸಲಾಗುತ್ತದೆ. ಖಾಲಿ ಹುದ್ದೆಯನ್ನು ಭರ್ತಿ ಮಾಡಲು ಆಯ್ಕೆಯಾದ ವ್ಯಕ್ತಿಯು ಅವರು ತಮ್ಮ ಹುದ್ದೆಯನ್ನು ವಹಿಸಿಕೊಂಡ ದಿನಾಂಕದಿಂದ ಐದು ವರ್ಷಗಳ ಪೂರ್ಣ ಅವಧಿಗೆ ಅಧಿಕಾರ ವಹಿಸಿಕೊಳ್ಳಲು ಅರ್ಹರಾಗಿರುತ್ತಾರೆ. ಉಪರಾಷ್ಟ್ರಪತಿಯವರ ಮರಣ ಅಥವಾ ಅವರ ಅಧಿಕಾರಾವಧಿ ಮುಗಿಯುವ ಮೊದಲು ರಾಜೀನಾಮೆ ನೀಡಿದರೆ ಅಥವಾ ಉಪಾಧ್ಯಕ್ಷರು ಭಾರತದ ರಾಷ್ಟ್ರಪತಿಯಾಗಿ ಕಾರ್ಯನಿರ್ವಹಿಸಿದಾಗ ಅವರ ಕರ್ತವ್ಯಗಳನ್ನು ಯಾರು ನಿರ್ವಹಿಸುತ್ತಾರೆ ಎಂಬುದರ ಕುರಿತು ಸಂವಿಧಾನದಲ್ಲಿ ಯಾವುದೇ ಮಾಹಿತಿ ಇಲ್ಲ.

ಸಭಾಪತಿಯಾಗಿ ಕೊನೆಯ ದಿನ..?

ಸಂಸತ್ತಿನ ಮೇಲ್ಮನೆಯಾಗಿರುವ ರಾಜ್ಯಸಭೆಯ ಸಭಾಪತಿಯೂ ಆಗಿದ್ದ ಜಗದೀಪ್ ಧನ್‌ಕರ್, ಕಲಾಪದ ಸಮಯದಲ್ಲೇ ತಾವು ಉಪರಾಷ್ಟ್ರಪತಿ ಮತ್ತು ರಾಜ್ಯಸಭೆ ಸಭಾಪತಿ ಸ್ಥಾನಕ್ಕೆ ರಾಜೀನಾಮೆ ನೀಡುತ್ತಿರುವುದಾಗಿ ಘೋಷಿಸುವ ಮೂಲಕ ಎಲ್ಲರನ್ನೂ ಅಚ್ಚರಿಗೊಳಿಸಿದರು. ಇದಕ್ಕೂ ಮೊದಲು ನ್ಯಾಯಮೂರ್ತಿ ಯಶವಂತ್ ವರ್ಮಾ ಅವರ ನಿವಾಸದಲ್ಲಿ ಸುಟ್ಟುಹೋದ ನಗದು ಪತ್ತೆ ಪ್ರಕರಣಕ್ಕೆ ಸಂಬಂಧಿಸಿದಂತೆ, ಅವರನ್ನು ಪದಚ್ಯುತಗೊಳಿಸುವ ಪ್ರಸ್ತಾಪಕ್ಕಾಗಿ ವಿರೋಧ ಪಕ್ಷಗಳ ಪ್ರಾಯೋಜಿತ ನೋಟಿಸ್‌ನ್ನು ಜಗದೀಪ್ ಧನ್‌ಕರ್ ಅವರಿಗೆ ಸಲ್ಲಿಸಲಾಯಿತು. ಈ ನೋಟಿಸನ್ನು ಸದನದಲ್ಲಿ ಪ್ರಸ್ತಾಪಿಸಿದ ಜಗದೀಪ್ ಧನ್‌ಕರ್, ಮುಂದಿನ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳುವಂತೆ ಪ್ರಧಾನ ಕಾರ್ಯದರ್ಶಿಗೆ ಸೂಚನೆ ನೀಡಿದರು.

1. ಉಪರಾಷ್ಟ್ರಪತಿ ಸ್ಥಾನಕ್ಕೆ ದಿಢೀರ್ ರಾಜೀನಾಮೆ ನೀಡಿದ ಜಗದೀಪ್ ಧನ್‌ಕರ್
2. ರಾಜ್ಯಸಭೆ ಸಭಾಪತಿಯಾಗಿ ಜಗದೀಪ್ ಧನ್‌ಕರ್ ಅವರ ಕೊನೆಯ ದಿನ ಹೇಗಿತ್ತು?
3. ಜಗದೀಪ್ ಧನ್‌ಕರ್ ರಾಜೀನಾಮೆ ಬಗ್ಗೆ ಪ್ರತಿಪಕ್ಷ ಕಾಂಗ್ರೆಸ್ ಪ್ರತಿಕ್ರಿಯೆ ಏನು?

- ಉಪರಾಷ್ಟ್ರಪತಿ ಸ್ಥಾನಕ್ಕೆ ಪದತ್ಯಾಗ
- ಧನ್‌ಕರ್ ರಾಜೀನಾಮೆ ಅಂಗೀಕಾರ ನಮೋ ಸತ್ಕಾರ
- ಧನ್‌ಕರ್ ರಾಜೀನಾಮೆ ಅಂಗೀಕರಿಸಿದ ರಾಷ್ಟ್ರಪತಿ ಮುರ್ಮು
- ಜಗದೀಪ್ ಧನ್‌ಕರ್ ದಿಢೀರ್ ರಾಜೀನಾಮೆ ಬೆನ್ನಲ್ಲೇ ಉಪರಾಷ್ಟ್ರಪತಿ ಸ್ಥಾನಕ್ಕೆ ಪೈಪೋಟಿ ಆರಂಭ
- ರಾಜೀನಾಮೆ ಸುತ್ತ ಹಲವು ಅನುಮಾನಗಳು

ಕಾಂಗ್ರೇಸ್ ಅಚ್ಚರಿ

ಜಗದೀಪ್ ಧನ್‌ಕರ್ ಅವರ ರಾಜೀನಾಮೆಗೆ ಪ್ರಮುಖ ಪ್ರತಿಪಕ್ಷ ಕಾಂಗ್ರೇಸ್ ಅಚ್ಚರಿ ವ್ಯಕ್ತಪಡಿಸಿದೆ. ಇದು ಸಂಪೂರ್ಣವಾಗಿ ಅನಿರೀಕ್ಷಿತವಾಗಿದ್ದು, ಇದರಲ್ಲಿ ಕಣ್ಣಿಗೆ ಕಾಣುವುದಕ್ಕಿಂತ ಹೆಚ್ಚಿನದು ಇದೆ ಎಂದು ಕಾಂಗ್ರೇಸ್ ಸೂಚ್ಯವಾಗಿ ಹೇಳಿದೆ. ಕಲಾಪದ ಸಮಯದಲ್ಲಿ ಜಗದೀಪ್ ಧನ್‌ಕರ್ ಮತ್ತು ಕಾಂಗ್ರೇಸ್ ಸದಸ್ಯರ ನಡುವೆ ತೀವ್ರ ಮಾತಿನ ಚಕಮಕಿ ನಡೆಯುತ್ತಿದ್ದನ್ನು ಇಲ್ಲಿ ಸ್ಮರಿಸಬಹುದು.

ಸದ್ಯ ನಿಯಮಗಳ ಪ್ರಕಾರ, ಉಪರಾಷ್ಟ್ರಪತಿ ಸ್ಥಾನವನ್ನು ತುಂಬಲು ಮುಂದಿನ ಆರು ತಿಂಗಳೊಳಗೆ ಚುನಾವಣೆಗಳನ್ನು ನಡೆಸಬೇಕು. ಆದಾಗ್ಯೂ, ಹೊಸ ಉಪರಾಷ್ಟ್ರಪತಿ ಆಯ್ಕೆಯಾಗುವವರೆಗೆ, ರಾಜ್ಯಸಭೆಯ ಉಪಾಧ್ಯಕ್ಷರು ಸದನದ ಕಲಾಪಗಳನ್ನು ನಿರ್ವಹಿಸಲಿದ್ದಾರೆ.



ಧನ್‌ಕರ್ ಆರೋಗ್ಯ ಸುಧಾರಣೆಗೆ ಪ್ರಧಾನಿ ಮೋದಿ ಹಾರೈಕೆ

ಎಕ್ಸ್ ಜಾಲತಾಣದಲ್ಲಿ ಪೋಸ್ಟ್ ಮಾಡಿರುವ ಪ್ರಧಾನಿ ಮೋದಿ, ಧನ್‌ಕರ್ ಅವರಿಗೆ ಭಾರತದ ಉಪ ರಾಷ್ಟ್ರಪತಿ ಹುದ್ದೆ ಸೇರಿದಂತೆ ವಿವಿಧ ಹುದ್ದೆಗಳಲ್ಲಿ ದೇಶಕ್ಕೆ ಸೇವೆ ಸಲ್ಲಿಸಲು ಹಲವು ಅವಕಾಶಗಳು ಸಿಕ್ಕಿವೆ. ಅವರ ಉತ್ತಮ ಆರೋಗ್ಯಕ್ಕಾಗಿ ಹಾರೈಸುತ್ತೇನೆ ಎಂದು ತಿಳಿಸಿದ್ದಾರೆ.

ಮೃತರ ಜಮೀನಿಗೆ ಕಿಸಾನ್ ಸಮ್ಮಾನ, ಪ್ರವಾಹ ಪರಿಹಾರ, ಕೃಷಿ ಸಬ್ಸಿಡಿ ಇಲ್ಲ

• ಉದಯವಾಹಿನಿ, ಕಾರವಾರ

ಮೃತರಾಗಿರುವ ವ್ಯಕ್ತಿಯ ಹೆಸರಿನಲ್ಲಿರುವ ಜಮೀನಿನ ಮೇಲೆ ಕಿಸಾನ್ ಸಮ್ಮಾನ, ಪ್ರವಾಹ ಪರಿಹಾರ, ಕೃಷಿ ಸಬ್ಸಿಡಿ ಸೇರಿ ಯಾವುದೇ ಸೌಲಭ್ಯಗಳು ಅವರ ವಾರಸುದಾರರಿಗೆ ಸಿಗುವುದಿಲ್ಲ ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ತಿಳಿಸಿದರು.

ರಾಜ್ಯದಲ್ಲಿ ಇನ್ನೂ 52.56 ಲಕ್ಷ ಜಮೀನು ಮೃತರ ಹೆಸರಿನಲ್ಲಿದೆ. ಉತ್ತರ ಕನ್ನಡ ಜಿಲ್ಲೆಯಲ್ಲಿ 1.90 ಲಕ್ಷ ಜಮೀನು ಮೃತರ ಹೆಸರಿನಲ್ಲಿದೆ. ಅದರಲ್ಲಿ 57 ಸಾವಿರ ಜಮೀನು ರೈತರದ್ದು. ಅದನ್ನು ವಾರಸುದಾರರ ಹೆಸರಿಗೆ ಮಾಡಿಕೊಡಲಾಗುತ್ತಿದೆ. ಸಹಕರಿಸದೇ ಇರುವ ಕುಟುಂಬದ ಆಸ್ತಿಯನ್ನು ಕೈ ಬಿಡುತ್ತೇವೆ ಎಂದರು. ಜನರಿಗೆ ಆನ್‌ಲೈನ್ ಮೂಲಕ ಅಂಗೈಯಲ್ಲಿ ಆಸ್ತಿ ದಾಖಲೆ ನೀಡುವ ಸಂಬಂಧ 'ಭೂ ಸುರಕ್ಷೆ' ಯೋಜನೆ ರೂಪಿಸಲಾಗಿದೆ. ರಾಜ್ಯದಲ್ಲಿ 150 ವರ್ಷಗಳಷ್ಟು ಹಳೆಯ ದಾಖಲೆಗಳಿವೆ. ಅವು ಕಳೆದು ಹೋಗಬಾರದು, ಹೆಸರು ತಿದ್ದುಪಡಿ ಮಾಡಬಾರದು ಎನ್ನುವ ಸಲುವಾಗಿ ಅವುಗಳನ್ನು ಸ್ಕ್ಯಾನಿಂಗ್ ಮಾಡುವ ಕೆಲಸ ನಡೆಯುತ್ತಿದೆ. ರಾಜ್ಯದಲ್ಲಿ 100 ಕೋಟಿ ಪುಟಗಳು ಇವ

ವಿದೇಶಿ ಭಾಷಾ ಕಲಿಕೆಯಲ್ಲಿ ನವೀನ ಬೋಧನಾ ವಿಧಾನಗಳು ಕುರಿತ ವಿಚಾರ ಸಂಕಿರಣ, ಪುಸ್ತಕ ಬಿಡುಗಡೆ

• ಉದಯವಾಹಿನಿ, ಬೆಂಗಳೂರು

ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಜಾಗತಿಕ ಭಾಷಾ ಕೇಂದ್ರವು ತನ್ನ 40ನೇ ವಾರ್ಷಿಕೋತ್ಸವದ ಅಂಗವಾಗಿ ವಿದೇಶಿ ಭಾಷಾ ಕಲಿಕೆಯಲ್ಲಿ ನವೀನ ಬೋಧನಾ ವಿಧಾನಗಳು ಕುರಿತ ವಿಚಾರ ಸಂಕಿರಣವನ್ನು ಆಯೋಜಿಸಿದೆ. ಈ ಕಾರ್ಯಕ್ರಮವು 2025ರ ಜುಲೈ 24ರಂದು ಬೆಳಿಗ್ಗೆ 11:30ಕ್ಕೆ, ಹೊಸ ಅಕಾಡೆಮಿಕ್ ಬ್ಲಾಕ್‌ನಲ್ಲಿ ನಡೆಯಲಿದೆ. ಕಾರ್ಯಕ್ರಮದ ವೇಳೆ ಭಾಷಾ ಅಧ್ಯಯನದೊಂದಿಗೆ ಸಂಬಂಧಿಸಿದ ಹೊಸ ಪುಸ್ತಕ ಬಿಡುಗಡೆ ಮಾಡಲಾಗುವುದು. ಕಾರ್ಯಕ್ರಮವನ್ನು ಪ್ರೊ. ಎಸ್. ಆರ್. ನಿರಂಜನ್, ಉಪಾಧ್ಯಕ್ಷರು, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಮಂಡಳಿ ಮತ್ತು ಮಾಜಿ ಕುಲಪತಿಗಳು, ಗುಲ್ಬರ್ಗಾ ವಿಶ್ವವಿದ್ಯಾನಿಲಯ ಉದ್ಘಾಟಿಸಲಿದ್ದಾರೆ.



ಮುಖ್ಯ ಅತಿಥಿಯಾಗಿ ಪ್ರೊ. ಲಿಂಗರಾಜ್ ಗಾಂಧಿ, ಮಾಜಿ ಕುಲಪತಿ, ಬೆಂಗಳೂರು ನಗರ ವಿಶ್ವವಿದ್ಯಾನಿಲಯ ಪಾಲ್ಗೊಳ್ಳಲಿದ್ದಾರೆ. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಪ್ರೊ. ಕೆ.ಆರ್. ಜಲಜಾ, ಕುಲಪತಿ, ಬೆಂಗಳೂರು ನಗರ ವಿಶ್ವವಿದ್ಯಾನಿಲಯ ವಹಿಸಿಕೊಳ್ಳಲಿದ್ದಾರೆ.

ಅತಿಥಿಗಳಾಗಿ ಪ್ರೊ. ರಾಮೇಶ್, ರಿಜಿಸ್ಟ್ರಾರ್, ಬೆಂಗಳೂರು ನಗರ ವಿಶ್ವವಿದ್ಯಾನಿಲಯ, ಶ್ರೀಮತಿ ವಿಜಯಲಕ್ಷ್ಮಿ, ಹಣಕಾಸು ಅಧಿಕಾರಿ, ಬೆಂಗಳೂರು ನಗರ ವಿಶ್ವವಿದ್ಯಾನಿಲಯ ಉಪಸ್ಥಿತರಿರಲಿದ್ದಾರೆ. ಭಾಷಾ ಶಿಕ್ಷಣದ ಕ್ಷೇತ್ರದಲ್ಲಿ ಶೈಕ್ಷಣಿಕ ಶ್ರೇಷ್ಠತೆ, ನಾವೀನ್ಯತೆಯನ್ನು ಉತ್ತೇಜಿಸುವ ದೃಷ್ಟಿಯಿಂದ ಈ ಕಾರ್ಯಕ್ರಮವನ್ನು ಜಾಗತಿಕ ಭಾಷಾ ಕೇಂದ್ರ ಆಯೋಜಿಸುತ್ತಿದೆ. ಇದು ವಿದೇಶಿ ಭಾಷಾ ಶಿಕ್ಷಣ ಕ್ಷೇತ್ರದಲ್ಲಿ ಮಹತ್ತರ ಕೊಡುಗೆಯಾಗಿ ಪರಿಗಣಿಸಲಾಗಿದೆ. ಡಾ. ಜ್ಯೋತಿ ವೆಂಕಟೇಶ್ ಡಿ.ಎನ್.,ಕಲಾ ವಿಭಾಗ ಮತ್ತು ನಿರ್ದೇಶಕಿ, ಜಾಗತಿಕ ಭಾಷಾ ಕೇಂದ್ರ, ಬೆಂಗಳೂರು ನಗರ ವಿಶ್ವವಿದ್ಯಾನಿಲಯ, ಅವರು ಈ ಕಾರ್ಯಕ್ರಮವನ್ನು ಆಯೋಜಿಸುತ್ತಿದ್ದಾರೆ

ಜುಲೈ ಆವೃತ್ತಿ ಪ್ರವೇಶಕ್ಕೆ ಕೆಎಸ್‌ಒಯು ಅರ್ಜಿ ಆಹ್ವಾನ

• ಉದಯವಾಹಿನಿ, ಬೆಂಗಳೂರು

ನಗರದ ಮಲ್ಲೇಶ್ವರಂನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ಮಹಿಳಾ ಪ್ರಾದೇಶಿಕ ಕೇಂದ್ರವು 2025-26ನೇ ಶೈಕ್ಷಣಿಕ ಸಾಲಿನ ಜುಲೈ ಆವೃತ್ತಿಗೆ ವಿವಿಧ ಪದವಿ, ಸ್ನಾತಕೋತ್ತರ ಪದವಿ ಕೋರ್ಸುಗಳ ಪ್ರವೇಶಕ್ಕೆ ಅರ್ಜಿ ಆಹ್ವಾನಿಸಿದೆ. ಆಸಕ್ತ ಪುರುಷ ಮತ್ತು ಮಹಿಳಾ ವಿದ್ಯಾರ್ಥಿಗಳು ಬಿಎ, ಬಿಕಾಂ, ಬಿಎಸ್ಸಿ, ಬಿಎಸ್‌ಡಬ್ಲ್ಯೂ, ಬಿಬಿ,ಎಂ ಬಿಸಿಎ(ಜನರಲ್ ಮತ್ತು ಐಟಿ) ಪದವಿ ಕೋರ್ಸುಗಳು ಹಾಗೂ ಎಂಎ. ಎಕಾಂ, ಎಂಎಸ್ಸಿ,ಎಂಸಿಜೆ, ಎಂಎಸ್‌ಡಬ್ಲ್ಯೂ, ಎಂಸಿಎ, ಎಂಬಿಎ ಸೇರಿದಂತೆ ವಿವಿಧ ಸ್ನಾತಕೋತ್ತರ ಕೋರ್ಸುಗಳ ಪ್ರವೇಶಕ್ಕೆ ಅರ್ಜಿ ಸಲ್ಲಿಸಬಹುದಾಗಿದೆ. ವಿವಿಯ ವೆಬ್‌ಸೈಟ್ www.ksoumysuru.ac.in ನಲ್ಲಿನ ಪ್ರವೇಶಕ್ಕೆ ಸಂಬಂಧಿಸಿದ ಪೋರ್ಟಲ್ ಮೂಲಕ ಅರ್ಜಿ ಸಲ್ಲಿಸಬಹುದು ಎಂದು ಪ್ರಾದೇಶಿಕ ಕೇಂದ್ರದ ನಿರ್ದೇಶಕಿ ಶಶಿಲಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಬಿಪಿಎಲ್ ಕಾರ್ಡು ಹೊಂದಿರುವ ಮಹಿಳಾ ವಿದ್ಯಾರ್ಥಿಗಳಿಗೆ, ಸೈನಿಕ, ಮಾಜಿ ಸೈನಿಕ, ಆಟೋ ಕ್ಯಾಬ್ ಚಾಲಕರ ಮಕ್ಕಳಿಗೆ, ಕೆಎಸ್‌ಆರ್‌ಟಿಸಿ ಸೇರಿದಂತೆ ರಾಜ್ಯ ರಸ್ತೆ ಸಾರಿಗೆ ನಿಗಮಗಳ ನೌಕರರಿಗೆ ಬೋಧನಾ ಶುಲ್ಕದಲ್ಲಿ ಶೇ.10ರಷ್ಟು ರಿಯಾಯಿತಿ ಇರುತ್ತದೆ. ಕೋವಿಡ್‌ನಿಂದ ಮೃತಪಟ್ಟ ಪೋಷಕರ ಮಕ್ಕಳು, ಲೈಂಗಿಕ ಅಲ್ಪಸಂಖ್ಯಾತರು, ದೃಷ್ಟಿದೋಷದ ವಿದ್ಯಾರ್ಥಿಗಳಿಗೆ ಪೂರ್ಣ ಶುಲ್ಕ ವಿನಾಯಿತಿ ಇರುತ್ತದೆ. ಎಸ್ಸಿ, ಎಸ್ಟಿ ಮತ್ತು ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳು ದಾಖಲೆಗಳನ್ನು ನೀಡಿದರೆ ಎಸ್‌ಎಸ್‌ಪಿ ವಿದ್ಯಾರ್ಥಿವೇತನ ದೊರೆಯುತ್ತದೆ ಎಂದು ತಿಳಿಸಲಾಗಿದೆ.

ಹರಿದಾಸ ನಮನ ಗಾಯನ

• ಉದಯವಾಹಿನಿ, ಬೆಂಗಳೂರು

ಪವಮಾನಪುರದ ನಂಜನಗೂಡು ಶ್ರೀ ರಾಘವೇಂದ್ರ ಸ್ವಾಮಿಗಳ ಮಠದಲ್ಲಿ ಪರಮಪೂಜ್ಯ ಶ್ರೀಶ್ರೀ ಸುಬುಧೇಂದ್ರತೀರ್ಥ ಶ್ರೀಪಾದಂಗಳವರ ಆದೇಶದಂತೆ ಶ್ರೀಮಠದ ವಿಚಾರಣಾಕರ್ತರಾದ ಶ್ರೀ ಗಿರಿರಾಜಾಚಾರ್ಯರ ನೇತೃತ್ವದಲ್ಲಿ ಜುಲೈ 24, ಗುರುವಾರ ಸಂಜೆ 7-00ಕ್ಕೆ ಹರಿದಾಸ ನಮನ. ಗಾಯನ: ಶ್ರೀ ಶಿಶಿರ್ ಕೆ.ಪಿ., ಕೀ-ಬೋರ್ಡ್ : ಕು|| ಸಂಸ್ಕೃತಿ ಎಸ್. ಬಾಣಾವರ್, ತಬಲಾ ಶ್ರೀ ಅವೀಕ್ಷಿತ್ ಶ್ರೀನಿವಾಸನ್ ತಾಳ : ಕು|| ಇಂಚರ ಎಸ್.ಆರ್. ಸ್ಥಳ : ನಂಜನಗೂಡು ಶ್ರೀ ರಾಘವೇಂದ್ರ ಸ್ವಾಮಿಗಳ ಮಠ, ಪವಮಾನಪುರ, 6ನೇ ಹಂತ ಬನಶಂಕರಿ, ಬೆಂಗಳೂರು

ಬೆಂಗಳೂರಿನಲ್ಲಿ ಅಕ್ರಮವಾಗಿ ನೆಲೆಸಿದ್ದ 9 ವಿದೇಶಿಗರ ಬಂಧನ

• ಉದಯವಾಹಿನಿ, ಬೆಂಗಳೂರು

ಸಿಸಿಬಿ ಪೊಲೀಸರು ಭರ್ಜರಿ ಕಾರ್ಯಾಚರಣೆ ನಡೆಸಿದ್ದು, ವೀಸಾ ಅವಧಿ ಮುಗಿದರೂ ಬೆಂಗಳೂರಿನಲ್ಲಿ ಅಕ್ರಮವಾಗಿ ವಾಸಿಸುತ್ತಿದ್ದ 9 ವಿದೇಶಿಗರನ್ನು ಬಂಧಿಸಿದ್ದಾರೆ. ನೈಜೀರಿಯಾದ ನಾಲ್ವರು ಪ್ರಜೆಗಳು, ಘಾನಾದ ಇಬ್ಬರು, ಸುಡಾನ್ ದೇಶದ ಓರ್ವ ಪ್ರಜೆ ಸೇರಿದಂತೆ ಒಟ್ಟು ಒಂಬತ್ತು ವಿದೇಶಿಗರನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ. ಪಾಸ್ ಪೋರ್ಟ್, ವೀಸಾ ಅವಧಿ ಮುಗಿದಿದ್ದರೂ ನಗರದಲ್ಲಿ ಅಕ್ರಮವಾಗಿ ವಾಸಗಿದ್ದರು. ಇನ್ನು ಬಂಧಿತರನ್ನು ಡಿಟೆನ್ಷನ್ ಸೆಂಟರ್‌ಗೆ ಕಳುಹಿಸಲಾಗಿದ್ದು, ಬಂಧಿತರನ್ನು ಅವರವರ ದೇಶಕ್ಕೆ ವಾಪಸ್ ಕಳಿಸುವ ಪ್ರಕ್ರಿಯೆ ನಡೆದಿದೆ.

ಡಿಜಿಟಲ್ ಟೆಲಿಮೆಟ್ರಿ: ಕೊಳವೆಬಾವಿ ನೀರಿಗೆ ಶುಲ್ಕ

ಕೇಂದ್ರ ಅಂತರ್ಜಲ ಪ್ರಾಧಿಕಾರದ ಮಾರ್ಗಸೂಚಿ ಒಪ್ಪಿಕೊಂಡ ರಾಜ್ಯ ಸರ್ಕಾರ

• ಉದಯವಾಹಿನಿ, ಬೆಂಗಳೂರು

ರಾಜ್ಯದಲ್ಲಿ ಅಂತರ್ಜಲ ದುರ್ಬಳಕೆಯನ್ನು ತಡೆಯಲು ನಗರ ಪ್ರದೇಶಗಳಲ್ಲಿ ಕೊಳವೆಬಾವಿಯಿಂದ ತೆಗೆಯುವ ನೀರಿನ ಬಳಕೆ ಪ್ರಮಾಣವನ್ನು ಅಳೆಯಲು ಡಿಜಿಟಲ್ ಟೆಲಿಮೆಟ್ರಿ ಅಳವಡಿಸಿ, ದರ ನಿಗದಿ ಮಾಡಲು ಸರ್ಕಾರ ಮುಂದಾಗಿದೆ. ಅಂತರ್ಜಲ ಬಳಕೆಯನ್ನು ನಿರ್ಬಂಧಿಸಲು ಕೇಂದ್ರ ಸರ್ಕಾರದ, ಕೇಂದ್ರ ಅಂತರ್ಜಲ ಪ್ರಾಧಿಕಾರ ಹೊರಡಿಸಿರುವ ಮಾರ್ಗಸೂಚಿಯನ್ನು ರಾಜ್ಯ ಸರ್ಕಾರ ಒಪ್ಪಿಕೊಂಡಿದೆ. ಈ ಸಂಬಂಧ, ಇತ್ತೀಚೆಗೆ ನಡೆದ ಸಚಿವ ಸಂಪುಟ ಸಭೆಗೆ ಸಣ್ಣ ನೀರಾವರಿ ಇಲಾಖೆ ಮಂಡಿಸಿದ್ದ ಪ್ರಸ್ತಾವನೆಗೆ ಸಭೆ ಅನುಮೋದನೆ ನೀಡಿದೆ. ಕೇಂದ್ರ ಅಂತರ್ಜಲ ಪ್ರಾಧಿಕಾರದ ಮಾರ್ಗಸೂಚಿಗೆ ಕೆಲವು ತಿದ್ದುಪಡಿಗಳನ್ನು ತರಲು ರಾಜ್ಯ ಮುಂದಾಗಿದ್ದು, ಅದು ಸಿದ್ದಗೊಂಡ ಬಳಿಕವಷ್ಟೆ ದರ ನಿಗದಿಯಾಗಲಿದೆ. ಕೈಗಾರಿಕೆ, ವಾಣಿಜ್ಯ, ಗಣಿಗಾರಿಕೆ, ಮೂಲಸೌಕರ್ಯಗಳ ಅಭಿವೃದ್ಧಿ, ಟ್ಯಾಂಕರ್‌ಗಳಲ್ಲಿ ನೀರು ಪೂರೈಕೆ, ಸಮೂಹ ಗೃಹ ಸಹಕಾರ ಸಂಘಗಳು, ಅಪಾರ್ಟ್‌ಮೆಂಟ್ ಸಮುಚ್ಚಯಗಳ ಅಂತರ್ಜಲ ಬಳಕೆಯ ಮೇಲೆ ಪ್ರತಿ ಕ್ಯುಬಿಕ್ ಮೀಟ್ 1ರಿಂದ 35ರವರೆಗೆ ಶುಲ್ಕ ನಿಗದಿ ಮಾಡಲು ಪ್ರಸ್ತಾವ ಸರ್ಕಾರದ ಮುಂದಿದೆ. ಅಂತರ್ಜಲ ಬಳಕೆಗೆ ನಿರಾಕ್ಷೇಪಣಾ ಪತ್ರ ಪಡೆಯುವುದನ್ನೂ ಕಡ್ಡಾಯಗೊಳಿಸಲಾಗಿದೆ. ಕರ್ನಾಟಕ ಅಂತರ್ಜಲ ಅಧಿನಿಯಮ 2011 ಮತ್ತು ನಿಯಮಾವಳಿ 2012ರ ಅನ್ವಯ ನಿರಾಕ್ಷೇಪಣಾ ಪತ್ರವನ್ನು ಕಡ್ಡಾಯ ಮಾಡಲಾಗಿತ್ತು. ರಾಜ್ಯ ಸರ್ಕಾರ ಆ ನಿಯಮ ರೂಪಿಸಿದಾಗ, ಬಳಕೆ ದರವನ್ನು ನಿಗದಿ ಮಾಡಿರಲಿಲ್ಲ. ಮಾರ್ಗಸೂಚಿ ಉಲ್ಲಂಘಿಸುವವರಿಗೆ 10 ಸಾವಿರದವರೆಗೆ ಮಾತ್ರ ದಂಡ ವಿಧಿಸುವ ಅವಕಾಶ ಕಲ್ಪಿಸಲಾಗಿತ್ತು. ಕೇಂ ಅಂತರ್ಜಲ ಪ್ರಾಧಿಕಾರದ ಮಾರ್ಗಸೂಚಿಯಂತೆ, ಈಗ ಅದನ್ನು 1 ಲಕ್ಷಕ್ಕೆ ಹೆಚ್ಚಿಸಲಾಗಿದೆ. ನಗರ ಪ್ರದೇಶದ ಅಪಾರ್ಟ್‌ಮೆಂಟ್‌ಗಳು, ಸಮೂಹ ವಸತಿ ಸಹಕಾರ ಸಂಘಗಳು ಸಾರ್ವಜನಿಕ ನೀರು ಸರಬರಾಜು ಮಾಡುವ ಸರ್ಕಾರದ ಸಂಸ್ಥೆಗಳಿಗೆ ದಿನಕ್ಕೆ ಪ್ರತಿ 25 ಕ್ಯುಬಿಕ್ ಮೀಟರ್‌ವರೆಗೆ 1, 25-200 ಕ್ಯುಬಿಕ್ ಮೀಟರ್, 200 ಹಾಗೂ ಮೇಲ್ಪಟ್ಟು ಕ್ಯುಬಿಕ್ ಮೀಟರ್‌ಗೆ 2 ನಿಗದಿ ಮಾಡಲಾಗಿದೆ. ಸರ್ಕಾರಿ ನೀರು ಪೂರೈಕೆ ಸಂಸ್ಥೆಗಳಿಗೆ ನೀರು ತೆಗೆಯುವ ಶುಲ್ಕ ಪ್ರತಿ ಕ್ಯುಬಿಕ್ ಮೀಟರ್‌ಗೆ 50 ಪೈಸೆ ಮತ್ತು ವಾಟರ್ ಫ್ಲೋ ಮೀಟರ್ ಅಳವಡಿಸುವುದನ್ನು ಕಡ್ಡಾಯ ಮಾಡಲಾಗಿದೆ.

ಗ್ರೇಟರ್ ಬೆಂಗಳೂರು ವ್ಯಾಪ್ತಿಯಲ್ಲಿ ಅಪಾರ್ಟ್‌ಮೆಂಟ್‌ಗಳಲ್ಲಿನ ಕೊಳವೆಬಾವಿಗ ಹಾಗೂ ಬೆಂಗಳೂರು ನಗರ ಪ್ರದೇಶದಲ್ಲಿ ಎಲ್ಲಾ ಸ್ವತಂತ್ರ ಮನೆಗಳು ಹೊಂದಿರುವ ಕೊಳವೆಬಾವಿಗಳಿಗೆ ಟೆಲಿಮೆಟ್ರಿ ಹೊಂದಿರುವ ಡಿಜಿಟಲ್ ವಾಟರ್‌ಫ್ಲೋ ಮೀಟರ್ ಅಳವಡಿಸಬೇಕು. 20 ಕೆಎಲ್‌ಡಿ (ದಿನಕ್ಕೆ ಕಿಲೋ ಲೀಟರ್) ಬಳಸುವವರಿಗೆ ದರ ನಿಗದಿ ಮಾಡಿಲ್ಲ. ಒಂದು ಕಿಲೋ ಲೀಟರ್ ಎಂದರೆ 1000 ಲೀಟರ್.

ಕೈಗಾರಿಕೆಗಳಿಗೂ ಟ್ಯಾಂಕರ್ ನೀರು

ಸಾರ್ವಜನಿಕ ನೀರು ಸರಬರಾಜು ಕೊಳವೆಬಾವಿಗಳು, ಕೃಷಿ ಕೊಳವೆಬಾವಿಗಳುಮತ್ತು ವೈಯಕ್ತಿಕ ಕುಡಿಯುವ ನೀರಿನ ಕೊಳವೆಬಾವಿಗಳಿಗೆ ಯಾವುದೇ ರೀತಿಯಲ್ಲಿ ತೊಂದರೆ ಆಗದಂತೆ ಕೈಗಾರಿಕೆ, ವಾಣಿಜ್ಯ, ಗಣಿಗಾರಿಕೆ ಮತ್ತು ಮೂಲ ಸೌಕರ್ಯ ಅಭಿವೃದ್ಧಿಯಲ್ಲಿ ತೊಡಗಿರುವ ಘಟಕಗಳಿಗೆ ಕುಡಿಯುವ ಹಾಗೂ ಗೃಹೋಪಯೋಗಿ ಉದ್ದೇಶಕ್ಕಾಗಿ ಬಳಸಲು ಟ್ಯಾಂಕರ್ ನೀರು ಪೂರೈಕೆ ಮಾಡಲು ಅವಕಾಶ ನೀಡಲಾಗಿದೆ.

ಸೈರನ್‌ಗೆ ಕಡಿವಾಣ; ಪೊಲೀಸ್ ಮಹಾನಿರ್ದೇಶಕ

• ಉದಯವಾಹಿನಿ, ಬೆಂಗಳೂರು

ಅತಿ ಗಣ್ಯ ವ್ಯಕ್ತಿಗಳ (ವಿಐಪಿ) ಸಂಚಾರದ ವೇಳೆ ವಾಹನಗಳು ಸೈರನ್ ಬಳಸದಂತೆ ಆದೇಶ ಹೊರಡಿಸಲಾಗಿದೆ.ಸಾರ್ವಜನಿಕರ ಸುರಕ್ಷತೆ, ಶಬ್ದ ಮಾಲಿನ್ಯ ನಿಯಂತ್ರಿಸುವ ಉದ್ದೇಶದಿಂದ ಹೊರಡಿಸಲಾಗಿರುವ ಈ ಆದೇಶವನ್ನು ಎಲ್ಲಾ ಘಟಕಾಧಿಕಾರಿಗಳು ಕಟ್ಟುನಿಟ್ಟಾಗಿ ಪಾಲಿಸುವಂತೆ ರಾಜ್ಯ ಪೊಲೀಸ್ ಮಹಾನಿರ್ದೇಶಕ ಡಾ.ಎಂ.ಎ.ಸಲೀಂ ಅವರು ಸೂಚಿಸಿದ್ದಾರೆ.

ಗಣ್ಯ ವ್ಯಕ್ತಿಗಳ ಸಂಚಾರದ ಸಮಯದಲ್ಲಿ ಅನವಶ್ಯಕವಾಗಿ ಸೈರನ್ ಬಳಕೆ ಮಾಡುವುದರಿಂದ ಗಣ್ಯರು ಯಾವ ರಸ್ತೆಯಲ್ಲಿ ಚಲಿಸುತ್ತಿದ್ದಾರೆ ಎಂಬ ಬಗ್ಗೆ ಅನಧಿಕೃತ ವ್ಯಕ್ತಿಗಳಿಗೆ ಮಾಹಿತಿ ರವಾನೆಯಾಗಲಿದೆ. ಗಣ್ಯ ವ್ಯಕ್ತಿಗಳಿಗೆ ಅಪಾಯ ಉಂಟಾಗುವ ಸಾಧ್ಯತೆ ಇರುತ್ತದೆ. ಸೈರನ್ ಬಳಕೆಯಿಂದ ಸಾರ್ವಜನಿಕರಿಗೆ ತೊಂದರೆ ಆಗುವುದಲ್ಲದೇ ಶಬ್ದ ಮಾಲಿನ್ಯವೂ ಆಗುತ್ತದೆ.

ಸಾರ್ವಜನಿಕ ರಸ್ತೆಗಳಲ್ಲಿ ಹಠತ್ತಾಗಿ ಸೈರನ್ ಬಸುವುದರಿಂದ ಇತರೆ ವಾಹನಗಳ ಚಾಲಕರಿಗೆ ದ್ವಂದ್ವ ಉಂಟಾಗಿ, ಯಾವ ಕಡೆಗೆ ಚಲಿಸಬೇಕೆಂದು ತಿಳಿಯದೇ ವಾಹನವನ್ನು ಅಡ್ಡಾದಿಡ್ಡಿಯಾಗಿ ಚಲಾಯಿಸಿ ಬೆಂಗಾವಲು, ಇತರೆ ವಾಹನಗಳಿಗೆ ಗೊಂದಲ ಉಂಟು ಮಾಡುವ ಸಾಧ್ಯತೆ ಇರುತ್ತದೆ ಎಂದು ವಿವರಿಸಿದ್ದಾರೆ.

ಸೈರನ್‌ಗಳನ್ನು ಕೇವಲ ತುರ್ತು ಸೇವಾ ವಾಹನಗಳಾದ ಅಂಬುಲೆನ್ಸ್, ಪೊಲೀಸ್ ವಾಹನಗಳು ಹಾಗೂ ಅಗ್ನಿಶಾಮಕ ವಾಹನಗಳು ಅನಿವಾರ್ಯ ಪರಿಸ್ಥಿತಿಗಳಲ್ಲಿ ಮಾತ್ರ ಬಳಸಬೇಕು. ಈ ಆದೇಶವನ್ನು ಪಾಲಿಸುವಂತೆ ಅಧಿಕಾರಿಗಳು, ಸಿಬ್ಬಂದಿಗೆ ಎಲಾ ಘಟಕಾಧಿಕಾರಿಗಳು ಸೂಚನೆ ನೀಡಬೇಕು ಎಂದು ಸಲೀಂ ಅವರು ತಿಳಿಸಿದ್ದಾರೆ.

ಅತಿ ಗಣ್ಯರ ಸಂಚಾರದ ವೇಳೆ ವಾಹನಗಳ ತುರ್ತು ಚಲನವಲನದ ಅವಶ್ಯಕತೆಗೆ ಅನುಗುಣವಾಗಿ ದೂರಸಂಪರ್ಕ ಸಾಧನಗಳಾದ 'ವೈರ್‌ಲೆಸ್ ಕಮ್ಯುನಿಕೇಶನ್ ವ್ಯವಸ್ಥೆ'ಯನ್ನು ಪರಿಣಾಮಕಾರಿಯಾಗಿ ಉಪಯೋಗಿಸುವುದು ಹೆಚ್ಚು ಶಿಸ್ತಿನ ಹಾಗೂ ಸುರಕ್ಷತೆಯ ಮಾರ್ಗವಾಗಿದೆ ಎಂದು ಆದೇಶದಲ್ಲಿ ತಿಳಿಸಿದ್ದಾರೆ.

ಬೆಂಗಳೂರು ನಗರದಲ್ಲಿ ಹಲವೆಡೆ ಮಳೆ ಅಬ್ಬರ

• ಉದಯವಾಹಿನಿ, ಬೆಂಗಳೂರು

ನಗರದಲ್ಲಿ ಮಧ್ಯಾಹ್ನದಿಂದ ತಡರಾತ್ರಿವರೆಗೆ ಹಲವು ಪ್ರದೇಶಗಳಲ್ಲಿ ಮಳೆ ಅಬ್ಬರ ಹೆಚ್ಚಾಗಿತ್ತು. ನಗರದ ಬಹುತೇಕ ಪ್ರದೇಶಗಳಲ್ಲಿ ಮಳೆ ಸುರಿಯಿತು. ಮಧ್ಯಾಹ್ನ ಶಾಲೆ ಬಿಡುವ ಸಂದರ್ಭದಲ್ಲಿ ಮಳೆ ಬಿರುಸಾಗಿದ್ದರಿಂದ ಮಕ್ಕಳು ಮನೆ ತಲುಪಲು ವಿಳಂಬವಾಯಿತು. ಪ್ರಮುಖ ರಸ್ತೆಗಳಲ್ಲಿ ನೀರು ನಿಂತು ವಾಹನ ಸಂಚಾರ ಅಸ್ತವ್ಯಸ್ತವಾಗಿತ್ತು.

ಮರಿಗೌಡ ರಸ್ತೆಯಿಂದ ಡೇರಿ ವೃತ್ತ, ಮಾರತ್ ಹಳ್ಳಿಯಿಂದ ಬೆಳ್ಳಂದೂರು, ಬಿಟಿಎಂ ಲೇಔಟ್ 29ನೇ ಮುಖ್ಯರಸ್ತೆಯಿಂದ ಸಿಲ್ಕ್ ಬೋರ್ಡ್, ಗುಂಜೂರು ರಸ್ತೆಯಿಂದ ವರ್ತೂರು, ಐಟಿಪಿಎಲ್ ಮುಖ್ಯರಸ್ತೆಯಿಂದ ಆಡುಗೋಡಿ ಜಂಕ್ಷನ್‌ನಿಂದ ಆನೆಪಾಳ್ಯ, ರೂಪೇನ ಅಗ್ರಹಾರದಿಂದ ಬೊಮ್ಮನಹಳ್ಳಿ, ಪಣತ್ತೂರು ಜಂಕ್ಷನ್‌ನಿಂದ ಬೋಗನಹಳ್ಳಿ, ಮೈಸೂರು ರಸ್ತೆ ಟೋಲ್ ಗೇಟ್‌ನಿಂದ ಹೊಸ ಗುಡ್ಡದಹಳ್ಳಿ, ವಿಪ್ರೊ ಜಂಕ್ಷನ್‌ನಿಂದ ಕೈಕೊಂಡನಹಳ್ಳಿ, ಎಸ್‌ಜೆಪಿ ಮಾರುಕಟ್ಟೆಯಿಂದ ಪುರಭವನ, ಓಕಳಿಪುರಂ ಕೆಳಸೇತುವೆಯಿಂದ ಮೆಜೆಸ್ಟಿಕ್‌ವರೆಗಿನ ರಸ್ತೆಗಳಲ್ಲಿ ನೀರು ನಿಂತು ವಾಹನ ಸಂಚಾರ ನಿಧಾನಗತಿಯಲ್ಲಿತ್ತು.

ಮಡಿವಾಳ ಅಯ್ಯಪ್ಪ ಅಂಡರ್‌ಪಾಸ್‌ನಲ್ಲಿ ಮಳೆ ನೀರು ತುಂಬಿಕೊಂಡು ವಾಹನಗಳ ಸಂಚಾರ ಸಾಧ್ಯವಾಗಲಿಲ್ಲ. ಆರ್.ಟಿ ನಗರದ ಸಮೀಪದ ರಾಧಾಕೃಷ್ಣ ಚಿತ್ರಮಂದಿರದ ಬಳಿ, ವೀರಣ್ಣ ಪಾಳ್ಯ ರೈಲ್ವೆಗೇಟ್ ಬಳಿ ಮರ ಧರೆಗುರುಳಿ ವಾಹನ ಸಂಚಾರಕ್ಕೆ ತಡೆಯಾಗಿತ್ತು. ಕೆಇಬಿ ಜಂಕ್ಷನ್‌ನಿಂದ ಹೆಣ್ಣೂರು, ಹೆಣ್ಣೂರು ಬಾಗಲೂರು ಮುಖ್ಯರಸ್ತೆ, ಕೊತ್ತನೂರು ಮುಖ್ಯರಸ್ತೆಯಿಂದ ಕೆ. ನಾರಾಯಣಪುರ, ಹೆಬ್ಬಾಳ ಅಪ್ಪರ್ ಯಾಂಪ್‌ನಲ್ಲಿ ಮಳೆ ನೀರು ನಿಂತು ವಾಹನ ಸಂಚಾರಕ್ಕೆ ಅಡಚಣೆಯಾಗಿತ್ತು.

ಅತಿ ಹೆಚ್ಚು ಮಳೆ: ವಿದ್ಯಾಪೀಠದಲ್ಲಿ 4.6 ಸೆಂ.ಮೀ, ರಾಜರಾಜೇಶ್ವರಿ ನಗರದಲ್ಲಿ 3 ಸೆಂ.ಮೀ, ಬೊಮ್ಮನಹಳ್ಳಿ, ಕೋರಮಂಗಲ, ಹಂಪಿನಗರ, ಬಿಟಿಎಂ ಲೇಔಟ್‌ನಲ್ಲಿ 1.6 ಸೆಂ.ಮೀ. ಹೇರೋಹಳ್ಳಿ, ದೊರೆಸಾನಿ ಪಾಳ್ಯ, ಹೊರಮಾವು, ವನ್ನಾರಪೇಟೆ, ಬಾಣಸವಾಡಿಯಲ್ಲಿ ತಲಾ 1.5 ಸೆಂ.ಮೀ, ಕಾಟನ್‌ಪೇಟೆ, ಚಾಮರಾಜಪೇಟೆ, ರಾಮಮೂರ್ತಿನಗರ, ಶೆಟ್ಟಿಹಳ್ಳಿ ಸುತ್ತಮುತ್ತಲಿನ ಪ್ರದೇಶದಲ್ಲಿ 1.2 ಸೆಂ.ಮೀ ಮಳೆಯಾಗಿದೆ.

ಉದಯವಾಹಿನಿ ಚಿತ್ರ

ಮಕ್ಕಳ ಚಿಕಿತ್ಸೆಗೆ ಹೈಟೆಕ್ ಕಟ್ಟಡ, ಅಸ್ಥಿಮಜ್ಜೆ ಕಸಿ ಘಟಕ

• ಉದಯವಾಹಿನಿ, ಬೆಂಗಳೂರು

ಇಲ್ಲಿನ ಇಂದಿರಾ ಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆಯ (ಐಜಿಐಸಿಎಚ್) ಆವರಣದಲ್ಲಿ ಎಂಟು ಮಹಡಿಗಳ ಸೂಪರ್ ಸ್ಪೆಷಾಲಿಟಿ ಕಟ್ಟಡ ತಲೆಯೆತ್ತಿದೆ. ಈ ಕಟ್ಟಡವು ಮಕ್ಕಳ ಚಿಕಿತ್ಸೆಗೆ ಹಾಸಿಗೆಗಳ ಕೊರತೆಯನ್ನು ನೀಗಿಸುವ ಜತೆಗೆ, ಅಂಗಾಂಗ ಕಸಿ ಅಸ್ಥಿಮಜ್ಜೆ ಕಸಿಯಂತಹ ಅತ್ಯಾಧುನಿಕ ಸೌಲಭ್ಯ ಒಳಗೊಂಡ ಘಟಕಗಳನ್ನು ಒಳಗೊಂಡಿದೆ.ವೈದ್ಯಕೀಯ ಶಿಕ್ಷಣ ಇಲಾಖೆಯಡಿ ಕಾರ್ಯನಿರ್ವಹಿಸುತ್ತಿರುವ ಐಜಿಐಸಿಎಚ್, ಸ್ವಾಯತ್ತ ಸಂಸ್ಥೆಯಾಗಿದ

ಭೂ ಸ್ವಾಧೀನ ವಿರೋಧಿಸಿ ಭೈರಮಂಗಲ ಬಂದ್

ಬಿಡದಿ ಸಮಗ್ರ ಉಪನಗರ ಯೋಜನೆಗೆ ವಿರೋಧ: ಪ್ರತಿಭಟನೆಯಲ್ಲಿ ನಟ ಚೇತನ್ ಭಾಗಿ

• ಉದಯವಾಹಿನಿ, ರಾಮನಗರ

ಬಿಡದಿ ಸಮಗ್ರ ಉಪನಗರ ಯೋಜನೆಗಾಗಿ ಗ್ರೇಟರ್ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಭೂ ಸ್ವಾಧೀನಕ್ಕೆ ಮುಂದಾಗಿರುವುದನ್ನು ವಿರೋಧಿಸಿ. ಇಲ್ಲಿನ ಗ್ರಾಮ ಪಂಚಾಯಿತಿ ಕೇಂದ್ರವಾದ ಭೈರಮಂಗಲ ಗ್ರಾಮವನ್ನು ಬಂದ್ ಮಾಡಿ ರೈತರು ಪ್ರತಿಭಟನೆ ನಡೆಸಿದರು .ಭೈರಮಂಗಲ-ಕಂಚುಗಾರನಹಳ್ಳಿ ರೈತರ ಹಿತರಕ್ಷಣಾ ಸಂಘ ನೀಡಿದ್ದ ಬಂದ್‌ನಲ್ಲಿ ಉಪನಗರ ಯೋಜನೆ ವ್ಯಾಪ್ತಿಯ ರೈತರು, ರೈತ ಸಂಘದ ಕಾರ್ಯಕರ್ತರು, ಕನ್ನಡಪರ ಸಂಘಟನೆಗಳ ಕಾರ್ಯಕರ್ತರು. ಸಿನಿಮಾ ನಟ ಚೇತನ್ ಸೇರಿದಂತೆ ಹಲವರು ಭಾಗವಹಿಸಿದ್ದರು. ಬಂದ್ ಹಿನ್ನೆಲೆಯಲ್ಲಿ ಔಷಧ ಅಂಗಡಿ ಹೊರತುಪಡಿಸಿ ಉಳಿದ ಅಂಗಡಿಗಳು ಬಂದ್ ಆಗಿದ್ದವು.

ಉದಯವಾಹಿನಿ ಚಿತ್ರ

ಭೂ ಸ್ವಾಧೀನ ಕೈ ಬಿಡಬೇಕು ಎಂದು ಆಗ್ರಹ

ಗ್ರಾಮವನ್ನು ಹಾದು ಹೋಗಿರುವ ಮುಖ್ಯ ರಸ್ತೆಯನ್ನು ತಡೆದ ಪ್ರತಿಭಟನಾಕಾರರು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಸ್ಥಳೀಯ ಶಾಸಕ ಎಚ್.ಸಿ. ಬಾಲಕೃಷ್ಣ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಯೋಜನೆಯನ್ನು ಕೈ ಬಿಟ್ಟು ಭೂ ಸ್ವಾಧೀನಕ್ಕೆ ಹೊರಡಿಸಿರುವ ನೋಟಿಫಿಕೇಷನ್ ರದ್ದುಗೊಳಿಸಬೇಕು ಎಂದು ಆಗ್ರಹಿಸಿದರು.

ಪ್ರತಿಭಟನಾಕಾರರು ಹಸುಗಳು ಮತ್ತು ಎತ್ತಿನಗಾಡಿಯನ್ನು ಸಹ ರಸ್ತೆಗೆ ತಂದು ಸುಮಾರು ಒಂದು ತಾಸು ರಸ್ತೆ ತಡೆ ನಡೆಸಿದ್ದರಿಂದಾಗಿ, ಸಾರಿಗೆ ಬಸ್‌ಗಳು ಸೇರಿದಂತೆ ಹಲವು ವಾಹನಗಳು ರಸ್ತೆಯುದ್ದಕ್ಕೂ ಸಾಲುಗಟ್ಟಿ ತಾಸಿನವರೆಗೆ ನಿಂತವು. ಇದರಿಂದಾಗಿ, ಪ್ರಯಾಣಿಕರು ಹಾಗೂ ವಾಹನಗಳ ಸವಾರರು ತೊಂದರೆ ಅನುಭವಿಸಿದರು.

> ಬಿಡದಿ ಉಪನಗರಕ್ಕೆ ಗುರುತಿಸಿರುವ ಭೂಮಿ ಪೈಕಿ ಸಾವಿರ ಎಕರೆಯನ್ನು ಕೆಐಎಡಿಬಿ ಕೊಟ್ಟಾಗ ಯಾಕೆ ಹೋರಾಡಲಿಲ್ಲ ಈಗ ನನ್ನ ಅವಧಿಯಲ್ಲಿ ಉಪನಗರವಾಗುತ್ತಿರುವ ಕಾರಣಕ್ಕೆ ಈ ಹೋರಾಟವೇ
> -ಡಿಕೆ. ಶಿವಕುಮಾರ್
> ಉಪ ಮುಖ್ಯಮಂತ್ರಿ

> ಉಪನಗರದ ಹೆಸರಿನಲ್ಲಿ ಬಂಡವಾಳಶಾಹಿಗಳಿಗೆ ಅನುಕೂಲ ಮಾಡಿಕೊಡಲು ಸರ್ಕಾರ ರೈತರ ಭೂಮಿಯನ್ನ ಕಬಳಿಸಲು ಮುಂದಾಗಿದೆ. ಇದರ ವಿರುದ್ಧದ ಹೋರಾಟಕ್ಕೆ ರೈತ ಮತ್ತು ಕನ್ನಡಪರ ಸಂಘಟನೆಗಳು ಕೈ ಜೋಡಿಸಬೇಕಿದೆ.
> -ಚೇತನ್ ಸಿನಿಮಾ ನಟ

ನಟ ಚೇತನ್ ಮಾತನಾಡಿ, ಬಂಡವಾಳಶಾಹಿಗಳೇ ರೈತರ ಶತ್ರುಗಳು. ಸರ್ಕಾರ ಕೂಡ ಅವರ ಪರವಾಗಿಯೇ ಇದೆ. ಫಲವತ್ತಾದ ರೈತರ ಭೂಮಿ ಕಬಳಿಸಿ ಅಲ್ಲಿ ವಿಮಾನ ನಿಲ್ದಾಣ, ಅಪಾರ್ಟ್‌ಮೆಂಟ್, ಈಜುಕೊಳ ಸೇರಿದಂತೆ ಬಂಡವಾಳಶಾಹಿಗಳ ಐಷಾರಾಮಿ ಬದುಕಿಗೆ ಬೇಕಾದ್ದನ್ನು ನಿರ್ಮಾಣ ಮಾಡಿ ಬಡ ಜನರನ್ನು ಬೀದಿಪಾಲು ಮಾಡುವುದು ಸರಿಯಲ್ಲ, ಸರ್ಕಾರ ಭೂ ಸ್ವಾಧೀನ ಕೈ ಬಿಡಬೇಕು ಎಂದು ಆಗ್ರಹಿಸಿದರು.

ರೈತ ಸಂಘದ ನಾಗೇಶ್, ರೈತರ ಇಚ್ಛೆಗೆ ವಿರುದ್ಧವಾಗಿ ನಡೆದುಕೊಂಡ ಹಲವು ಸರ್ಕಾರಗಳು ಬಿದ್ದು ಹೋಗಿವೆ. ಇಲ್ಲಿನ ರೈತರ ಹೋರಾಟಕ್ಕೆ ಕಿವಿಗೊಡದಿದ್ದರೆ ರಾಜ್ಯ ಸರ್ಕಾರಕ್ಕೂ ಅದೇ ಗತಿ ಬರಲಿದೆ. ಸ್ಥಳೀಯರು ಭೂ ಸ್ವಾಧೀನ ವಿರೋಧಿಸುತ್ತಿದ್ದರೂ ಇಲ್ಲಿನ ಶಾಸಕ ಬಾಲಕೃಷ್ಣ ಗ್ರಾಮಗಳಿಗೆ ಬಂದು ಅಹವಾಲು ಆಲಿಸಿಲ್ಲ. ರೈತರಿಗೆ ವಿರುದ್ಧವಾಗಿ ನಡೆದ ಯಾವ ಸರ್ಕಾರವು ಉಳಿಯದು' ಎಂದು ಎಚ್ಚರಿಕೆ ನೀಡಿದರು.

ಬಂದ್ ಹಿನ್ನೆಲೆಯಲ್ಲಿ ಗ್ರಾಮದಲ್ಲಿ ಬಿಗಿ ಪೊಲೀಸ್ ಬಂದೋಬಸ್ತ್ ಮಾಡಲಾಗಿತ್ತು. ರೈತ ಸಂಘದ ಭೈರೇಗೌಡ, ಪ್ರಕಾಶ್, ಕರ್ನಾಟಕ ಪ್ರಾಂತರೈತ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಯಶವಂತ, ಹೋರಾಟ ಸಮಿತಿಯ ಪ್ರಕಾಶ್, ನಾಗರಾಜು, ಜನತಾ ಪಕ್ಷದ ಮಹಿಳಾ ಅಧ್ಯಕ್ಷೆ ವಾಣಿ, ಧಮ್ಮ ದೀವಿಗೆ ಟ್ರಸ್ಟ್ ಅಧ್ಯಕ್ಷ ಮಲ್ಲಿಕಾರ್ಜುನ, ಅವತಾರ ಶಿವು, ಮಾದೇಗೌಡ ಹಾಗೂ ಇತರರು ಇದ್ದರು.

ಕೋವಿಡ್ ಲಸಿಕೆಯಿಂದ ಹೃದಯಘಾತ ಸಂಭವಿಸಿಲ್ಲ: ಎಚ್.ಸಿ.ಬಾಲಕೃಷ್ಣ ಸ್ಪಷ್ಟನೆ

• ಉದಯವಾಹಿನಿ, ಮಾಗಡಿ

ಕೋವಿಡ್ ಲಸಿಕೆಯಿಂದ ಹೃದಯಘಾತ ಸಂಭವಿಸುತ್ತಿಲ್ಲ ಎಂಬುದನ್ನು ಸರ್ಕಾರವೇ ದೃಢಪಡಿಸಿದೆ ಎಂದು ಶಾಸಕ ಎಚ್.ಸಿ.ಬಾಲಕೃಷ್ಣ ಸ್ಪಷ್ಟಪಡಿಸಿದರು. ತಾಲ್ಲೂಕಿನ ಬಾಚೇನಟ್ಟಿ ಸರ್ಕಾರಿ ಪ್ರೌಢಶಾಲಾ ಆವರಣದಲ್ಲಿ ಮಹಾನಾಡು ಕಟ್ಟೆಮನೆ, ಡಿ.ಕೆ.ಚಾರಿಟಬಲ್ ಟ್ರಸ್ಟ್, ಎಂ.ಎಸ್.ರಾಮಯ್ಯ ಆಸ್ಪತ್ರೆ ಸಹಯೋಗದಲ್ಲಿ ನಡೆದ ಬೃಹತ್ ಉಚಿತ ಆರೋಗ್ಯ ತಪಾಸಣಾ ಶಿಬಿರಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಒತ್ತಡದಿಂದ ಹೃದಯಘಾತ ಸಂಭವಿಸುತ್ತಿದೆಯೇ ಹೊರತು ಲಸಿಕೆಯಿಂದಲ್ಲ ಎಂದರು.

ಜುಲೈ 27ರಿಂದ ಮಾಗಡಿಯಲ್ಲಿ 10 ದಿನ ಎಂ.ಎಸ್. ರಾಮಯ್ಯ ಆಸ್ಪತ್ರೆ ವತಿಯಿಂದ ಹೃದಯ ತಪಾಸಣಾ ಶಿಬಿರ ಆಯೋಜಿಸಲಾಗಿದೆ. ಎಲಾರೂ ಇದರ ಸದುಪಯೋಗ ಪಡಿಸಿಕೊಳ್ಳಿ. ಇತ್ತೀಚೆಗೆ ಸ್ತನ ಕ್ಯಾನ್ಸರ್ ಮತ್ತು ಗರ್ಭಕೋಶ ಕ್ಯಾನ್ಸರ್ ಹೆಚ್ಚಾಗುತ್ತಿದ್ದು, ಮಹಿಳೆಯರು ಈ ತಪಾಸಣೆ ಮಾಡಿಕೊಳ್ಳಿ.

ಕ್ಯಾನ್ಸರ್ ಇದ್ದರೆ ಗುಣಪಡಿಸಬಹುದು ಎಂದು ತಿಳಿಸಿದರು.

ಉದಯವಾಹಿನಿ ಚಿತ್ರ

ಬಮೂಲ್ ಅಧ್ಯಕ್ಷ ಡಿ.ಕೆ.ಸುರೇಶ್ ಅವರು ತಾಲ್ಲೂಕಿನಲ್ಲಿ 100 ಎಕರೆ ಜಾಗವನ್ನು ಗುರುತಿಸಿ ನಿವೇಶನ ರಹಿತ ಬಡವರಿಗೆ ಉಚಿತವಾಗಿ ನಿವೇಶನ ಹಂಚುವ ಕೆಲಸ ಮಾಡಲಾಗುತ್ತದೆ. ಬಾಚೇನಟ್ಟಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ 20 ಎಕರೆ ಸರ್ಕಾರಿ ಜಾಗ ಗುರುತಿಸಿಕೊಟ್ಟರೆ ಫಲಾನುಭವಿಗಳಿಗೆ ಉಚಿತ ನಿವೇಶನ ಹಂಚಲಾಗುತ್ತದೆ.

ಬಗರ್ ಹುಕುಂ ಅಡಿ ಹಕ್ಕುಪತ್ರ ವಿತರಿಸಲು ಒತ್ತಡ ಹಾಕಲಾಗುತ್ತದೆ. ಗ್ರಾಮ ಠಾಣಾ ವ್ಯಾಪ್ತಿ ವಿಸ್ತರಣೆ ಮಾಡಿದ್ದು ಎ ಮತ್ತು ಬಿ ಖಾತೆ ವಿತರಣೆ ಮಾಡಲಾಗುತ್ತದೆ ಎಂದರು. ಪೂಜಾರಿ ಪಾಳ್ಯ ಕೃಷ್ಣಮೂರ್ತಿ, ಕೆಂಚೇಗೌಡ, ಶಾಂತ ಬಾಯಿ ಧನಂಜಯ ನಾಯಕ್, ಚಂದ್ರಶೇಖರ್, ಶಿವಮೂರ್ತಿ, ಕಲ್ಲೂರು ರಂಗನಾಥ್, ಪುಟ್ಟರಾಜು ಯಾದವ್, ಮಾರುತಿ ಯಾದವ್, ಬಾಳೇಗೌಡ, ಅಶ್ವತ್, ರೂಪೇಶ್, ಸಿದ್ದಪ್ಪ, ಪೋಟೋ ಲಕ್ಷ್ಮೀಪತಿ, ಎಂ.ಎಸ್.ರಾಮಯ್ಯ ಆಸ್ಪತ್ರೆ ವೈದ್ಯರು ಅಂಗನವಾಡಿ ಮತ್ತು ಆಶಾ ಕಾರ್ಯಕರ್ತರು, ಗ್ರಾ.ಪಂ. ವಾಟರ್ ಮ್ಯಾನ್ ಸೇರಿದಂತೆ ಇತರರು ಭಾಗವಹಿಸಿದ್ದರು.

ಪರಿಸರ ಸಂರಕ್ಷಣೆ ಅರಿವು ಕಾರ್ಯಕ್ರಮ

• ಉದಯವಾಹಿನಿ, ಕೊಳ್ಳೇಗಾಲ

ವನ್ಯಜೀವಿ ಮತ್ತು ಪರಿಸರ ಸಂರಕ್ಷಣೆ ಮಾಡುವುದು ಪ್ರತಿಯೊಬ್ಬರ ಆದ್ಯ ಕರ್ತವ್ಯ' ಎಂದು ಸಿಐಡಿ ಅರಣ್ಯ ಸಂಚಾರಿ ದಳದ ಪಿಎಸ್‌ಐ ವಿಜಯರಾಜ್ ಹೇಳಿದರು. ನಗರದ ಮುಡಿಗುಂಡದ ಆದರ್ಶ ಶಾಲೆಯಲ್ಲಿ ಸೋಮವಾರ ಸಿಐಡಿ ಪೊಲೀಸ್ ಅರಣ್ಯ ಸಂಚಾರಿ ದಳದ ವತಿಯಿಂದ ಆಯೋಜಿಸಿದ್ದ ವನ್ಯಜೀವಿ ಮತ್ತು ಪರಿಸರ ಸಂರಕ್ಷಣೆ ಅರಿವು ಕಾರ್ಯಕ್ರಮದಲ್ಲಿ ಉದ್ಘಾಟಿಸಿ ಮಾತನಾಡಿದರು.

ವನ್ಯಜೀವಿ ಸಂರಕ್ಷಣಾ ಕಾಯ್ದೆಯ ಅರಿವಿಲ್ಲದೆ ಜನರು ಪ್ರಾಣಿಗಳನ್ನು ಬೇಟೆಯಾಡುವುದು ಕೊಲ್ಲುವುದು ಸೇರಿದಂತೆ ಇನ್ನಿತರ ಕಾನೂನು ಬಾಹಿರ ಚಟುವಟಿಕೆಗಳಲ್ಲಿ ಮುಂದಾಗುತ್ತಿದ್ದಾರೆ. ಅನೇಕರು ಪ್ರಕರಣದಲ್ಲಿ ಸಿಲುಕಿಕೊಳ್ಳುತ್ತಿದ್ದಾರೆ ಎಂದರು. ಇಲ್ಲಿನ ಕೆಲವು ಭಾಗಗಳಲ್ಲಿ ದನಗಳನ್ನು ಕಾಡಿಗೆ ಮೇಯಿಸಲು ಕಳುಹಿಸಿ ಅರಣ್ಯವನ್ನು ನಾಶ ಮಾಡುವುದು, ಅರಣ್ಯ ಸಂಪತ್ತನ್ನು ಲೂಟಿ ಮಾಡುವುದು ನಡೆಯುತ್ತಿದೆ. ತಿಂಗಳ ಹಿಂದೆ ದನ ಮೇಯಿಸುವವರು 5 ಹುಲಿಗೆ ವಿಷ ಹಾಕಿ ಸಾಯಿಸಿರುವ ಘಟನೆ ಎಲಾರಿಗೂ ತಿಳಿದಿದೆ' ಎಂದರು. ಪ್ರತಿಯೊಬ್ಬರೂ ಅರಣ್ಯವನ್ನು ಕಾಪಾಡಬೇಕು ಇಲ್ಲದಿದ್ದರೆ ಮುಂದಿನ ದಿನಗಳಲ್ಲಿ ಪ್ರಕೃತಿ ವಿಕೋಪ ಆಗುವುದರಲ್ಲಿ ಅನುಮಾನವೇ ಇಲ್ಲ. ಕೆಲವು ಮೌಢ್ಯಗಳ ಹೆಸರಲ್ಲಿ ಪ್ರಾಣಿಗಳನ್ನು ಬಳಸಿಕೊಳ್ಳುವುದು, ಕೊಲ್ಲುವುದು ಅಪರಾಧ. ವಿದ್ಯಾರ್ಥಿಗಳು ಈ ಎಲಾದರ ಬಗ್ಗೆ ಅರಿತುಕೊಳ್ಳಬೇಕು' ಎಂದರು.

ತುಂಗಾಭದ್ರಾದಿಂದ ಕುಡಿಯುವ ನೀರು ಪೂರೈಕೆ

ಉದಯವಾಹಿನಿ ಚಿತ್ರ

• ಉದಯವಾಹಿನಿ, ಪಾವಗಡ

ಸೋಲಾರ್ ಪಾರ್ಕ್ ನಿರ್ಮಾಣ, ತುಂಗಾಭದ್ರಾ ಯೋಜನೆಯಿಂದ ಕುಡಿಯುವ ನೀರು ಪೂರೈಕೆಯಿಂದ ಪಾವಗಡ ತಾಲ್ಲೂಕಿನ ಚಿತ್ರಣವೇ ಬದಲಾಗಿದ್ದು. ಅಭಿವೃದ್ಧಿಯಲ್ಲಿ ಮೇಲೇರುತ್ತಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.ಪಾವಗಡದಲ್ಲಿ ಸೋಮವಾರ ತುಂಗಾಭದ್ರಾ ಯೋಜನೆಯಿಂದ ಕುಡಿಯುವ ನೀರು ಪೂರೈಸುವ ಕಾರ್ಯಕ್ಕೆ ಚಾಲನೆ ನೀಡಿ, ವಿವಿಧ ಅಭಿವೃದ್ಧಿ ಕಾರ್ಯಗಳಿಗೆ ಶಂಕುಸ್ಥಾಪನೆ ನೆರವೇರಿಸಿ ಮಾತನಾಡಿದರು. ನಂಜುಂಡಪ್ಪ ವರದಿಯ ಅನ್ವಯ ಪಾವಗಡ ಅತ್ಯಂತ ಹಿಂದುಳಿದ ತಾಲ್ಲೂಕು ಎಂಬ ಹಣೆಪಟ್ಟಿ ಹೊಂದಿತ್ತು. ಸೋಲಾರ್ ಪಾರ್ಕ್, ಕುಡಿಯುವ ನೀರು ಸೇರಿದಂತೆ ಸಾಕಷ್ಟು ಸೌಲಭ್ಯ ಕಲ್ಪಿಸಲಾಗಿದೆ. ಈಗ ಅಭಿವೃದ್ಧಿಯಲ್ಲಿ ಮುನ್ನಡೆ ಕಾಯ್ದುಕೊಂಡಿದೆ. ಇದಕ್ಕೆಲ್ಲ ಕಾಂಗ್ರೇಸ್ ಸರ್ಕಾರ ಕಾರಣ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ಇಷ್ಟೆಲ್ಲ ಅಭಿವೃದ್ಧಿ ಕೆಲಸ ಮಾಡಿರುವ ಕಾಂಗ್ರೇಸ್ ಪಕ್ಷಕ್ಕೆ ತಾಲ್ಲೂಕಿನ ಜನರು ಚಿರರುಣಿಯಾಗಿರಬೇಕು.

ವಿಧಾನಸಭೆ ಚುನಾವಣೆ ಸಮಯದಲ್ಲಿ ಪ್ರಚಾರಕ್ಕೆ ಬಂದಿದ್ದ ಸಮಯದಲ್ಲಿ ನೀರು ಕೊಡುವ ಭರವಸೆ ಕೊಟ್ಟಿದ್ದೆ. ಈಗ ಅದನ್ನು ಈಡೇರಿಸಿದ್ದೇನೆ. ನೀವು ಖುಷಿಪಟ್ಟರೆ, ನಾನು, ಸರ್ಕಾರ ಖುಷಿಯಾಗಿರುತ್ತೇವೆ. ಬಿಜೆಪಿ, ಜೆಡಿಎಸ್‌ನವರ ಬಣ್ಣದ ಮಾತುಗಳಿಗೆ ಬಲಿಯಾಗದೆ ಪಕ್ಷದ ಅಭ್ಯರ್ಥಿ ಪರ ನಿಲ್ಲಬೇಕು. ಮುಂದಿನ ದಿನಗಳಲ್ಲೂ ಕಾಂಗ್ರೇಸ್ ಅಭ್ಯರ್ಥಿಯನ್ನೇ ಬೆಂಬಲಿಸಬೇಕು ಎಂದು ಹೇಳುವ ಮೂಲಕ ಚುನಾವಣೆ ಭಾಷಣಕ್ಕೂ ಮುನ್ನುಡಿ ಬರೆದರು. ಬಿಜೆಪಿ ವಿರುದ್ಧ ವಾಗ್ದಾಳಿ ನಡೆಸಿದ ಅವರು, ಅವರ ಸರ್ಕಾರದ ಅವಧಿಯಲ್ಲಿ ಇಂತಹ ಯಾವುದಾದರೂ ಒಂದು ಯೋಜನೆ ಮಾಡಿದ್ದಾರೆಯೆ ಹಿಂದೆ ಬಿಜೆಪಿಯವರು 9 ವರ್ಷ ಆಡಳಿತ ನಡೆಸಿದ್ದರು. ಬಿ.ಎಸ್.ಯಡಿಯೂರಪ್ಪ, ಬಸವರಾಜ ಬೊಮ್ಮಾಯಿ ಕೊಡುಗೆ ಏನು ನಮ್ಮ ವಿರುದ್ಧ ಟೀಕೆ ಮಾಡಲು, ಸುಳ್ಳು ಹೇಳಲು ನಾಚಿಕೆ ಆಗುವುದಿಲ್ಲವೆ ಎಂದು ಕುಟುಕಿದರು.

ಕಣ್ಣಿಗೆ ಏನಾಗಿದೆ

ಜಿಲ್ಲಾ ಉಸ್ತುವಾರಿ ಸಚಿವ ಜಿ.ಪರಮೇಶ್ವರ, ರಾಜ್ಯದ ಎಲ್ಲಾ ಕ್ಷೇತ್ರಗಳಲ್ಲೂ ಅಭಿವೃದ್ಧಿ ಕೆಲಸಗಳು ನಡೆಯುತ್ತಿದ್ದರೂ ನಿಮ್ಮ ಕಣ್ಣಿಗೆ ಕಾಣಿಸುತ್ತಿಲ್ಲವೆ ನಿಮ್ಮ ಕಣ್ಣಿಗೆ ಏನಾಗಿದೆ. ಕಣ್ಣು ಕಾಣಿಸದಿದ್ದರೆ ವೈದ್ಯರ ಬಳಿ ತೋರಿಸಿಕೊಳ್ಳಿ' ಎಂದು ಬಿಜೆಪಿ ವಿರುದ್ಧ ವಾಗ್ದಾಳಿ ನಡೆಸಿದರು. ಜಲಜೀವನ್ ಮಿಷನ್ ಯೋಜನೆಯಲ್ಲಿ ಕೇಂದ್ರ ಸರ್ಕಾರ ಶೇ 40ರಷ್ಟು ಅನುದಾನ ಕೊಡುತ್ತಿದೆ. ಉಳಿದ ಶೇ 60ರಷ್ಟು ಹಣವನ್ನು ರಾಜ್ಯ ಸರ್ಕಾರ ನೀಡುತ್ತಿದೆ. ಗ್ಯಾರಂಟಿ ಯೋಜನೆ ಅನುಷ್ಠಾನ ಮಾಡಲಾಗುತ್ತಿದೆ. ಎಲ್ಲೆಡೆ ಅಭಿವೃದ್ಧಿ ಕೆಲಸಗಳು ನಡೆಯುತ್ತಿದ್ದರೂ ಟೀಕೆ ಮಾತ್ರ ನಿಂತಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಸಂಘಟನೆಗಳಿಂದ ಸಂವಿಧಾನ ಸಂರಕ್ಷಣಾ ಪಡೆ ರಚನೆ

• ಉದಯವಾಹಿನಿ, ಚಿಕ್ಕನಾಯಕನಹಳ್ಳಿ

ಪಟ್ಟಣದಲ್ಲಿ ಪ್ರಗತಿಪರ ಸಂಘಟನೆಗಳಿಂದ ಸಂವಿಧಾನ ಸಂರಕ್ಷಣಾ ಪಡೆ ರಚನೆ ಹಾಗೂ ದೇವನಹಳ್ಳಿ ರೈತರ ಹೋರಾಟದ ಯಶಸ್ಸಿನ ಹಿನ್ನೆಲೆಯಲ್ಲಿ ವಿಜಯೋತ್ಸವ ಆಚರಣೆ ಮಾಡಲಾಯಿತು.ಜಿಲ್ಲಾ ಸಂಯೋಜಕರಾದ ಎನ್.ಇಂದಿರಮ್ಮ ಮಾತನಾಡಿ, ದೇವನಹಳ್ಳಿ ತಾಲ್ಲೂಕು ಚನ್ನರಾಯಪಟ್ಟಣ ಹೋಬಳಿಯ 13 ಹಳ್ಳಿಗಳ ರೈತರು ನಿರಂತರವಾಗಿ 1,298 ದಿನ ನಡೆಸಿದ ಹೋರಾಟಕ್ಕೆ ಎದ್ದೇಳು ಕರ್ನಾಟಕ ಒಗ್ಗೂಡುವಂತೆ ಮಾಡಿದ್ದು ಪ್ರತಿಫಲ ನೀಡಿದೆ. ಕರ್ನಾಟಕದ ಮಟ್ಟದಲ್ಲಿ ಇದೊಂದು ಐತಿಹಾಸಿಕ ಸಾಧನೆ. ಇದರಿಂದ ಸಂಘಟನೆಯಲ್ಲಿ ಬಲವಿದೆ. ಹೋರಾಟದಲ್ಲಿ ಜಯವಿದೆ ಎಂಬುದು ಸಾಬೀತಾಗಿದೆ. ಆದ್ದರಿಂದ ಎಲಾರೂ ಒಗ್ಗಟ್ಟಾದರೆ ನ್ಯಾಯಯುತ ಬೇಡಿಕೆಗಳನ್ನು ಪಡೆದುಕೊಳ್ಳಬಹುದು ಎಂದು ಪ್ರತಿಪಾದಿಸಿದರು.

ಎದ್ದೇಳು ಕರ್ನಾಟಕ ಸಂಘಟನಕಾರ ರಾಮಕೃಷ್ಣಪ್ಪ ಎದ್ದೇಳು ಕರ್ನಾಟಕದ ಧ್ಯೇಯೋದ್ದೇಶ, ಸಂರಕ್ಷಣಾ ಪಡೆಯ ಅಸ್ತಿತ್ವದ ಅಗತ್ಯವನ್ನು ವಿವರಿಸಿದರು.

ಉದಯವಾಹಿನಿ ಚಿತ್ರ

ಹಿಂದುಳಿದ ವರ್ಗಗಳ, ಅಲೆಮಾರಿ ಮಹಾಸಭಾ ಅಧ್ಯಕ್ಷ ಉಜ್ಜಜ್ಜಿ ರಾಜಣ್ಣ, ಸಂವಿಧಾನ ಜನರನ್ನು ರಕ್ಷಿಸಬೇಕಿತ್ತು. ಆದರೆ ಈಗ ಜನರೇ ಸಂವಿಧಾನವನ್ನು ರಕ್ಷಿಸುವ ಪರಿಸ್ಥಿತಿ ಉಂಟಾಗಿದೆ. ಇದಕ್ಕೆ ಕಾರಣ ಕೋಮುವಾದಿಗಳು ಶ್ರೇಣಿಕೃತ ಸಮಾಜವನ್ನು ರಚಿಸಿ, ಜಾತೀಯತೆಯನ್ನು ಉಳಿಸಿ ತಾವು ಮಾತ್ರ ಶತಮಾನಗಳಿಂದ ಅನುಭವಿಸಿದ ಸುಖ ಸಂತೋಷವನ್ನು ಬಿಟ್ಟು ಕೊಡಲು ತಯಾರಿಲ್ಲ. ಕೆಳ ವರ್ಗದ ದಲಿತ ಮತ್ತು ಶೂದ್ರ ಜಾತಿಗಳ ಜನ ವಿದ್ಯಾವಂತರಾಗಿ ಉನ್ನತ ಹುದ್ದೆಗೆ ಹೋಗಬಾರದೆಂಬ ದುರುದ್ದೇಶದಿಂದ ಜನರಿಗೆ ಕೋಮುವಾದಿ ಅಫೀಮನ್ನು ತುಂಬಿ ದ್ವೇಷ ರಾಜಕಾರಣವನ್ನು ಮಾಡುತ್ತಿದ್ದಾರೆ.

ಸಂವಿಧಾನ ರಕ್ಷಣಾ ಪಡೆ ರಚಿಸಿ ಕೋಮುವಾದಿಗಳ ವಿರುದ್ಧ ಹೋರಾಡಬೇಕಿದೆ' ಎಂದು ಹೇಳಿದರು.

ದೇವನಹಳ್ಳಿ ರೈತರ ಹೋರಾಟದ ಯಶಸ್ಸಿನ ಹಿನ್ನೆಲೆ ವಿಜಯೋತ್ಸವವನ್ನು ಹೋರಾಟಗಾರರಿಗೆ ಹಾಗೂ ಸ್ವಪಕ್ಷದಲ್ಲಿ ವಿರೋಧವಿದ್ದರೂ ಭೂ ಸ್ವಾಧೀನವನ್ನು ಕೈಬಿಟ್ಟ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಅಭಿನಂದನೆ ಸಲ್ಲಿಸಲಾಯಿತು. ಮಾತಂಗ ಮುನಿ ಚಾರಿಟಬಲ್ ಟ್ರಸ್ಟ್‌ನ ಗುರುಮೂರ್ತಿ, ಚಿದಾನಂದ್ ಮೂರ್ತಿ, ಜಾಗೃತ ಕರ್ನಾಟಕದ ದೇವರಾಜು, ಕರವೇ ಗೌರವಧ್ಯಕ್ಷೆ ಮಾಲಾ, ಸೃಜನ ಮಹಿಳಾ ಸಂಘಟನೆಯ ರಾಜಮ್ಮ, ಯುಪಿ ಉಮಾದೇವಿ. ಕೋದಂಡಪ್ಪ, ಶಿಕ್ಷಣಾಧಿತ್ತ ಶಿವಶಂಕರ್, ವದ್ದಿಗಯ್ಯ ಹಾಜರಿದ್ದರು.

ಬಿಜೆಪಿ ಅಧಿಕಾರಕ್ಕೆ ಬಂದರೂ ಅಭಿವೃದ್ಧಿ ಮಾಡಲ್ಲ: ಶಾಸಕ ಟೀಕಾ ಪ್ರಹಾರ

• ಉದಯವಾಹಿನಿ, ಕೋಲಾರ

'ರಾಜ್ಯದಲ್ಲಿ ಜೆಡಿಎಸ್ ಪಕ್ಷವು ಸ್ವತಂತ್ರವಾಗಿ ಯಾವತ್ತಿಗೂ ಅಧಿಕಾರಕ್ಕೆ ಬರಲ್ಲ. ಬಿಜೆಪಿ ಅಧಿಕಾರಕ್ಕೆ ಬಂದರೂ ಯಾವುದೇ ಅಭಿವೃದ್ಧಿ ಕೆಲಸ ಮಾಡಲ್ಲ' ಎಂದು ಶಾಸಕ ಕೊತ್ತೂರು ಮಂಜುನಾಥ್ ಟೀಕಾ ಪ್ರಹಾರ ನಡೆಸಿದರು. ತಾಲ್ಲೂಕಿನ ವೇಮಗಲ್ ಕುರುಗಲ್ ಪಟ್ಟಣ ಪಂಚಾಯಿತಿ ಚುನಾವಣೆ ಸಂಬಂಧಿಸಿದಂತೆ ವಾರ್ಡ್‌ವಾರು ಸಭೆಗಳಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿ ಬಿಜೆಪಿ ಮತ್ತು ಜೆಡಿಎಸ್ ಎರಡೂ ಪಕ್ಷಗಳು ಅಧಿಕಾರ ನಡೆಸಿವೆ. ಅವರನ್ನು ಪ್ರಶ್ನೆ ಮಾಡಿ ಕೇಳಿ ಅವರ ಕೊಡುಗೆ ಏನು ಎಂದು ಅದೇ ರೀತಿಯಲ್ಲಿ ಕಾಂಗ್ರೇಸ್ ಅಧಿಕಾರದಲ್ಲಿ ಏನು ಕೊಟ್ಟಿದೆ ಎಂಬುದನ್ನು ಜನರು ಮತ್ತು ವಿರೋಧ ಪಕ್ಷಗಳ ಬಳಿ ಕೇಳಿ. ರಾಜ್ಯದಲ್ಲಿ ಕಾಂಗ್ರೇಸ್ ಪಕ್ಷದಿಂದ ಮಾತ್ರ ಅಭಿವೃದ್ಧಿ ಸಾಧ್ಯ ಎಂದರು.

'ರಾಜ್ಯದಲ್ಲಿ ಚುನಾವಣೆ ಪೂರ್ವದಲ್ಲಿ ಘೋಷಣೆ ಮಾಡಿದ್ದ ಐದು ಗ್ಯಾರಂಟಿ ಯೋಜನೆಗಳನ್ನು ಯಾವುದ

ಅಂತರಾಳದಿಂದ... EDITORIAL

ಕಾನೂನಿನ ಚೌಕಟ್ಟಿಗೆ ಬಿ ಖಾತಾ: ಪಾರದರ್ಶಕ ಅನುಷ್ಠಾನ ಅಗತ್ಯ

ಗ್ರೇಟರ್ ಬೆಂಗಳೂರು ಪ್ರಾಧಿಕಾರದ (ಜಿಬಿಎ) ವ್ಯಾಪ್ತಿಯಲ್ಲಿ ಇರುವ ಬಿ ಖಾತಾ ಆಸ್ತಿಗಳನ್ನು ಕಾನೂನಿನ ಚೌಕಟ್ಟಿನ ಅಡಿ ತರುವ ರಾಜ್ಯ ಸರ್ಕಾರದ ನಡೆಯು ಪ್ರಗತಿಪರವಾದುದು ಎಂದು ಬಿಂಬಿಸಲಾಗುತ್ತಿದೆ. ಲಕ್ಷಾಂತರ ಸಂಖ್ಯೆಯಲ್ಲಿ ಇರುವ, ಕಾನೂನಿನ ನಿಯಂತ್ರಣಕ್ಕೆ ಒಳಪಟ್ಟಿರದ ಆಸ್ತಿಗಳ ವಿಚಾರದಲ್ಲಿ ಸ್ಪಷ್ಟತೆಯನ್ನು ತರಲು ಹಾಗೂ ಅವುಗಳ ಮೇಲೆ ಆಡಳಿತಾತ್ಮಕ ನಿಯಂತ್ರಣ ಸಾಧಿಸಲು ಇದು ಅಗತ್ಯವಾಗಿದ್ದ ಕ್ರಮ ಎಂದು ಹೇಳಲಾಗುತ್ತಿದೆ.

ಹೀಗೆ ಮಾಡಿದ್ದರಿಂದಾಗಿ ಲಕ್ಷಾಂತರ ಮಂದಿಗೆ ತಾವು ಮಾಡಿರುವ ಆಸ್ತಿ ಖರೀದಿಗಳು ಸಕ್ರಮ ಎಂಬ ಭಾವನೆ ಮೂಡುವಂತೆ ಆಯಿತು. ಈಗ ಗೋಜಲುಗಳನ್ನೆಲ್ಲ ಸರಿಪಡಿಸುವುದಾಗಿ ಸರ್ಕಾರ ಹೇಳಿದೆ. ಈ ಪರಿಷ್ಕರಣೆಯನ್ನು ಬೆಂಗಳೂರಿಗೆ ಸೀಮಿತವಾಗಿ ಮಾಡಲು ಮುಂದಾಗಿದೆ. ಆದರೆ, ಸಂಬಂಧಪಟ್ಟ ಅಧಿಕಾರಿಗಳು ಪಂಚಾಯಿತಿ ವ್ಯಾಪ್ತಿಯಲ್ಲಿ ಅಕ್ರಮವಾಗಿ ನಿರ್ಮಿಸಲು ಅನುವು ಮಾಡಿಕೊಟ್ಟಿರುವ ಬಡಾವಣೆಗಳಲ್ಲಿ ಇರುವ ಲಕ್ಷಾಂತರ ಸಂಖ್ಯೆಯ ಆಸ್ತಿಗಳ ಕತೆ ಏನು ಇಲ್ಲೆಲ್ಲ ಆಸ್ತಿ ಖರೀದಿಸಿದವರ ವಿಚಾರವಾಗಿ ಸರ್ಕಾರವು ತನ್ನ ಜವಾಬ್ದಾರಿಯಿಂದ ನುಣುಚಿಕೊಳ್ಳಬಹುದೇ ಸರ್ಕಾರವು ಈಗ ಪ್ರಸ್ತಾಪಿಸಿರುವ ಕಾನೂನಿನ ಚೌಕಟ್ಟು, ಬೆಂಗಳೂರಿನ ಬಿ-ಖಾತಾ ಆಸ್ತಿಗಳಿಗೆ ಕಾನೂನಿನ ಅಡಿ ಮಾನ್ಯತ ನೀಡುವಂತೆ ಇದೆ. ಇಂತಹ ಆಸ್ತಿಗಳ ಮಾಲೀಕರು ಕಟ್ಟಡ ಯೋಜನೆಗೆ ಅನುಮೋದನೆ ಪಡೆಯಬಹುದು. ಸ್ವಾಧೀನಾನುಭವ ಪ್ರಮಾಣ ಪತ್ರ ಪಡೆಯಬಹುದು. ನಿರ್ದಿಷ್ಟ ಷರತ್ತುಗಳನ್ನು ಪೂರೈಸಿದರೆ ತಮ್ಮ ಆಸ್ತಿಗಳನ್ನು ಎ ಖಾತಾ ಆಗಿ ಪರಿವರ್ತನೆ ಮಾಡಿಕೊಳ್ಳಬಹುದು. ಇದರಿಂದಾಗಿ ಆಸ್ತಿಗಳ ಮಾಲೀಕರಿಗೆ ಬ್ಯಾಂಕ್ ಸಾಲ ಸೌಲಭ್ಯ ಪಡೆಯಲು ಸಾಧ್ಯವಾಗುತ್ತದೆ. ಆಸ್ತಿಯನ್ನು ಬೇರೆಯವರಿಗೆ ವರ್ಗಾವಣೆ ಮಾಡಲು ಆಗುತ್ತದೆ. ಇಂತಹ ಅವಕಾಶಗಳು ಅವರಿಗೆ ಇದುವರೆಗೆ ಇರಲಿಲ್ಲ. ಹೀಗಿದ್ದರೂ ಸರ್ಕಾರದ ಈ ನೀತಿಯು ತೀರಾ ನ್ಯಾಯಸಮ್ಮತವಾಗಿದೆ ಎಂದು ಹೇಳಲಾಗುವುದಿಲ್ಲ. ಜಿಬಿಎ ವ್ಯಾಪ್ತಿಯ ಆಚೆಗಿನ ಆಸ್ತಿಗಳನ್ನು ಪರಿಗಣನೆಗೆ ತೆಗೆದುಕೊಳ್ಳದೆ ಇರುವ ಮೂಲಕ ರಾಜ್ಯ ಸರ್ಕಾರವು ಬೇರೆಡೆಗಳಲ್ಲಿ ಆಸ್ತಿಗಳ ಮೇಲೆ ಸದಾಶಯದೊಂದಿಗೆ ಹೂಡಿಕೆ ಮಾಡಿದ ಮಧ್ಯಮ ವರ್ಗದವರನ್ನು ಶಿಕ್ಷಿಸುವ ಕೆಲಸ ಮಾಡುತ್ತಿದೆ. ಬೇರೆಡೆ ಆಸ್ತಿ ಖರೀದಿಸಿದವರು ಕೂಡ ದಾಖಲೆಗಳಲ್ಲಿ ಇರುವ ಸರ್ಕಾರದ ಮುದ್ರೆಯನ್ನು ಪರಿಗಣಿಸಿ ಅದನ್ನು ನಂಬಿಯೇ ವಹಿವಾಟು ನಡೆಸಿದ್ದರು ಎಂಬುದನ್ನು ಮರೆಯಬಾರದು. ಅಲ್ಲದೆ, ಜೀವನಪರ್ಯಂತ ದುಡಿದು ಉಳಿಸಿದ ಹಣವನ್ನು ಬಳಸಿ ಆಸ್ತಿ ಖರೀದಿಸಿದವರಿಗೆ ಶಿಕ್ಷೆ ನೀಡಿ, ಕಾನೂನು ಉಲ್ಲಂಘನೆಯನ್ನು ಉತ್ತೇಜಿಸಿದ ಅಧಿಕಾರಿಗಳಿಗೆ ಶಿಕ್ಷೆ ಇಲ್ಲ ಎಂದು ಹೇಳುವುದು ನ್ಯಾಯದ ಆಣಕವಲ್ಲವೇ ಸರ್ಕಾರವು ತನ್ನ ಮಾತುಗಳಲ್ಲಿ ಸಕ್ರಮ ಎಂಬ ಪದವನ್ನು ಬಳಕೆ ಮಾಡದೆ ಎಚ್ಚರಿಕೆಯ ನಡೆಯೊಂದನ್ನು ಇರಿಸಿರುವಂತಿದೆ. ಆದರೆ, ಪರಿಣಾಮದಲ್ಲಿ ಸರ್ಕಾರ ಮಾಡುತ್ತಿರುವುದು ಆಯ್ದ ಕೆಲವನ್ನು ಸಕ್ರಮಗೊಳಿಸುವ ಕೆಲಸವನ್ನೇ ನಿರ್ಮಾಣ ಚಟುವಟಿಕೆಗಳಲ್ಲಿ ಶಿಸ್ತನ್ನು ತರುವುದು, ಆಸ್ತಿಗಳನ್ನು ತೆರಿಗೆ ವ್ಯಾಪ್ತಿಗೆ ತರುವುದು ಸರ್ಕಾರದ ಇರಾದೆ ಆಗಿದ್ದರೆ, ರಾಜ್ಯದ ಎಲ್ಲೆಡೆ ಕಂದಾಯ ಜಮೀನಿನಲ್ಲಿ ಇರುವ ಬಡಾವಣೆಗಳಿಗೂ ಇದನ್ನು ವಿಸ್ತರಿಸಬೇಕು. ಅಕ್ರಮ ನಡೆಯುವಲ್ಲಿ ಸರ್ಕಾರದ ಅಧಿಕಾರಿಗಳ ಪಾತ್ರ ಎಲ್ಲೆಲ್ಲಿ ಇನ್ನೋ, ಅಲ್ಲೆಲ್ಲ ಈ ಸೌಲಭ್ಯ ಅನ್ವಯವಾಗಬೇಕು.

ಆಸ್ತಿಯನ್ನು ಖರೀದಿಸಿ, ಕಾನೂನಿಗೆ ಅನುಗುಣವಾಗಿ ಅದನ್ನು ನೋಂದಣಿ ಮಾಡಿಸಿದವರು ಸಂಕಷ್ಟಕ್ಕೆ ಸಿಲುಕಬಾರದು. ಏಕೆಂದರೆ, ತಾನೇ ರೂಪಿಸಿದ ಕಾನೂನನ್ನು ಪಾಲಿಸದ ವ್ಯವಸ್ಥೆಯೊಂದರಿಂದ ತಪ್ಪುದಾರಿಗೆ ಎಳೆಯಲಾದ ನಾಗರಿಕರು ಅವರು. ಸರ್ಕಾರವು ಇಡೀ ಪ್ರಕ್ರಿಯೆಯನ್ನು ಔದಾರ್ಯದ ಕ್ರಮ ಎಂಬ ರೀತಿಯಲ್ಲಿ ಭಾವಿಸಬಾರದು. ಅದರ ಬದಲಿಗೆ, ವ್ಯವಸ್ಥೆಯಲ್ಲಿನ ವೈಫಲ್ಯವನ್ನು ಸರಿಪಡಿಸುವ ಸಾರ್ವಜನಿಕರಲ್ಲಿ ಮತ್ತೆ ವಿಶ್ವಾಸ ಮೂಡಿಸುವ ಕ್ರಮವನ್ನಾಗಿ ಇದನ್ನು ಕಾಣಬೇಕು.

ಹೊಸ ಘೋಷಣೆಯು ಕಾನೂನಿಗೆ ಅನುಗುಣವಾಗಿ, ಪಾರದರ್ಶಕವಾಗಿ ಅನುಷ್ಠಾನಕ್ಕೆ ಬರುವಂತೆ ನೋಡಿಕೊಳ್ಳುವ ಹೊಣೆಯು ಈಗ ಸರ್ಕಾರದ ಮೇಲಿದೆ.

ಆದರೆ, ಇಲ್ಲಿ ಕಟುಸತ್ಯವೊಂದನ್ನು ಹೇಳಬೇಕಾಗಿದೆ: ಬೇರೆ ಬೇರೆ ಪಕ್ಷಗಳ ನೇತೃತ್ವದ ಸರ್ಕಾರಗಳು ತಮ್ಮ ನಿಷ್ಕಿಯತೆಯ ಮೂಲಕ ಹಾಗೂ ಕಾನೂನು ಉಲ್ಲಂಘನೆಯಲ್ಲಿ ಕೈಜೋಡಿಸುವ ಮೂಲಕ ಈ ಗೋಜಲನ್ನು ಸೃಷ್ಟಿಸಿವೆ. ಕಂದಾಯ ಜಮೀನಿನಲ್ಲಿ ಕಟ್ಟಡಗಳು ನಿರ್ಮಾಣ ಆಗುತ್ತಿರುವುದರ ಬಗ್ಗೆ ಅಧಿಕಾರಿಗಳು ಕಣ್ಣುಮುಚ್ಚಿ ಕುಳಿತಿದ್ದರು. ಇಂತಹ ನಿರ್ಮಾಣಗಳಿಗೆ ಹಲವು ಸಂದರ್ಭಗಳಲ್ಲಿ ಸ್ಥಳೀಯ ಆಡಳಿತ ಸಂಸ್ಥೆಗಳ ಒಪ್ಪಿಗೆ ಇತ್ತು ರಾಜಕೀಯ ನಾಯಕರ ಆಶೀರ್ವಾದ ಕೂಡ ಇತ್ತು. ಅಗತ್ಯ ಅನುಮೋದನೆಗಳನ್ನು ಪಡೆದುಕೊಳ್ಳದ ಆಸ್ತಿಗಳನ್ನು ಕೂಡ ನೋಂದಣಿ ಮಾಡಿಸಿಕೊಳ್ಳಲಾಯಿತು. ಅವುಗಳಿಂದ ಮುದ್ರಾಂಕ ಶುಲ್ಕವನ್ನು ಸಂಗ್ರಹಿಸಲಾಯಿತು.

ರಾಮಾಯಣ

ಶ್ರೀರಾಮನು ರಾಜ್ಯಭಾರವನ್ನು ಒಪ್ಪದಿದ್ದುದು

• ಹಿಂದಿನ ಸಂಚಿಕೆಯಿಂದ

101ನೆಯ ಅಧ್ಯಾಯ

ವಿಧವೆಯರಾದ ನಮ್ಮ ತಾಯಂದಿರೂ ಬಂದಿದ್ದಾರೆ. ನೀನು ಯಾವ ಪ್ರಕಾರದಲ್ಲಾದರೂ ರಾಜ್ಯಭಾರವನ್ನು ವಹಿಸಿ ನಮ್ಮನ್ನು ರಕ್ಷಿಸು. ನಾನು ಇಷ್ಟು ಪಥ್ಯಂತ ಹೇಳಿದ ಮಾತುಗಳನ್ನು ಮನಸ್ಸಿಗೆ ತಂದುಕೊಂಡು ರಾಜ್ಯಭಾರವನ್ನು ವಹಿಸಿ ನಿನ್ನನ್ನು ಕಾಣದೆ ದುಃಖಾತಿಶಯದಿಂದ ಚೈತನ್ಯಗುಂದಿರುವ ಮಿತ್ರರನ್ನು ಪರಿಪಾಲಿಸು. ಒಡೆಯನಿಲ್ಲದ ರಾಜ್ಯಕ್ಕೆ ಒಡೆಯನಾಗು. ಸಮಸ್ತ ಭೂಮಂಡಲವು ಚಂದ್ರಮಂಡಲದಿಂದೊಪ್ಪುವ ಶರತ್ಕಾಲದ ರಾತ್ರಿಯಂತೆ ನಾಥನುಳ್ಳದ್ದಾಗಿ ಬೆಳಗಲಿ. ಉತ್ತಮವಾದ ರಾಜ್ಯವನ್ನು ನೀನು ವಹಿಸ ಬೇಕೆಂದು ಈ ಪ್ರಧಾನಿಗಳೆಲ್ಲರೂ ನಾನೂ ನಿನ್ನ ಪಾದಗಳಿಗೆ ನಮಸ್ಕಾರವನ್ನು ಮಾಡಿ ಬೇಡಿಕೊಳ್ಳುತೇವೆ. ನಿನ್ನ ತಮ್ಮನಾಗಿ ಶಿಷ್ಯನಾಗಿ ಊಳಿಗದವನಾದ ನನ್ನ ಮಾತನ್ನು ಅಂಗೀಕರಿಸಿ ನನ್ನ ಮೇಲೆ ಕೃಪೆಯನ್ನು ಮಾಡು, ನಮ್ಮ ಪಿತಾಮಹರ ಕಾಲದಿಂದ ಬಂದ ಸಮಸ್ತ ಪ್ರಧಾನಿಸಮೂಹಸಹಿತವಾದ ಪೂಜ್ಯವಾದ ಭೂಮಂಡಲವನ್ನು ನೀನು ಉಪೇಕ್ಷೆ ಮಾಡಸಲ್ಲದು ಎಂದು ಹೇಳಿ ಕಣ್ಣೀರು ತುಂಬಿ ಕೊಂಡು ಆತನ ಪಾದಗಳಿಗೆ ನಮಸ್ಕಾರವನ್ನು ಮಾಡಿ ನಿಟ್ಟುಸಿರುಬಿಡುತ್ತ ದುಃಖಪಡುತ್ತಿದ್ದನು. ಶ್ರೀರಾಮನು ಆತನನ್ನು ಹಿಡಿದೆತ್ತಿ ಭರತ, ನೀನು ಸತ್ಕುಲಪ್ರಸೂತನು. ಅತಿತೇಜಸ್ವಿಯಾದವನು. ಸತ್ಯಸಂಧನು, ನಿನ್ನಂಥ ಶುದ್ಧಾತ್ಮರು ರಾಜ್ಯಾಧಿಪತ್ಯವನ್ನು ಕುರಿತು ಪಾಪವನ್ನು ಮಾಡುವರೆ! ನಿನ್ನಲ್ಲಿ ಒಂದು ಸಾಸಿವೆಕಾಳಷ್ಟು ಪಾಪವನ್ನಾದರೂ ಕಾಣೆನು. ನೀನು ಅಜ್ಞಾನದಿಂದ ನಿನ್ನ ತಾಯಿಯಾದ ಕೈಕೇಯಾದೇವಿಯನ್ನು ನಿಂದಿಸಬೇಡ. ಲೋಕದಲ್ಲಿ ಹಿರಿಯರಿಗೆ ತಮ್ಮ ಸ್ತ್ರೀಯಲ್ಲಿಯೂ ಪುತ್ರರಲ್ಲಿಯೂ ಶಿಷ್ಯರಲ್ಲಿಯೂ ಸಂಪೂರ್ಣ ಅಧಿಕಾರವುಂಟು. ಅವರು ಇಷ್ಟ ಬಂದಂತೆ ಮಾಡಬಹುದು. ಭರತ ದಶರಥರಾಯನ ವಿಷಯದಲ್ಲಿ, ಲೋಕದಲ್ಲಿ ಹೆಂಡತಿ ಮಕ್ಕಳು ಹೇಗೆ ಇರಬೇಕೆಂದು ಸಾಧುಗಳು ತಿಳಿಸಿರುವರೋ ಹಾಗೆಯೇ ನಾವು ಇದ್ದೇವೆ. ಆದಕಾರಣ ನೀನು ಯಾರನ್ನೂ ಜರಿಯಸಲ್ಲದು. ನಮ್ಮ ತಂದೆಯಾದ ದಶರಥರಾಯನು ನನ್ನನ್ನು ನಾರುಬಟ್ಟೆ ಕೃಷ್ಣಾಜಿನಗಳನ್ನು ಹೊದ್ದು ಜಡೆಗಳನ್ನು ಧರಿಸಿಕೊಂಡು ವನವಾಸವನ್ನು ಮಾಡಲು ಕಟ್ಟು ಮಾಡಿದನು. ತಂದೆಯಂತೆ ತಾಯಿಯೂ ನನಗೆ ಪೂಜ್ಯಳು. ತಾಯಿತಂದೆಗಳು ನನ್ನನ್ನು ವನವಾಸವನ್ನು ಮಾಡಹೇಳಿ ವನಕ್ಕೆ ಕಳುಹಿಸಿದ ಮೇಲೆ ನಾನು ವನವಾಸವನ್ನು ಬಿಟ್ಟು ರಾಜ್ಯಾಧಿಪಕ್ಕವನ್ನು ಹೇಗೆ ಮಾಡುವೆನು ನಿನಗೆ ಆಯೋಧ್ಯಾಪಟ್ಟಣದಲ್ಲಿ ರಾಜ್ಯ ಪರಿಪಾಲನ ಮಾಡಿ ಕೊಂಡಿರುವುದೇ ಧರ್ಮ. ನನಗೆ ದಂಡಕಾರಣ್ಯದಲ್ಲಿ ನಾರುಬಟ್ಟೆಗಳನ್ನುಟ್ಟು ಜಡೆಗಳನ್ನು ಧರಿಸಿ ಕಂದಮೂಲ ಫಲಾಹಾರಗಳನ್ನು ಮಾಡಿಕೊಂಡು ವಾನಪ್ರಸ್ಥಾಶ್ರಮದಲ್ಲಿರುವುದೇ ಧರ್ಮ. ಈ ಕ್ರಮದಲ್ಲಿ ದಶರಥರಾಯನು ನಮ್ಮಿಬ್ಬರಿಗೂ ಕಾರವನ್ನು ನಿಗದಿಮಾಡಿ ಸ್ವರ್ಗಸ್ಥನಾದನು. ನಮಗೆ ದೇವೇಂದ್ರನಿಗೆ ಸಮನಾದ ಮಹಾತ್ಮನಾದ ದಶರಥರಾಯನ ಮಾತೇ ಪ್ರಮಾಣವಲ್ಲದೆ ಮತ್ತೊಂದಲ್ಲ. ಆ ರಾಜನು ಕೊಟ್ಟ ರಾಜ್ಯವನ್ನು ನೀನು ಅನುಭವಿಸು, ಹದಿನಾಲ್ಕು ವರುಷಗಳ ಪರಂತ ದಂಡ

ಮುಂದುವರಿಯುವುದು...

ಕಲಾ ಸಾಹಿತ್ಯ

ಕೃಷ್ಣಪ್ಪ
ಲೇಖಕರು
ಪ್ರಗತಿ ಪರ ಚಿಂತಕ ಹಾಗೂ ವಿಮರ್ಶಕರು

ಲೋಕಮಾನ್ಯ ಬಾಲಗಂಗಾಧರ ತಿಲಕ್ ರವರ 169ನೇ ವರ್ಷದ ಜನ್ಮ ಜಯಂತಿ

• ಉದಯವಾಹಿನಿ, ವಿಶೇಷ

ವಿ. ಸೂ:= ಇಂತಹ ಲೋಕಮಾನ್ಯ ಅನೇಕ ಮಹಾ ಪುರುಷರು ಈ ಪುಣ್ಯಭೂಮಿಯಲ್ಲಿ ಜನಿಸಿ, ಅವರುಗಳು ನೀಡಿರುವ ಕೊಡುಗೆ, ಸಾಧನೆ, ಆದರ್ಶಗಳನ್ನು ಈಗಿನ ಎಲ್ಲಾ ವರ್ಗದ ಜನರು ಅರ್ಥೈಸಿಕೊಂಡು ಕನಿಷ್ಠಪಕ್ಷ ಸಾಧ್ಯವಾದಷ್ಟು ಮಟ್ಟಿಗೆ ಅವರ ಹಾದಿಯಲ್ಲಿ ನಡೆಯುವ ಸಂಕಲ್ಪ ಮಾಡಬಹುದು ಎಂಬುದನ್ನು ಮನಗಂಡು ಈ ಹಿಂದಿನ ತಲೆಮಾರು ಮಹಾನುಭಾವರ ದಾರಿಮಾರ್ಗವನ್ನು ಮೆಲುಕು ಹಾಕಿದ್ದೇನೆ. ಲೋಕಮಾನ್ಯ ಬಾಲಗಂಗಾಧರ ತಿಲಕ್ ರವರು 1856 ಜುಲೈ 23 ರಂದು ಮಹಾರಾಷ್ಟ್ರದ ರತ್ನಗಿರಿಯಲ್ಲಿ ಜನಿಸಿದರು. ತಂದೆ ಗಂಗಾಧರ ತಿಲಕ್, ತಾಯಿ ಪಾರ್ವತಿಬಾಯಿ. ತಿಲಕರದು ಬಡತನದ ಕುಟುಂಬ. ತಂದೆ ಶಾಲಾ ಅಧ್ಯಾಪಕರಾಗಿದ್ದು, ಗಣಿತ ಮತ್ತು ಸಂಸ್ಕೃತ ಇವುಗಳಲ್ಲಿ ಪಂಡಿತರಾಗಿದ್ದರು. ತಂದೆಯು ಮಗನಿಗೆ ಮನೆಯಲ್ಲಿಯೇ ಪಾಠ ಹೇಳಿಕೊಡುತ್ತಿದ್ದರು.

ತಿಲಕರು 1880 ರಲ್ಲಿ ಪದವೀಧರರಾಗಿ ತಮ್ಮ ಕೆಲವು ಮಿತ್ರರೊಂದಿಗೆ ಸೇರಿ ಒಂದು ಶಾಲೆಯನ್ನು ತೆರೆದರು. ದೇಶದ ಮಕ್ಕಳಲ್ಲಿ ಸ್ವರಾಜ್ಯದ ಅರಿವು ಮೂಡಿಸಲು ತಕ್ಕ ಸಾಧನವೆಂದರೆ ಶಿಕ್ಷಣವೊಂದೇ ಎಂದು ಅವರು ಭಾವಿಸಿದ್ದರು.

ತಿಲಕರು ರಾಷ್ಟ್ರಾಭಿಮಾನ ಸ್ವಾತಂತ್ರ್ಯದ ಅಗತ್ಯಗಳನ್ನು ಭಾರತೀಯರಿಗೆ ಮನದಟ್ಟು ಮಾಡಲು ಬ್ರಿಟಿಷರ ಅನ್ಯಾಯ, ದಬ್ಬಾಳಿಕೆಗಳನ್ನು ವಿರೋಧಿಸಲು ಪತ್ರಿಕಾ ಮಾಧ್ಯಮದ ಅಗತ್ಯವನ್ನು ತಿಳಿದು ಕೇಸರಿ ಎಂಬ ಪತ್ರಿಕೆಯನ್ನು ಸ್ಥಾಪಿಸಿ ಅದರ ಮೂಲಕ ಬ್ರಿಟೀಷರ ನ್ಯಾಯ ವಿರೋಧಿ ಧೋರಣೆ ದೌರ್ಜನ್ಯಗಳನ್ನು ನಿರ್ಭಯವಾಗಿ ಖಂಡಿಸಿ ಲೇಖನಗಳನ್ನು ಬರೆದರು.



ಬ್ರಿಟೀಷ್ ಆಳ್ವಿಕೆಯ ವಿರುದ್ಧ ಭಾರತೀಯರು ಧ್ವನಿ ಎತ್ತುವಂತೆ ಮಾಡಿದರು. ಪರಿಣಾಮವಾಗಿ ಬ್ರಿಟೀಷ್ ಸರ್ಕಾರ ತಿಲಕರನ್ನು ಬಂಧಿಸಿ, ಬರ್ಮಾದ ಸೆರೆ ಮನೆಗೆ ಕಳುಹಿಸಿದರು. ಆರು ವರ್ಷಗಳ ಕಾಲ ಅವರು ಕರಿನೀರು ಶಿಕ್ಷೆ ಅನುಭವಿಸಬೇಕಾಯಿತು. ಸೆರೆಮನೆಯಿಂದ ಹಿಂದಿರುಗಿದ ಮೇಲೆ ತಿಲಕರು ಮತ್ತೆ ಸ್ವಾತಂತ್ರ್ಯ ಹೋರಾಟದಲ್ಲಿ ಸಕ್ರಿಯವಾಗಿ ಭಾಗಿಯಾದರು. ತಿಲಕರ ಪ್ರೇರಣೆಯಿಂದ ರಾಷ್ಟ್ರೀಯವಾದಿಗಳೆಲ್ಲರೂ ಒಗ್ಗೂಡಿದರು. ಕಾಂಗ್ರೇಸ್ ಪಕ್ಷದಲ್ಲಿ ತಿಲಕರ ನೇತೃತ್ವದಲ್ಲಿ ತೀವ್ರವಾದಿಗಳ ಪಕ್ಷ ರೂಪಗೊಂಡಿತು. ತಿಲಕರು ಸಮಾಜ ಸುಧಾರಕರಾದ ಡಾ: ಆನಿಬೆಸೆಂಟ್ ರವರ ಸಹಕಾರದೊಂದಿಗೆ 1916 ರಲ್ಲಿ ಹೋಂ ರೂಲ್ ಲೀಗನ್ನು ಪ್ರಾರಂಭಿಸಿದರು. ಅವರು ಹೋಂರೂಲ್ ನ ಉದ್ದೇಶಗಳನ್ನು ಕುರಿತು ಕೇಸರಿ ಪತ್ರಿಕೆಯಲ್ಲಿ ಲೇಖನಗಳನ್ನು ಬರೆದರು. ಹೋಂ ರೂಲ್ ಎಂದರೆ ಒಂದು ಜವಾಬ್ದಾರಿಯುತ ಸರ್ಕಾರ ಆಡಳಿತವನ್ನು ನಿರ್ವಹಿಸುವುದೇ ಆಗಿತ್ತು. ತಿಲಕರು ಸ್ವರಾಜ್ಯ ನನ್ನ ಜನ್ಮಸಿದ್ಧ ಹಕ್ಕು ಅದನ್ನು ನಾನು ಪಡೆದೇ ತೀರುವೆ ಎಂದು ಗರ್ಜಿಸಿದರು. ತಿಲಕರ ಈ ಘರ್ಜನೆ ಬ್ರಿಟಿಷರಲ್ಲಿ ನಡುಕ ಹುಟ್ಟಿಸಿತು. ಈ ಘೋಷಣೆಯಿಂದ ಲಕ್ಷಾಂತರ ಭಾರತೀಯರಲ್ಲಿ ದೇಶಭಕ್ತಿ, ಸ್ವಾತಂತ್ರ್ಯ ಪ್ರೇಮವನ್ನು ಬಡಿದೆಬ್ಬಿಸಿತು. ಜನರಲ್ಲಿ ಹೊಸ ಚೈತನ್ಯ ಹುಟ್ಟಿತು. ಇವರು ಒಬ್ಬ ಕ್ರಿಯಾತ್ಮಕ ವ್ಯಕ್ತಿಯಾಗಿ ಭಾರತದ ಏಕತೆ ಮತ್ತು ಐಕ್ಯತೆಯಲ್ಲಿ ಅವರು ನಂಬಿಕೆ ತಾಳಿದ್ದರು. ಭಾರತೀಯರು ಸ್ವದೇಶದ ವಸ್ತುಗಳನ್ನು ಪ್ರೀತಿಸಬೇಕು ಹಾಗೂ ಅವುಗಳನ್ನೇ ಉಪಯೋಗಿಸಬೇಕು. ವಿದೇಶಿ ವಸ್ತುಗಳನ್ನು ಬಹಿಷ್ಕರಿಸಬೇಕೆಂದು ಆಗ್ರಹಿಸಿದರು.

1918 ರಲ್ಲಿ ದೆಹಲಿಯಲ್ಲಿ ನಡೆದ ಅಖಿಲ ಭಾರತ ಕಾಂಗ್ರೇಸ್ ಅಧಿವೇಶನಕ್ಕೆ ತಿಲಕರು ಅಧ್ಯಕ್ಷರಾಗಿದ್ದರು. ಭಾರತಕ್ಕೆ ಸ್ವಾತಂತ್ರ್ಯ ನೀಡಬೇಕೆಂಬುದನ್ನು ಬ್ರಿಟೀಷ್ ಸರ್ಕಾರಕ್ಕೆ ಮನವರಿಕೆ ಮಾಡಲು ತಂಡವೊಂದು ಇಂಗ್ಲೆಂಡಿಗೆ ತೆರಳಿತು. ತಿಲಕರು ತಂಡದ ಸದಸ್ಯರಾಗಿದ್ದರು. ಬ್ರಿಟೀಷರು ಭಾರತದ ಬೇಡಿಕೆಗೆ ಮನ್ನಣೆ ನೀಡದಿದ್ದರೂ ತಿಲಕರ ವಿಚಾರಧಾರೆ ಆಂಗ್ಲರಿಂದ ಬೆಚ್ಚಿಬೀಳಿಸಿತು. ತಿಲಕರು ಬಹುಭಾಷಾ ಪಂಡಿತರಾಗಿದ್ದರು.

ಅವರು ಫ್ರೆಂಚ್, ಜರ್ಮನಿ, ಪಾಲಿ ಭಾಷೆಗಳನ್ನು ಅಭ್ಯಾಸ ಮಾಡಿದ್ದರು. ತಿಲಕರು ದೊಡ್ಡ ವಿದ್ವಾಂಸರಾಗಿದ್ದು ಸೆರೆಮನೆಯಲ್ಲಿದ್ದಾಗ ಗೀತಾ ರಹಸ್ಯ ಎಂಬ ದಿವ್ಯ ಕೃತಿಯನ್ನು ರಚಿಸಿದರು. ಇದು ಭಗವದ್ಗೀತೆಯ ಮೇಲಿನ ವಿದ್ವತ್ ಪೂರ್ಣ ವ್ಯಾಖ್ಯಾನವಾಗಿದೆ. ಓರಿಯನ್, ದಿ ಟ್ರೂ ಹೋಂಸ್ ಆಫ್ ದಿ ಆರ್ಯನ್ಸ್ ಮೊದಲಾದ ಕೃತಿಗಳನ್ನು ತಿಲಕರು ರಚಿಸಿದ್ದಾರೆ. ತಿಲಕರು ತಮ್ಮ ಸುಸಂಸ್ಕೃತ ಆಚಾರ ವಿಚಾರಗಳಿಂದ ಧೀರೋದಾತ್ತ ಬದುಕಿನಿಂದ ಲೋಕಮಾನ್ಯ ಎಂಬ ಬಿರುದಿಗೆ ಪಾತ್ರರಾದರು. ತಿಲಕರು ಭಾರತದ ಅತ್ಯಂತ ಜನಪ್ರಿಯ ಶ್ರೇಷ್ಠ ರಾಷ್ಟ್ರನಾಯಕರೆನಿಸಿದ್ದರು. ಇಂತಹ ಮಹಾನ್ ನಾಯಕರಾದ ತಿಲಕರು 1920 ಆಗಸ್ಟ್ 01 ರಂದು ಮುಂಬೈಯಲ್ಲಿ ತನ್ನ 64ನೇ ವಯಸ್ಸಿನಲ್ಲಿ ದೈವಾಧೀನರಾದರು. ಮಹಾನ್ ದೇಶಭಕ್ತ ಬಾಲಗಂಗಾಧರ ತಿಲಕ್ ರವರು ಮಾತೃಭೂಮಿಗಾಗಿ ಬಾಳಿದರು ಹಾಗೂ ಮಾತೃಭೂಮಿಗಾಗಿಯೇ ಪ್ರಾಣಾರ್ಪಣೆ ಮಾಡಿ ಚಿರಾಯುವಾಗಿ ಚಿರ ಸ್ಮರಣೀಯರಾಗಿದ್ದಾರೆ. ಇಂದು ಅವರ 169 ನೇ ವರ್ಷದ ಜನ್ಮ ಜಯಂತಿಯ ದಿನ, ಭಾರತೀಯರಾದ ನಾವುಗಳೆಲ್ಲರೂ ಅವರನ್ನು ಸ್ಮರಿಸಿ, ನೆನೆಯುತ್ತಾ ಅವರ ಆದರ್ಶಗಳು ಹಾಗೂ ತತ್ವಸಿದ್ಧಾಂತ ಮಾರ್ಗಗಳು ಇಂದಿನ ಎಲ್ಲಾ ಜನಪ್ರತಿನಿಧಿಗಳಿಗೆ ದಾರಿದೀಪವಾಗಲಿ.

ಕಲಾ ಸಾಹಿತ್ಯ

ವೈ.ಕೆ. ಸಂಧ್ಯಾಶರ್ಮ
ಲೇಖಕರು
ರಂಗಕರ್ಮಿ ಹಾಗೂ ನೃತ್ಯ ನಾಟಕಗಳ ವಿಮರ್ಶಕರು

ನೃತ್ಯರೂಪಕಗಳ ಉತ್ಸವ ನಾಟ್ಯ ಕುಸುಮಾಂಜಲಿ ಅರ್ಪಣೆ

• ಉದಯವಾಹಿನಿ, ವಿಶೇಷ

ನೃತ್ಯಕ್ಷೇತ್ರದಲ್ಲಿ ಬದ್ಧತೆ- ಶಿಸ್ತಿನ ನೃತ್ಯಶಿಕ್ಷಣಕ್ಕೆ ಹೆಸರಾದ ಹಿರಿಯ ನೃತ್ಯಗುರು ವಿದುಷಿ ಗೀತಾ ಶ್ರೀನಾಥ್ ನೇತೃತ್ವದ ಖ್ಯಾತ ನಾಟ್ಯ ಕುಸುಮಾಂಜಲಿ ಸಾಂಸ್ಕೃತಿಕ ವೇದಿಕೆ' ಪ್ರತಿವರ್ಷವೂ ವಿವಿಧ ಉತ್ಸವ- ಕಾರ್ಯಕ್ರಮಗಳನ್ನು ಏರ್ಪಡಿಸಿ, ಉದಯೋನ್ಮುಖ ಪ್ರತಿಭೆಗಳಿಗೆ ವೇದಿಕೆಯನ್ನು ಒದಗಿಸಿ ಪ್ರೋತ್ಸಾಹಿಸುತ್ತ ಬರುತ್ತಿದೆ.

ಸ್ವತಃ ಗುರು ಗೀತಾ ಶ್ರೀನಾಥ್ ಅಸಂಖ್ಯಾತ ನೃತ್ಯ ಕ

ಜಾತಿಯಿಂದ ಹೊರಬನ್ನಿ ಒಂದಾಗಿ ನಾಡು ದೇಶವನ್ನು ಕಟ್ಟೋಣ

ರೈತರಿಗೆ ನೀರಾವರಿ ಸೌಲಭ್ಯ ಒದಗಿಸುವುದು, ಯುವಕರಿಗೆ ಉದ್ಯೋಗ ಸೃಷ್ಟಿಸುವುದು ನಮ್ಮ ಆದ್ಯತೆ

• ಉದಯವಾಹಿನಿ, ಮುದ್ದೇಬಿಹಾಳ

ಬಿಜೆಪಿ ರೈತ ಮೋರ್ಚಾ ರಾಜ್ಯಾಧ್ಯಕ್ಷ, ಮಾಜಿ ಶಾಸಕ ಎ.ಎಸ್. ಪಾಟೀಲ್ ನಡಹಳ್ಳಿ ಅವರು ಮಂಗಳವಾರ ತಮ್ಮ 56ನೇ ಹುಟ್ಟುಹಬ್ಬವನ್ನು ಕಾರ್ಯಕರ್ತರೊಂದಿಗೆ ವಿಶಿಷ್ಟವಾಗಿ ಆಚರಿಸಿಕೊಂಡರು. ಈ ಸಂದರ್ಭದಲ್ಲಿ ಮಾತನಾಡಿದ ಅವರು, ಜಾತಿ ವ್ಯವಸ್ಥೆಯು ದೇಶದ ಪ್ರಗತಿಗೆ ದೊಡ್ಡ ಅಡ್ಡಿಯಾಗಿದ್ದು, ಎಲ್ಲರೂ ಜಾತಿ-ಧರ್ಮಗಳನ್ನು ಬದಿಗಿಟ್ಟು ಒಗ್ಗಟ್ಟಿನಿಂದ ನಾಡು ಕಟ್ಟಲು ಕೈಜೋಡಿಸಬೇಕು ಎಂದು ಕರೆ ನೀಡಿದರು. ತಮ್ಮ ಕ್ಷೇತ್ರದ ಅಭಿವೃದ್ಧಿ ಕುರಿತು ಮಾತನಾಡಿದ ಅವರು, ಮುದ್ದೇಬಿಹಾಳ ಕ್ಷೇತ್ರದಲ್ಲಿ ಅಪಾರ ಸಂಪನ್ಮೂಲಗಳಿದ್ದರೂ, ಅದನ್ನು ಸಮರ್ಪಕವಾಗಿ ಬಳಸಿಕೊಳ್ಳುವ ನಾಯಕನನ್ನು ಆಯ್ಕೆ ಮಾಡಿಲ್ಲ ಎಂದು ವಿಷಾದ ವ್ಯಕ್ತಪಡಿಸಿದರು.

ಕಳಪೆ ಆಡಳಿತದಿಂದಾಗಿ ರೈತರಿಗೆ ಫಸಲ್ ಭೀಮಾ ಯೋಜನೆಯ ಲಾಭ ಸಿಗುತ್ತಿಲ್ಲ, ಬೂದಿಹಾಳ-ಪೀರಾಪೂರ ಏತನೀರಾವರಿ ಯೋಜನೆ ಅರ್ಧಕ್ಕೆ ನಿಂತಿದೆ ಎಂದು ದೂರಿದರು. ನನ್ನ ಅವಧಿಯಲ್ಲಿ ಆರಂಭವಾದ ಅಭಿವೃದ್ಧಿ ಕಾರ್ಯಗಳು ಸ್ಥಗಿತಗೊಂಡಿವೆ. ಅಭಿವೃದ್ಧಿಪರ ನಾಯಕರನ್ನು ಸೋಲಿಸಿ, 25 ವರ್ಷ ನಿದ್ರಿಸುವ, ಸುಳ್ಳು ಹೇಳುವವರನ್ನು ಜನ ಆಯ್ಕೆ ಮಾಡುತ್ತಾರೆ ಎಂದು ಬೇಸರ ವ್ಯಕ್ತಪಡಿಸಿದರು. ಸಚಿವ ಕೃಷ್ಣಬೈರೇಗೌಡರ ಹೇಳಿಕೆಯನ್ನು ಉಲ್ಲೇಖಿಸಿ, ಕೃಷ್ಣಾ ಮೇಲ್ದಂಡೆ ಯೋಜನೆಯ ಭೂಸ್ವಾಧೀನದಲ್ಲಿ 1 ಲಕ್ಷ ಕೋಟಿ ರೂ. ನಷ್ಟವಾಗುತ್ತದೆ ಎಂಬುದು ಹಾಸ್ಯಾಸ್ಪದ ರೈತರ ಭೂಮಿಗೆ ಬೆಲೆ ಕಟ್ಟಲು ಅಥವಾ ಪುನಃ ಸೃಷ್ಟಿಸಲು ಸಾಧ್ಯವಿಲ್ಲ ಎಂದು ನಡಹಳ್ಳಿ ಪ್ರತಿಪಾದಿಸಿದರು.

ಉದಯವಾಹಿನಿ ಚಿತ್ರ

> ತಮ್ಮ ತೋಟದ ಮನೆಯಲ್ಲಿ ಅಭಿಮಾನಿ ಬಳಗ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದ ನಡಹಳ್ಳಿ, ನಾನು ಕೈ ಮುಗಿದು ಕೇಳಿಕೊಳ್ಳುತ್ತೇನೆ, ಜಾತಿ-ಧರ್ಮಗಳಿಂದ ಏನನ್ನೂ ಸಾಧಿಸಲು ಸಾಧ್ಯವಿಲ್ಲ. ನಮ್ಮ ರೈತರಿಗೆ ನೀರಾವರಿ ಸೌಲಭ್ಯ ಒದಗಿಸುವುದು, ಯುವಕರಿಗೆ ಉದ್ಯೋಗ ಸೃಷ್ಟಿಸುವುದು ನಮ್ಮ ಆದ್ಯತೆಯಾಗಬೇಕು.
> – ಎ.ಎಸ್. ಪಾಟೀಲ್ ನಡಹಳ್ಳಿ
> ಬಿಜೆಪಿ ರೈತ ಮೋರ್ಚಾ ರಾಜ್ಯಾಧ್ಯಕ್ಷ

ದೇಶದ ಪ್ರಗತಿಗೆ ಜಾತಿ ಅಡ್ಡಿ

ಶಾಸಕ ನಾಡಗೌಡರಿಗೆ ಸವಾಲು ಹಾಕಿದ ನಡಹಳ್ಳಿ, ನಮ್ಮ ತಾಲ್ಲೂಕಿನಲ್ಲಿ 7 ಗಂಟೆ ವಿದ್ಯುತ್ ಸಿಗುತ್ತದೆ. ನಾಡಗೌಡರು ತಾಲ್ಲೂಕಿನ ಒಂದು ಪಂಚಾಯಿತಿಯಲ್ಲಾದರೂ 12 ಗಂಟೆ ವಿದ್ಯುತ್ ಒದಗಿಸಲಿ. ಅವರಲ್ಲಿ ಇಚ್ಛಾಶಕ್ತಿ ಇಲ್ಲ ಎಂದು ಹೇಳಿದರು. ಈ ಸಂದರ್ಭದಲ್ಲಿ ಎಂ.ಎಸ್. ಪಾಟೀಲ್, ಮುತ್ತು ಪಾಟೀಲ್, ಮನೋಜ್ ಶೆಟ್ಟಿ, ಗಂಗಾಧರಾವ್ ನಾಡಗೌಡ, ಕೆಂಚಪ್ಪ ಬಿರಾದಾರ, ಮಲಕೇಂದ್ರಗೌಡ ಪಾಟೀಲ್, ಬಿ ಪಿ ಕುಲಕರ್ಣಿ, ಪ್ರಭು ಕಡಿಣ ರವಿಕಾಂತ ಬಗಲಿ, ಪ್ರಭುಗೌಡ ಬಿರಾದಾರ, ರಮೇಶ ಬಿದ್ನೂರ, ಸುಮಂಗಲಾ ಕೋಟಿ, ಕೆ ವೈ ಬಿರಾದಾರ, ಹಾಗೂ ಮಹಾದೇವಯ್ಯ ಶಾಸ್ತ್ರೀ ಮಾತನಾಡಿದರು, ಕಾರ್ಯಕ್ರಮದಲ್ಲಿ ನಡಹಳ್ಳಿ ಅಭಿಮಾನಿಗಳು ಬಿಜೆಪಿ ಪಕ್ಷದ ಕಾರ್ಯಕರ್ತರು ಸಾವಿರಾರು ಸಂಖ್ಯೆಯಲ್ಲಿ ಭಾಗವಹಿಸಿದ್ದರು . ಸಂಗಮ್ಮ ದೇವರಳ್ಳಿ ಸ್ವಾಗತಿಸಿದರು, ಡಾ. ವಿರೇಶ ಪಾಟೀಲ್ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಸಂಗಮೇಶ ಶಿವಣಗಿ ಬಳಗ ಮತ್ತು ಚಂದ್ರಶೇಖರ ಪತ್ತಾರ ಪ್ರಾರ್ಥಿಸಿ ಸಂಗೀತ ಸೇವೆ ನೀಡಿದರು. ಸಿದ್ದರಾಜ ಹೋಳಿ ನಿರೂಪಿಸಿ ವಂದಿಸಿದರು.

ಹುಟ್ಟುಹಬ್ಬದ ಸಂಭ್ರಮ ಇದೇ ದಿನ ಹುಟ್ಟುಹಬ್ಬ ಆಚರಿಸಿಕೊಂಡ ಬಿಜೆಪಿ ಕಾರ್ಯಕರ್ತರಾದ ಅಶೋಕ ರಾಠೋಡ, ಚಂದ್ರಶೇಖರ ಗಂಗನಗೌಡರ, ಸಹನಾ ಬಡಿಗೇರ ಮತ್ತು ಸಿದ್ದು ಹಿರೇಮಠ ಅವರೊಂದಿಗೆ ನಡಹಳ್ಳಿ ವೇದಿಕೆ ಹಂಚಿಕೊಂಡು ಕೇಕ್ ಕತ್ತರಿಸುವ ಮೂಲಕ ತಮ್ಮ 56ನೇ ಹುಟ್ಟುಹಬ್ಬವನ್ನು ಆಚರಿಸಿಕೊಂಡರು.

ಕಾರ್ಮಿಕ ಇಲಾಖೆಗಳ ಸೌಲಭ್ಯ ವಿತರಣೆ; ಪೂರ್ವಭಾವಿ ಸಭೆ

• ಉದಯವಾಹಿನಿ ಅರಸೀಕೆರೆ

ಬರುವ 26 ನೇ ತಾರೀಖಿನಂದು ಅರಸೀಕೆರೆ ನಗರಕ್ಕೆ ರಾಜ್ಯದ ಮುಖ್ಯಮಂತ್ರಿಗಳು ಉಪ ಮುಖ್ಯಮಂತ್ರಿಗಳು, ಹಲವಾರು ಸಚಿವರೊಡನೆ ಕಾರ್ಮಿಕ ಇಲಾಖೆಯ ಸಚಿವರಾದ ಸಂತೋಷ್ ಲಾಡ್ ಆಗಮಿಸುತ್ತಿರುವ ಹಿನ್ನೆಲೆಯಲ್ಲಿ ಇಲಾಖೆ ವತಿಯಿಂದ ಅರಸೀಕೆರೆ ತಾಲ್ಲೂಕ್ ಪಂಚಾಯಿತಿ ಸಭಾಂಗಣದ ಆವರಣದಲ್ಲಿ ಕಟ್ಟಡ ಕಾರ್ಮಿಕರು, ಅಸಂಘಟಿತ ಕಾರ್ಮಿಕರ ಸಭೆಯನ್ನು ಕರೆಯಲಾಗಿತ್ತು ಈ ಸಭೆಯನ್ನು ಉದ್ದೇಶಿಸಿ ಮಾತನಾಡಿದ ವಿಭಾಗಿಯ ಸಹಾಯಕ ಕಾರ್ಮಿಕ ಆಯುಕ್ತರಾದ ಸುಭಾಷ್ ಎಮ್ ಆಲದಕಟ್ಟಿಯವರು ಕಾರ್ಮಿಕ ಇಲಾಖೆ ವತಿಯಿಂದ ಕಟ್ಟಡ ಕಾರ್ಮಿಕರು ಅಸಂಘಟಿತ ಕಾರ್ಮಿಕರಿಗೆ ಸಾಂಕೇತಿಕವಾಗಿ ಇಲಾಖೆ ಸವಲತ್ತುಗಳ ವಿತರಣೆಯನ್ನು ಮಾಡಲಾಗುವುದು.

ಮುಖ್ಯಮಂತ್ರಿಗಳ ಕಾರ್ಯಕ್ರಮದ ಹಿನ್ನೆಲೆ

ನಂತರ ಅರಸೀಕೆರೆಯ ಕಾರ್ಮಿಕ ಇಲಾಖೆಯಲ್ಲಿ ಬಂದು ತಮಗೆ ಸಿಗುವಂತ ಸವಲತ್ತುಗಳ ಬಗ್ಗೆ ಮಾಹಿತಿ ಪಡೆದುಕೊಂಡು ಇಲಾಖೆ ಪ್ರಯೋಜನ ಪಡೆದುಕೊಳ್ಳಬೇಕೆಂದರು ಬರುವ ದಿನಗಳಲ್ಲಿ ಇಲಾಖೆಯಿಂದ ಸಿಗುವಂತಹ ಸರ್ಕಾರದ ಸವಲತ್ತುಗಳ ಬಗ್ಗೆ ಕಾರ್ಯಗಾರವನ್ನು ಏರ್ಪಡಿಸಲು ಕ್ರಮ ಕೈಗೊಳ್ಳಲಾಗುವುದು ಎಂದರು. ಸಭೆಯಲ್ಲಿ ಫೋಟೋಗ್ರಾಫರ್, ಅಸೋಸಿಯೇಷನ್. ಟೈಲರ್ ಅಸೋಸಿಯೇಷನ್. ಬೀದಿ ಬದಿ ಕಾರ್ಮಿಕರು ಕಟ್ಟಡ ಕಾರ್ಮಿಕರು ಬಿಡಿ ಕಾರ್ಮಿಕರು .. ಹೀಗೆ ಹಲವಾರು ಸಂಘಗಳ ಸಂಸ್ಥೆಗಳ ಅಸಂಘಟಿತ ಕಾರ್ಮಿಕಗಳ ಮುಖಂಡರು ಕಟ್ಟಡ ಕಾರ್ಮಿಕರ ಸಂಘದ ಮುಖಂಡರು ಉಪಸ್ಥಿತರಿದ್ದರು.

ಜಿಲ್ಲಾ ಕಾರ್ಮಿಕ ಇಲಾಖೆ ಅಧಿಕಾರಿಗಳಾದ ಯಮುನಾ. ಅರಸೀಕೆರೆ ತಾಲ್ಲೂಕ್ ಕಾರ್ಮಿಕ ನಿರೀಕ್ಷಕರಾದ ವೈ ಎಲ್. ಶಶಿಕಲಾ. ಕಾರ್ಮಿಕ ಇಲಾಖೆ ಸಿಬ್ಬಂದಿಗಳಾದ ಅನಿಲ್ ಕುಮಾರ್. ಕಾರ್ಮಿಕ ಬಂದು ನಾಗರಾಜ್ ಹಲವಾರು ಮುಖಂಡರು ಉಪಸ್ಥಿತರಿದ್ದರು.

ಉದಯವಾಹಿನಿ ಚಿತ್ರ

ಕಟ್ಟಡ ಕಾರ್ಮಿಕರ ಮಕ್ಕಳ ವಸತಿ ಶಾಲೆಗೆ ಮಂಜೂರಾಗಿರುವ ಹಬ್ಬನಘಟ್ಟಕಾವಲಿನ ಸರ್ವೆ ನಂಬರ್ 68 ರಲ್ಲಿನ ಜಾಗವನ್ನು ಈ ದಿನ ಶ್ರೀ ಸುಭಾಷ್ ಎಮ್. ಸಹಾಯಕ ಕಾರ್ಮಿಕ ಆಯುಕ್ತರು ಇವರು ಸ್ಥಳ ಪರಿಶೀಲನೆ ನಡೆಸಿದರು.

ಇವರ ಜೊತೆಯಲ್ಲಿ ಶ್ರೀಮತಿ ಯಮನ ಜಿಲ್ಲಾ ಕಾರ್ಮಿಕ ಅಧಿಕಾರಿಗಳು, ಶ್ರೀಮತಿ ಶಶಿಕಲಾ ಅರಸೀಕೆರೆ ತಾಲ್ಲೂಕು ಕಾರ್ಮಿಕ ನಿರೀಕ್ಷಕರು ಹಾಗೂ ಕಟ್ಟಡ ಕಾರ್ಮಿಕರ ಕಲ್ಯಾಣ ಮಂಡಳಿಯ ಸಿಬ್ಬಂದಿ ಅನಿಲ್ ಹಾಜರಿದ್ದರು.

ರಸಗೊಬ್ಬರ ಕೃತಕ ಮುಗ್ಗಟ್ಟು ಸೃಷ್ಟಿಸಿದರೆ ಕ್ರಮ: ತಹಶೀಲ್ದಾರ್

• ಉದಯವಾಹಿನಿ, ಕುರುಗೋಡು

ಪಟ್ಟಣದ ಕೃಷಿ ಪರಿಕರ ಮಾರಾಟಗಾರರ ಅಂಗಡಿಗಳಿಗೆ ದಿಢೀರ್ ಭೇಟಿ ನೀಡಿದ ತಹಶೀಲ್ದಾರ್ ನರಸಪ್ಪ ರಸಗೊಬ್ಬರ, ಬೀಜ ಮತ್ತು ಕ್ರಿಮಿನಾಶಕಗಳ ದಾಸ್ತಾನು ಪರಿಶೀಲಿಸಿದರು. ತುಂಗಭದ್ರಾ ಜಲಾಶಯದಿಂದ ಕಾಲುವೆಗಳಿಗೆ ನೀರು ಹರಿಸಲಾಗಿದೆ. ತಾಲ್ಲೂಕಿನಲ್ಲಿ ಕೃಷಿ ಚಟುವಟಿಕೆಗಳು ಗರಿಗೆದರಿವೆ. ರೈತರಿಗೆ ಬಿತ್ತನೆ ಬೀಜ, ರಸಗೊಬ್ಬರ, ಕ್ರಿಮಿನಾಶಕಗಳ ಅಗತ್ಯವಿದೆ. ರೈತರಿಗೆ ಬೇಕಾಗುವ ಕೃಷಿ ಪರಿಕರಗಳನ್ನು ನಿಗದಿತ ಬೆಲೆಯಲ್ಲಿ ಮಾರಾಟಮಾಡಬೇಕು. ಮಾರುಕಟ್ಟೆಯಲ್ಲಿ ಬೇಡಿಕೆ ಹೆಚ್ಚಿರುವ ರಸಗೊಬ್ಬರ, ಬೀಜ, ಕ್ರಿಮಿನಾಶಕ ಕೃತಕ ಮುಗ್ಗಟ್ಟು ಸೃಷ್ಟಿಸಿದರೆ ಮಾರಾಟ ಪರವಾನಗಿ ರದ್ದುಗೊಳಿಸಿ ಕಾನೂನು ಕ್ರಮಕೈಗೊಳ್ಳಲಾಗುವುದು ಎಂದು ಎಚ್ಚರಿಸಿದರು.

ಸಹಾಯಕ ಕೃಷಿ ನಿರ್ದೇಶಕ ಕೆ.ಗರ್ಜಪ್ಪ ಮಾತನಾಡಿ, ಕಳೆದ ವರ್ಷಕ್ಕೆ ಹೋಲಿಸಿದರೆ ಈ ವರ್ಷ ತಾಲ್ಲೂಕಿನ ರೈತರು ಮೆಣಸಿನಕಾಯಿ ಬದಲು ಮೆಕ್ಕೆಜೋಳ ಬೆಳೆಯತ್ತ ವಾಲಿದ್ದಾರೆ ಎಂದರು. ಯೂರಿಯಾ ರಸಗೊಬ್ಬರಕ್ಕೆ ಹೆಚ್ಚು ಬೇಡಿಕೆ ಇದೆ. ಯೂರಿಯಾ ರಸಗೊಬ್ಬರದ ಸಣ್ಣ ಮತ್ತು ದಪ್ಪನೆಯ ಹರಳಿನಲ್ಲಿ ಯಾವುದೇ ಸಾರಜನಕ ಅಂಶದ ವ್ಯತ್ಯಾಸ ಇರುವುದಿಲ್ಲ. ಎರಡರಲ್ಲಿಯೂ ಶೇ 46ರಷ್ಟು ಪ್ರಮಾಣದಲ್ಲಿ ಸಾರಜನಕವಿರುತ್ತದೆ. ರೈತರು ಗೊಂದಲಕ್ಕೀಡಾಗುವುದು ಬೇಡ. ಸದ್ಯ ತಾಲ್ಲೂಕಿನಲ್ಲಿ ಯೂರಿಯಾ ರಸಗೊಬ್ಬರ ಅಭಾವವಿಲ್ಲ ಎಂದು ಸಲಹೆ ನೀಡಿದರು.

ಉದಯವಾಹಿನಿ ಚಿತ್ರ

> ಕೃಷಿ ಪರಿಕರಗಳ ಮಾರಾಟಗಾರರು ಕಡ್ಡಾಯವಾಗಿ ಬೀಜ ರಸಗೊಬ್ಬರ ಮತ್ತು ಕ್ರಿಮಿನಶಕದ ದಾಸ್ತಾನು ಮಾಹಿತಿಯಲ್ಲಿ ಫಲಕದಲ್ಲಿ ನಮೂದಿಸಬೇಕು.
> -ನರಸಪ್ಪ ತಹಶೀಲ್ದಾರ್

ವಿದ್ಯಾರ್ಥಿನಿಗೆ ಲೈಂಗಿಕ ಕಿರುಕುಳ ಆರೋಪ

• ಉದಯವಾಹಿನಿ, ವಿಜಯಪುರ

ರಾಣಿ ಚನ್ನಮ್ಮ ವಿಶ್ವವಿದ್ಯಾಲಯದದ ವಿಜಯಪುರ ಸ್ನಾತಕೋತ್ತರ ಕೇಂದ್ರದ ಇತಿಹಾಸ ವಿಭಾಗದ ಮುಖ್ಯಸ್ಥ ಪ್ರೊ.ಕೆ.ಎಲ್. ಎನ್. ಮೂರ್ತಿ ಅವರನ್ನು ಅಮಾನತುಗೊಳಿಸಲಾಗಿದೆ. ಸಂಶೋಧನಾ ವಿದ್ಯಾರ್ಥಿನಿಯೊಬ್ಬರಿಗೆ ಲೈಂಗಿಕ, ಮಾನಸಿಕ ಕಿರುಕುಳ ನೀಡಿದ ಆರೋಪದ ಮೇಲೆ ಅವರ ವಿರುದ್ಧದ ಪ್ರಾಥಮಿಕ ಸಾಕ್ಷ್ಯಗಳು ನಿಜವೆಂದು ಕಂಡುಬಂದಿದೆ.

ಪ್ರೊ. ಮೂರ್ತಿ ತನಗೆ ಮಾನಸಿಕ, ಲೈಂಗಿಕ ಕಿರುಕುಳ ನೀಡುತ್ತಿದ್ದಾರೆ ಎಂದು ಸಂಶೋಧನಾ ವಿದ್ಯಾರ್ಥಿನಿಯೊಬ್ಬರು 2024ರ ನವೆಂಬರ್ 4 ರಂದು ಕುಲಪತಿ ಮತ್ತು ಕುಲಸಚಿವರ ಮುಂದೆ ಮೌಖಿಕ ದೂರು ನೀಡಿದ್ದರು. ಲಿಖಿತ ದೂರು ಮತ್ತು ಸಾಕ್ಷ್ಯಗಳನ್ನು ಸಲ್ಲಿಸಲು ಅವರಿಗೆ ಏಳು ದಿನಗಳ ಕಾಲಾವಕಾಶ ನೀಡಲಾಗಿತ್ತು.

ದೂರುದಾರರು ಕೈಬರಹದ ದೂರು ನೀಡಿ ರಿಜಿಸ್ಟ್ರಾರ್ ಮುಂದೆ ಸಾಕ್ಷ್ಯಗಳನ್ನು ಹಾಜರುಪಡಿಸಿದ್ದರು.

ವಿಶ್ವವಿದ್ಯಾಲಯದ ಆಂತರಿಕ ಕುಂದುಕೊರತೆ ಪರಿಹಾರ ಸಮಿತಿಯು ಸಂಶೋಧನಾ ವಿದ್ಯಾರ್ಥಿನಿ ನೀಡಿದ ದೂರಿನ ವಿಚಾರಣೆ ನಡೆಸಿ ಜುಲೈ 14 ರಂದು ರಿಜಿಸ್ಟ್ರಾರ್‌ಗೆ ವರದಿ ಸಲ್ಲಿಸಿತು. ವರದಿಯಲ್ಲಿ, ಪ್ರೊ. ಮೂರ್ತಿ ತಮ್ಮ ಹುದ್ದೆಯನ್ನು ದುರುಪಯೋಗಪಡಿಸಿಕೊಂಡಿರುವುದು ಹಾಗೂ ಸಂಶೋಧನಾ ವಿದ್ಯಾರ್ಥಿನಿಯ ಮೇಲಿನ ಲೈಂಗಿಕ, ಮಾನಸಿಕ ಕಿರುಕುಳದ ಆರೋಪಗಳು ಮೇಲ್ನೋಟಕ್ಕೆ ನಿಜವೆಂದು ಕಂಡುಬಂದ ಕಾರಣ, ರಿಜಿಸ್ಟ್ರಾರ್ ಸಂತೋಷ್ ಕಾಮಗೌಡ ಅವರು ಪ್ರೊಫೆಸರ್ ಮೂರ್ತಿ ಅವರನ್ನು ಅಮಾನತುಗೊಳಿಸಿದ್ದಾರೆ.

ಸಕ್ಷಮ ಪ್ರಾಧಿಕಾರದ ಅನುಮತಿಯೊಂದಿಗೆ ಅಮಾನತು ಅವಧಿಯಲ್ಲಿ ಮೂರ್ತಿ ಅವರನ್ನು ಪ್ರಧಾನ ಕಚೇರಿಯಿಂದ ಹೊರಹೋಗದಂತೆ ಸೂಚಿಸಲಾಗಿದೆ.

ಉದಯವಾಹಿನಿ ಚಿತ್ರ

ಶಿಕ್ಷಣದಲ್ಲಿ ಸಂಸ್ಕಾರ ಬಿತ್ತನೆ ಅಗತ್ಯ: ಸಂಗಮೇಶ್ವರ ಬಬಲೇಶ್ವರ

• ಉದಯವಾಹಿನಿ, ಮುದ್ದೇಬಿಹಾಳ

ಸಾಮಾನ್ಯ ಕಾನೂನಿನ ಅರಿವು ಹದಿಹರೆಯದ ಮಕ್ಕಳ ಪಠ್ಯಕ್ರಮದಲ್ಲಿ ಅಳವಡಿಕೆಗೊಂಡಾಗ ಮಾತ್ರ ದೇಶದಲ್ಲಿ ನಿಜವಾದ ಬದಲಾವಣೆ ಸಾಧ್ಯ, ಎಂದು ಕರ್ನಾಟಕ ಸರ್ಕಾರದ ಬಾಲವಿಕಾಸ ಅಕಾಡೆಮಿಯ ಅಧ್ಯಕ್ಷರಾದ ಸಂಗಮೇಶ್ವರ ಬಬಲೇಶ್ವರ ಹೇಳಿದರು. ಪಟ್ಟಣದ ಜ್ಞಾನ ಭಾರತಿ ವಿದ್ಯಾ ಮಂದಿರ ಸಮೂಹ ವಿದ್ಯಾ ಸಂಸ್ಥೆಯಲ್ಲಿ ಜುಲೈ 21ರಂದು ನಡೆದ ವಿದ್ಯಾ ಭಾರತಿ ಕರ್ನಾಟಕ ವಿಜಯಪುರ ಜಿಲ್ಲಾ ಸಂಕುಲಗಳ 2025-26ನೇ ಶೈಕ್ಷಣಿಕ ಸಮ್ಮಿಲನ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಸಂಸ್ಕಾರದ ಆಯ್ಕೆಯಲ್ಲಿಯೇ ಬದುಕಿನ ಉಸಿರು ಅಡಗಿರುವುದಾಗಿ ಅವರು ಅಭಿಪ್ರಾಯಪಟ್ಟರು. ತಾಯಿ, ರೈತ, ಶಿಕ್ಷಕರಿಗೆ ಜಾತಿ-ಬೇಧ ಎಂಬುದು ಅಸ್ತಿತ್ವವಿಲ್ಲ. ಸಮಾಜದ ಅನಿಷ್ಠ ಪದ್ಧತಿಗಳನ್ನು ನಿವಾರಿಸಲು ವಿದ್ಯಾರ್ಥಿಗಳು ಸಜಾಗರಾಗಬೇಕು, ಎಂದರು. ಆರ್‌ಎಸ್‌ಎಸ್ ಪ್ರಾಂತ ಕಾರ್ಯಕಾರಿಣಿ ಸದಸ್ಯರು ನಾಗೇಶ ಚಿನ್ನಾರೆಡ್ಡಿ ಪಂಚ ಪರಿವರ್ತನೆ ವಿಷಯದ ಮೇಲೆ ಉಪನ್ಯಾಸ ನೀಡುತ್ತಾ, ಅಪ್ರಜ್ಞೆಯಿಂದ ಬದುಕಬಾರದು. ಪೂರ್ವಜರು ಪರಿಸರವನ್ನು ದೇವರ ರೂಪದಲ್ಲಿ ಪೂಜಿಸುತ್ತಿದ್ದರು. ಪ್ರಕೃತಿಯ ಋಣ ತೀರಿಸಲಾಗದು, ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾ ಅಧ್ಯಕ್ಷ ಪ್ರಭು ಕಡಿ, ಪ್ರಾಂತ ಕಾರ್ಯದರ್ಶಿ ವಸಂತ ಮಾಧವ, ಸಂಸ್ಥೆಯ ಅಧ್ಯಕ್ಷ ಬಿ.ಪಿ. ಕುಲಕರ್ಣಿ, ಉಪಾಧ್ಯಕ್ಷ ಚಂದ್ರಶೇಖರ ಕವಟಗಿ, ಕರ್ನಾಟಕ ಬ್ಯಾಂಕ್ ನಿರ್ದೇಶಕ ಸತೀಶ ಒಸ್ವಾಲ್, ವೈದ್ಯಕೀಯ ತಜ್ಞ ಡಾ. ಎಸ್.ಬಿ. ವಡವಡಗಿ ಸೇರಿದಂತೆ ಹಲವರು ಭಾಗವಹಿಸಿದರು. ಜಿಲ್ಲಾ ಮಟ್ಟದ 27 ಶಾಲೆಗಳ ವಿದ್ಯಾರ್ಥಿಗಳು, ಸಿಬ್ಬಂದಿಗಳು ಈ ಶೈಕ್ಷಣಿಕ ಮಹಾಸಮ್ಮೇಳನದಲ್ಲಿ ಸಕ್ರಿಯವಾಗಿ ಪಾಲ್ಗೊಂಡಿದ್ದರು.

ವಿದ್ಯಾ ಭಾರತಿ ಜಿಲ್ಲಾ ಶೈಕ್ಷಣಿಕ ಸಮ್ಮಿಲನ

ಉದಯವಾಹಿನಿ ಚಿತ್ರ

> ವಿದ್ಯಾ ಭಾರತಿ ಭಾರತೀಯ ಚಿಂತನೆಗಳನ್ನು ಎತ್ತಿಹಿಡಿಯುವ ಕಾರ್ಯ ಮಾಡುತ್ತಿದೆ. ವಿದ್ಯಾರ್ಥಿಗಳ ಅಭಿವೃದ್ಧಿಗೆ ಶಿಕ್ಷಕರು ತ್ಯಾಗಕ್ಕೆ ಸಿದ್ಧರಾಗಬೇಕು. ಮಕ್ಕಳು ದೇಶದ ಭವಿಷ್ಯದ ರತ್ನಗಳು.
> – ಬಿ.ಎಸ್. ಸಾವಳಗಿ
> ಕ್ಷೇತ್ರ ಶಿಕ್ಷಣಾಧಿಕಾರಿ

ಸಾಲೋಟಗಿ ಗಾಡಿ ರಸ್ತೆ ಒತ್ತುವರಿ: ತೆರವುಗೊಳಿಸಲು ಸಾರ್ವಜನಿಕರ ಆಗ್ರಹ

• ಉದಯವಾಹಿನಿ, ಇಂಡಿ

ಪಟ್ಟಣದ ಇಂಡಿ -ಸಾಲೋಟಗಿ ಗ್ರಾಮದ ಹಳೆಯ ಗಾಡಿ ರಸ್ತೆಯನ್ನು ಮಿನಿವಿಧಾನ ಸೌಧದಿಂದ ಗಣಪತಿ ಗುಡಿವರೆಗೆ ಸುಮಾರು 100 ಮೀಟರ್ ರಸ್ತೆ ಒತ್ತುವರಿ ವಿವಾದ ಹಲವು ವರ್ಷಗಳಿಂದ ಬಗೆಹರಿಯದೇ ಸಾರ್ವಜನಿಕ ಸಂಚಾರಕ್ಕೆ ತೊಂದರೆಯಾಗಿದೆ. ಒತ್ತುವರಿ ಜಾಗವನ್ನು ಈಗಾಗಲೇ ಪೊಲೀಸ್ ಇಲಾಖೆ ತೆರವುಗೊಳಿಸಿದೆ. ಆದರೆ, ರಸ್ತೆಯ ಅಕ್ಕಪಕ್ಕದ ನಿವಾಸಿಗಳು ಮಾಡಿರುವ ಒತ್ತುವರಿ ತೆರವಾಗದೇ ಇರುವುದು ಸಾರ್ವಜನಿಕರ ಆಕ್ರೋಶಕ್ಕೆ ಕಾರಣವಾಗಿದೆ. ಒತ್ತುವರಿ ತೆರವಿಗೆ ಆಗ್ರಹಿಸಿ ಕಳೆದ 16 ವರ್ಷಗಳಿಂದ ಪುರಸಭೆಗೆ, ತಾಲ್ಲೂಕು ಆಡಳಿತಕ್ಕೆ, ಲೋಕಾಯುಕ್ತ ಇಲಾಖೆಗೆ ಸಾರ್ವಜನಿಕರು ಮನವಿ ಪತ್ರ ಸಲ್ಲಿಸಿದರೂ ಇಲ್ಲಿಯವರೆಗೆ ಯಾವುದೇ ಕ್ರಮ ಆಗಿಲ್ಲ.

ಒತ್ತುವರಿಯಾಗಿರುವ ಈ ರಸ್ತೆಯ ಮೇಲೆ ಕಂಪೌಂಡ್ ಗೋಡೆಯ ಕಲ್ಲು, ಮಣ್ಣು ಮತ್ತು ಮತ್ತೊಂದು ಬದಿಗೆ ಬೆಳೆದಿರುವ ಮುಳ್ಳಿನ ಕಂಟಿ ರಸ್ತೆಯ ಮೇಲೆ ಬಿದ್ದು, ಅಲ್ಲಿದ್ದ ಹಳೆಯ ಗಟಾರ ಮುಚ್ಚಿಕೊಂಡು ಗಟಾರದ ಕೊಳಚೆ ನೀರು ಮುಂದೆ ಸಾಗದೇ ಅಕ್ಕಪಕ್ಕದವರ ಮನೆ ಸೇರುತ್ತಿದೆ.

ಕೊಳಚೆ ನೀರು ಗಬ್ಬು ವಾಸನೆ ಬೀರಿದ್ದಲ್ಲದೇ ಕಚ್ಚುವ ಹುಳಗಳು ಹುಟ್ಟಿಕೊಂಡಿವೆ. ಸಾರ್ವಜನಿಕರು ತಮ್ಮ ಮನೆಗಳಲ್ಲಿ ವಾಸ ಮಾಡಲು ಕಷ್ಟವಾಗುತ್ತಿದೆ. ಈ ರಸ್ತೆಯ ಮುಂದಿನ ಕೆಲಸಕ್ಕೆ ಅಧಿಕಾರಿಗಳು ಕ್ರಮ ಜರುಗಿಸುತ್ತಿಲ್ಲ ಎಂದು ಸಾರ್ವಜನಿಕರು ಆರೋಪಿಸುತ್ತಿದ್ದಾರೆ.

ಈ ರಸ್ತೆಯನ್ನು ತೆರವು ಮಾಡಿಸಿಕೊಟ್ಟರೆ ರಸ್ತೆ ಅಭಿವೃದ್ಧಿ ಮಾಡಿಕೊಡುವದಾಗಿ ಸ್ಥಳೀಯ ಪುರಸಭೆ ಹಲವಾರು ಸಲ ಠರಾವು ಪಾಸು ಮಾಡಿದೆ. ಆದರೂ ಕೂಡಾ ಈ

ದಿನ ಭವಿಷ್ಯ

ರಾಹುಕಾಲ	ಮಧ್ಯಾಹ್ನ	12:00 ರಿಂದ 01:30
ಗುಳಿಕ ಕಾಲ	ಬೆಳಿಗ್ಗೆ	10:30 ರಿಂದ 12:00
ಯಮಗಂಡ ಕಾಲ	ಬೆಳಿಗ್ಗೆ	07:30 ರಿಂದ 09:00

ಮೇಷ ಇಂದು ನಿಮ್ಮ ವಿಶ್ವಾಸ ಬೆಳೆಯುತ್ತದೆ ಮತ್ತು ಪ್ರಗತಿ ನಿಶ್ಚಿತವಾಗಿದೆ. ನಿಮ್ಮ ತಂದೆಯ ಯಾವುದೇ ಸಲಹೆ ಇಂದು ಕೆಲಸದ ಸ್ಥಳದಲ್ಲಿ ಇಂದು ನಿಮಗೆ ಹಣದ ಪ್ರಯೋಜನವನ್ನು ನೀಡುತ್ತದೆ. ಒಂದು ಧಾರ್ಮಿಕ ಸ್ಥಳಕ್ಕೆ ಭೇಟಿ ಅಥವಾ ಒಂದು ಸಂತನಂಥ ವ್ಯಕ್ತಿ ಸಾಂತ್ವನ ಮತ್ತು ಮನಸ್ಸಿನ ಶಾಂತಿ ತರುತ್ತಾರೆ.

ವೃಷಭ ಧ್ಯಾನ ಪರಿಹಾರ ತರುತ್ತದೆ. ಹೊಸ ಒಪ್ಪಂದಗಳು ಲಾಭದಾಯಕವೆಂದು ಕಂಡರೂ ಬಯಸಿದ ಲಾಭ ತರುವುದಿಲ್ಲ. ಹಣವನ್ನು ಹೂಡುವ ಪ್ರಶ್ನೆ ಬಂದಾಗ ಆತುರದ ನಿರ್ಧಾರಗಳನ್ನು ಮಾಡಬೇಡಿ. ಒಬ್ಬ ಹತ್ತಿರದ ಸಂಬಂಧಿಗೆ ಹೆಚ್ಚು ಗಮನ ನೀಡ ಬೇಕಾಗಬಹುದಾದರೂ ಅವರು ಬೆಂಬಲ, ಆರೈಕೆ ನೀಡಬಹುದು.

ಮಿಥುನ ನಿಮ್ಮ ದೈಹಿಕ ರಚನೆಯನ್ನು ಕಾಯ್ದುಕೊಳ್ಳಲು ನೆರವಾಗುವ ಕೆಲವು ಕ್ರೀಡಾ ಚಟುವಟಿಕೆಗಳನ್ನು ನೀವು ಇಂದು ಆನಂದಿಸಬಹುದು. ವ್ಯಾಪಾರಿಗಳಿಗೆ ಇಂದು ವ್ಯಾಪಾರದಲ್ಲಿ ಹಾನಿ ಉಂಟಾಗಬಹುದು, ತಮ್ಮ ವ್ಯಾಪಾರವನ್ನು ಉತ್ತಮಗೊಳಿಸಲು ನೀವು ಹಣವನ್ನು ಖಾರುಚು ಮಾಡಬೇಕಾಗುತ್ತದೆ.

ಕರ್ಕಾಟಕ ದೈಹಿಕ ಅನಾರೋಗ್ಯದಿಂದ ಚೇತರಿಸಿಕೊಳ್ಳುವ ಸಾಧ್ಯತೆಗಳಿವೆ. ವಿಳಂಬಿತ ಪಾವತಿಗಳನ್ನು ಮಾಡುತ್ತಿದ್ದ ಹಾಗೆ ಹಣದ ಪರಿಸ್ಥಿತಿ ಸುಧಾರಿಸುತ್ತದೆ. ಮನೆಯ ಕೆಲಸ ಸುಸ್ತು ಮಾಡುತ್ತದೆ ಮತ್ತು ನಿಮ್ಮನ್ನು ಮಾನಸಿಕ ಒತ್ತಡದಲ್ಲಿರಿಸುತ್ತದೆ. ಪ್ರಣಯ ಸಂತೋಷಕರವೂ ಮತ್ತು ಅದ್ಭುತವೂ ಆಗಬಹುದು.

ಸಿಂಹ ಇಂದಿನ ಮನರಂಜನೆ ಕ್ರೀಡಾ ಚಟುವಟಿಕೆಗಳು, ಹೊರಾಂಗಣ ಕಾರ್ಯಕ್ರಮಗಳನ್ನು ಒಳಗೊಂಡಿರಬೇಕು. ಆರ್ಥಿಕ ಭಾಗವು ಬಲಗೊಳ್ಳುವ ಪೂರ್ಣ ಸಾಧ್ಯತೆ ಇದೆ. ನೀವು ಯಾವುದೇ ವ್ಯಕ್ತಿಗೆ ಸಾಲ ನೀಡಿದ್ದರೆ, ಇಂದು ನೀವು ಆ ಹಣವನ್ನು ಮರಳಿ ಪಡೆಯುವ ನಿರೀಕ್ಷೆಯಿದೆ ನಿಮ್ಮ ಪ್ರೀತಿಪಾತ್ರರು ಸಂತೋಷದಿಂದಿರುತ್ತಾರೆ.

ಕನ್ಯಾ ಬಿಡುವಿರದ ಕಾರ್ಯಕ್ರಮದ ಹೊರತಾಗಿಯೂ ಆರೋಗ್ಯ ಚೆನ್ನಾಗಿರುತ್ತದೆ. ನೀವು ಜೀವನದಲ್ಲಿ ಹಣದ ಪ್ರಾಮುಖ್ಯತೆಯನ್ನು ಅರ್ಥಮಾಡಿಕೊಳ್ಳುವುದಿಲ್ಲ ಆದರೆ ಇಂದು ನೀವು ಹಣದ ಮೌಲ್ಯವನ್ನು ಅರ್ಥಮಾಡಿಕೊಳ್ಳಬಹುದು ಏಕೆಂದರೆ ಇಂದು ನಿಮಗೆ ಹಣದ ಅಗತ್ಯವಿರುತ್ತದೆ.

ತುಲಾ ನಿಮ್ಮ ಅಪಾರ ವಿಶ್ವಾಸ, ಸುಲಭದ ಕೆಲಸದ ವೇಳಾಪಟ್ಟಿ ಇಂದು ವಿಶ್ರಾಂತಿಗೆ ಸಾಕಷ್ಟು ಸಮಯ ನೀಡುತ್ತದೆ. ಪ್ರಾಚೀನ ವಸ್ತುಗಳು ಮತ್ತು ಆಭರಣಗಳಲ್ಲಿ ಹೂಡಿಕೆ ಲಾಭ ಮತ್ತು ಸಮೃದ್ಧಿ ತರುತ್ತದೆ. ನೀವು ಹೆಚ್ಚೇನೂ ಮಾಡದೇ ಇತರರ ಗಮನ ಸೆಳೆಯಲು ಇದೊಂದು ಪರಿಪೂರ್ಣ ದಿನ.

ವೃಶ್ಚಿಕ ಪ್ರಯಾಣ ನಿಮಗೆ ದಣಿವಾಗಿಸುತ್ತದೆ ಇಂದು ನೀವು ಸುಲಭವಾಗಿ ಬಂಡವಾಳ ಪಡೆಯಬಹುದು ಬಾಕಿಯಿರುವ ಸಾಲಗಳನ್ನು ಸಂಗ್ರಹಿಸಬಹುದು, ಹೊಸ ಯೋಜನೆಗಳಿಗೆ ಕೆಲಸ ಮಾಡಲು ಹಣ ಕೇಳಬಹುದು. ಒಂದು ಮಂಕು ಕವಿದ, ನಿಧಾನ ದಿನದಲ್ಲಿ ಸ್ನೇಹಿತರು, ಸಂಗಾತಿ ನಿಮಗೆ ಆರಾಮ, ಸಂತೋಷ ತರುತ್ತಾರೆ.

ಧನಸ್ಸು ಧೂಮಪಾನ ತ್ಯಜಿಸುವುದು ನೀವು ದೈಹಿಕವಾಗಿ ಆರೋಗ್ಯವಾಗಿ ಉಳಿಯಲು ಸಹಾಯ ಮಾಡುತ್ತದೆ. ಸಹೋದರ–ಸಹೋದರಿಯರ ಸಹಾಯದಿಂದ ಇಂದು ನೀವು ಆರ್ಥಿಕವಾಗಿ ಲಾಭವನ್ನು ಪಡೆಯಬಹುದು. ನಿಮ್ಮ ಸಹೋದರ ಸಹೋದರಿಯರ ಸಲಹೆ ತೆಗೆದುಕೊಳ್ಳಿ ಕುಟುಂಬದ ಸದಸ್ಯರೊಂದಿಗೆ

ಮಕರ ನಿಮ್ಮ ಹೆಚ್ಚು ಆತ್ಮವಿಶ್ವಾಸವನ್ನು ಇಂದು ಚೆನ್ನಾಗಿ ಬಳಸಿಕೊಳ್ಳಲು ಪ್ರಯತ್ನಿಸಿ. ಒತ್ತಡದ ದಿನದ ಹೊರತಾಗಿಯೂ ನೀವು ನಿಮ್ಮ ಚೈತನ್ಯವನ್ನು ಮರಳಿ ಪಡೆಯಲು ಸಾಧ್ಯವಾಗುತ್ತದೆ. ನೀವು ನಿಮ್ಮ ಕಳೆದ ಸಮಯದಲ್ಲಿ ಬಹಳಷ್ಟು ಹಣವನ್ನು ಖರ್ಚುಮಾಡಿದ್ದಿರಿ ಇದರ ತೊಂದರೆ ನೀವು ಇಂದು ಅನುಭವಿಸಬೇಕಾಗಬಹುದು.

ಕುಂಭ ಕೋಪದ ಬಡಿದೆಬ್ಬಿಸುವಿಕೆ ವಾದ, ಘರ್ಷಣೆಗೆ ಕಾರಣವಾಗಬಹುದು. ಭವಿಷ್ಯದಲ್ಲಿ ನೀವು ಆರ್ಥಿಕವಾಗಿ ಬಲವಾಗಿರಬೇಕೆಂದು ಬಯಸಿದರೆ ಇಂದಿನಿಂದಲೇ ಹಣವನ್ನು ಉಳಿಸಿ. ನೀವು ಗುಂಪಿನ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡರೆ ನೀವು ಹೊಸ ಸ್ನೇಹಿತರನ್ನು ಸಂಪಾದಿಸುತ್ತೀರಿ.

ಮೀನ ನಿಮ್ಮ ಭರವಸೆ ಒಂದು ಸಮೃದ್ಧ ಸೂಕ್ಷ್ಮ ಪರಿಮಳಯುಕ್ತ ಮತ್ತು ಬೆರಗುಗೊಳಿಸುವ ಹೂವಿನ ಹಾಗೆ ಅರಳುತ್ತದೆ. ನಿಮ್ಮ ಹಣವನ್ನು ಸಂಗ್ರಹಿಸಿದಾಗ ಮಾತ್ರ ಹಣ ನಿಮ್ಮ ಕೆಲಸಕ್ಕೆ ಬರುತ್ತದೆ. ಇದನ್ನು ನೀವು ಚೆನ್ನಾಗಿ ಅರ್ಥಮಾಡಿಕೊಳ್ಳಿ ಇಲ್ಲದಿದ್ದರೆ ನೀವು ಮುಂಬರುವ ಸಮಯದಲ್ಲಿ ವಿಷಾದಿಸಬೇಕಾಗುತ್ತದೆ.

ಸಾಥಿ ಅಭಿಯಾನ: ಆಧಾರ್ ವಿತರಣೆ

ಸರ್ಕಾರದ ಸೌಲಭ್ಯದಿಂದ ವಂಚಿತರಾಗದಂತೆ ಇರಲು ಕಡ್ಡಾಯವಾಗಿ ಆಧಾರ್ ಕಾರ್ಡ್ ಪಡೆಯುವಂತೆ ಮಾಹಿತಿ

• ಉದಯವಾಹಿನಿ, ಚಿತ್ರದುರ್ಗ

ಚಿತ್ರದುರ್ಗ ನಗರದ ಜಿಲ್ಲಾ ಬಾಲಭವನ ಸಭಾಂಗಣದಲ್ಲಿ ಬೀದಿ ಬದಿ, ನಿರ್ಗತಿಕ, ಅಲೆಮಾರಿ ಮಕ್ಕಳ ಆಧಾರ್ ನೋಂದಣಿ ಮಾಡಿಸುವ ಸಂಬಂಧ ಇಲಾಖಾ, ಸರ್ಕಾರಿ ಸೌಲಭ್ಯಗಳನ್ನು ಒದಗಿಸುವ ಕುರಿತು ಸಾಥಿ ಅಭಿಯಾನದಡಿ ಜಿಲ್ಲೆಯಾದ್ಯಂತ ಸಮೀಕ್ಷೆ ನಡೆಸಿ, ದಾಖಲೆಗಳೊಂದಿಗೆ ಮಕ್ಕಳನ್ನು ಕರೆಯಿಸಿ, ಆಧಾರ್ ಕಾರ್ಡ್ ನೊಂದಣಿ, ವಿತರಿಸುವ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು.

ಮಕ್ಕಳ ರಕ್ಷಣಾ ನಿರ್ದೇಶನಾಲಯ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಶಾಲಾ ಶಿಕ್ಷಣ ಇಲಾಖೆ, ಮಹಿಳಾ, ಮಕ್ಕಳ ಅಭಿವೃದ್ಧಿ ಇಲಾಖೆ, ಜಿಲ್ಲಾ ಮಕ್ಕಳ ರಕ್ಷಣಾಘಟಕದ ಸಹಯೋಗದಲ್ಲಿ ಆಧಾರ ಕಾರ್ಡ್ ನೊಂದಣಿ, ವಿತರಿಸುವ ಕಾರ್ಯಕ್ರಮವನ್ನು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷರಾದ ರೋಣ ವಾಸುದೇವ್ ಉದ್ಘಾಟಿಸಿ ಮಾತನಾಡಿ, ಸುಪ್ರಿಂಕೋರ್ಟ್ ನಿರ್ದೇಶನದ ಅನ್ವಯ ಅನಾಥ, ನಿರ್ಗತಿಕಮಗು ಯಾವುದೇ ಯೋಜನೆಯ ಸೌಲಭ್ಯ ಪಡೆಯಲು ಆಧಾರ್ ಕಾರ್ಡ್ ಅಗತ್ಯವಿರುತ್ತದೆ. ಅಂತೆಯೇ ಈ ಸಂಬಂಧ ಇಲಾಖೆಗಳು ಕಾರ್ಯೋನ್ಮುಖರಾಗ ಬೇಕಾಗಿರುತ್ತದೆ ಹಾಗೂ ಈ ಮಕ್ಕಳಿಗೆ ಆಧಾರ್ ಕಾರ್ಡ್ ಸೌಲಭ್ಯ ಒದಗಿಸುವ ಅಗತ್ಯವಿರುತ್ತದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಹಿರಿಯ ಸಿವಿಲ್ ನ್ಯಾಯಾಧೀಶರು, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಎಂ.ವಿಜಯ್, ಶಾಲಾ ಶಿಕ್ಷಣ ಇಲಾಖೆ ಎಂ.ಆರ್.ಮಂಜುನಾಥ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಜಿಲ್ಲಾ ನಿರೂಪಣಾಧಿಕಾರಿ ಡಿ.ಮಂಜುನಾಥ್, ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಎ.ಎಂ.ವೀಣಾ, ಆಪ್ತ ಸಮಾಲೋಚಕ ರಂಗನಾಥ್, ಆಧಾರ್ ಕಾರ್ಡ್ ನೊಂದಣಿದಾರ ವೆಂಕಟೇಶ್ ಸೇರಿದಂತೆ ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಸಿಬ್ಬಂದಿಗಳು ಇದ್ದರು.

ಉದಯವಾಹಿನಿ ಚಿತ್ರ

ಕಡ್ಡಾಯವಾಗಿ ಆರು ತಿಂಗಳಿಂದ ಆರು ವರ್ಷದವರೆಗೆ ಅಂಗನವಾಡಿ ಮಕ್ಕಳಿಗೆ ಐಸಿಡಿಎಸ್ ಯೋಜನೆಯ ಸೌಲಭ್ಯಗಳನ್ನು ನೀಡುತ್ತಿದ್ದು, ಗರ್ಭಿಣಿ ಬಾಣಂತಿಯರು ಕಡ್ಡಾಯವಾಗಿ ಆಧಾರ್ ಕಾರ್ಡ್ ನೀಡಿ ಸೌಲಭ್ಯ ಪಡೆಯುತ್ತಿದ್ದಾರೆ. ಪೋಷಣ್ ಟ್ರಾಕ್‌ನಲ್ಲಿ ನಾವುಗಳು ಆಧಾರ್ ಸಮೇತ ನೊಂದಣಿ ಮಾಡುತ್ತಿದ್ದು, ಸರ್ಕಾರದ ಸೌಲಭ್ಯದಿಂದ ವಂಚಿತರಾಗದಂತೆ ಇರಲು ಕಡ್ಡಾಯವಾಗಿ ಆಧಾರ್‌ಕಾರ್ಡ್ ಪಡೆಯಿರಿ.
–ಕೆ.ಹೆಚ್.ವಿಜಯಕುಮಾರ್, ಮಹಿಳಾ, ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕ

ಜಿಲ್ಲೆಯಾದ್ಯಂತ ಸಮೀಕ್ಷೆ
ಕಳೆದ ಜೂ. 03ರಂದು ಸಾಥಿ ಸಮಿತಿ ರಚನೆ ಆಗಿದ್ದು, ಪದವಿ ಪೂರ್ವಶಿಕ್ಷಣ ಇಲಾಖೆ, ಶಾಲಾ ಶಿಕ್ಷಣ ಇಲಾಖೆ, ಶಿಶು ಅಭಿವೃದ್ಧಿ ಯೋಜನೆಗಳ ವತಿಯಿಂದ ಬೀದಿ ಬದಿ, ನಿರ್ಗತಿಕ, ಅಲೆಮಾರಿ ಮಕ್ಕಳ ಆಧಾರ ನೊಂದಣಿ ಮಾಡಿಸುವ ಸಂಬಂಧ ಸಾಥಿ ಅಭಿಯಾನದಡಿ ಜಿಲ್ಲೆಯಾದ್ಯಂತ ಸಮೀಕ್ಷೆ ನಡೆಸಿ, ಜಿಲ್ಲೆಯ ಯಾವುದೇ ತಾಲ್ಲೂಕಿನಲ್ಲಿ ನಿರ್ಗತಿಕ ಮಕ್ಕಳಿದ್ದರೂ ಅವರಿಗೆ ಆಧಾರ್ ಕಾರ್ಡ್‌ನ್ನು ಮಾಡಿಸಿಕೊಡಲಾಗುತ್ತದೆ.

ಉಪವಿಭಾಗ ಮಟ್ಟದಲ್ಲಿ ಜಾಗೃತಿ ಉಸ್ತುವಾರಿ ಸಮಿತಿ ರಚನೆ

• ಉದಯವಾಹಿನಿ, ಚಿತ್ರದುರ್ಗ

ಉಪವಿಭಾಗ ಮಟ್ಟದಲ್ಲಿ ಜಾಗೃತಿ ಮತ್ತು ಉಸ್ತುವಾರಿ ಸಮಿತಿ ಉಪವಿಭಾಗ ಮಟ್ಟದ ಸಫಾಯಿ ಕರ್ಮಚಾರಿಗಳ ನಿಗಾ ಉಸ್ತುವಾರಿ ರಚನೆಯ ಪ್ರಯುಕ್ತ ಹಾಲಿ ಇರುವ ಜಾಗೃತಿ, ಉಸ್ತುವಾರಿ ಸಮಿತಿಯ ಅವಧಿಯು ಮುಕ್ತಾಯವಾಗಿದೆ.

ಉಪವಿಭಾಗ ಸಮಿತಿಯಲ್ಲಿ ಕಾರ್ಯನಿರ್ವಹಿಸಲು ಇಚ್ಛೆಯುಳ್ಳವರು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಪುರುಷರು, ಮಹಿಳೆಯರು ತಮ್ಮ ಸ್ವ–ವಿವರಗಳೊಂದಿಗೆ ಆಗಸ್ಟ್–10ರೊಳಗೆ ಸದಸ್ಯ ಕಾರ್ಯದರ್ಶಿಗಳು, ಸಹಾಯಕ ನಿರ್ದೇಶಕರು (ಗ್ರೇಡ್–1), ಸಮಾಜ ಕಲ್ಯಾಣ ಇಲಾಖೆ, ಚಿತ್ರದುರ್ಗ ಅವರ ಕಚೇರಿಗೆ ಸಲ್ಲಿಸುವಂತೆ ಚಿತ್ರದುರ್ಗ ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕರು (ಗ್ರೇಡ್–1) ಕೋರಿದ್ದಾರೆ.

ಹುತಾತ್ಮ ರೈತರ ಸ್ಮರಣೆ: ಸ್ಮಾರಕ ನಿರ್ಮಿಸಲು ಚಾಲನೆ

• ಉದಯವಾಹಿನಿ, ಗದಗ

1980ರ ಜುಲೈನಲ್ಲಿ ನಡೆದಿದ್ದ ರೈತರ ಬಂಡಾಯ, ರೈತ ಸಂಘದ ಉಗಮ ಕಾರಣವಾದ ನೆನಪಿನಲ್ಲಿ ರೈತರ ಸ್ಮಾರಕ ನಿರ್ಮಿಸಲು ರೈತ ಸಂಘಟನೆಗಳ 45 ವರ್ಷಗಳ ಬೇಡಿಕೆಗೆ ಮಂಗಳವಾರ ಚಾಲನೆ ನೀಡಲಾಗಿದೆ ಎಂದು ಸಚಿವ ಎಚ್. ಕೆ.ಪಾಟೀಲ ತಿಳಿಸಿದರು.

ನರಗುಂದದಲ್ಲಿ ನಡೆದ ಹುತಾತ್ಮ ರೈತ ದಿನಾಚರಣೆ ಕಾರ್ಯಕ್ರಮದಲ್ಲಿ ದಿ. ವೀರಪ್ಪ ಕಡ್ಲಿಕೊಪ್ಪ ಅವರ ವೀರಗಲ್ಲಿಗೆ ನಮನ ಸಲ್ಲಿಸಿ, ಅವರು ಮಾತನಾಡಿದರು. ರೈತ ಸ್ಮಾರಕ ನಿರ್ಮಾಣಕ್ಕೆ ಭೂಮಿ ದಾನ ಮಾಡಿದ ದೇಸಾಯಿಗೌಡ ಪಾಟೀಲ, ಸಲೀಂ ಮೇಗಲಮನಿ ಅಭಿನಂದನಾರ್ಹರು. 2026 ಜುಲೈ 21ರೊಳಗೆ ಸ್ಮಾರಕ ಪೂರ್ಣವಾಗಲಿದೆ. ಇದಕ್ಕೆ ಎಲ್ಲಾ ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಜಿಲ್ಲಾಧಿಕಾರಿಗೆ ಸೂಚಿಸಿದರು.

ಕಳಸಾ ಬಂಡೂರಿ ಯೋಜನೆಗೆ ಕೇಂದ್ರದ ವನ್ಯಜೀವಿ ಇಲಾಖೆ ಅನುಮತಿ ಬೇಕು. ಸಿಕ್ಕ ತಕ್ಷಣ ಕಾಮಗಾರಿ ಆರಂಭಿಸಲಾಗುವುದು. ಕೃಷ್ಣ ನದಿ ಬಿ ಸ್ಕೀಂ ಯೋಜನೆಗೆ ಕೇಂದ್ರ ಗಮನ ಹರಿಸುತ್ತಿಲ್ಲ ಎಂದು ಆರೋಪಿಸಿದರು.

ಈ ಬಾರಿ ಆಗಲಿಲ್ಲ ಬಹಿರಂಗ ಸಮಾವೇಶ ವೀರಗಲ್ಲು ಇರುವ ಸ್ಥಳದಲ್ಲೇ ಶಂಕರ ಅಂಬಲಿ ನೇತೃತ್ವದಲ್ಲಿ ಒಂದು ವೇದಿಕೆ ಅದರ ಹಿಂದುಗಡೆ ವಿರೇಶ ಸೊಬರದಮಠ ನೇತೃತ್ವದ ಮಹದಾಯಿ ಹೋರಾಟದ ವೇದಿಕೆ ಇದ್ದ ಕಾರಣ ಹುತಾತ್ಮ ರೈತ ದಿನಾಚರಣೆಗೆ ಬಂದ ರೈತರಿಗೆ ಗೊಂದಲವಾಯಿತು. ಪ್ರತ್ಯೇಕ ವೇದಿಕೆಯಲ್ಲಿ ಆಳಂದ ಶಾಸಕ ಬಿ.ಆರ್.ಪಾಟೀಲ ಕೇಂದ್ರ ಸರ್ಕಾರದ ರೈತ ವಿರೋಧಿ ನೀತಿ ಖಂಡಿಸಿದರು.

ಸಮರ್ಥನಂ ಸಂಸ್ಥೆ: ಉದ್ಯೋಗ ಮೇಳ ಜುಲೈ 25ರಂದು

• ಉದಯವಾಹಿನಿ, ಜಮಖಂಡಿ

ನಗರದ ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜಿನಲ್ಲಿ ಜು. 25ರಂದು ನಿರುದ್ಯೋಗಿ ಯುವಕ, ಯುವತಿಯರು, ಅಂಗವಿಕಲರಿಗೆ ಬೃಹತ್ ಉದ್ಯೋಗ ಮೇಳ ಆಯೋಜಿಸಲಾಗಿ ಎಂದು ಸಮರ್ಥನಂ ಅಂಗವಿಕಲರ ಸಂಸ್ಥೆಯ ಅರುಣಕುಮಾರ ಎಮ್.ಜಿ. ಹೇಳಿದರು. ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ದೇಶಾದ್ಯಂತ 27 ವರ್ಷಗಳಿಂದ ನಮ್ಮ ಸಂಸ್ಥೆ ಅಂಧರು, ಅಂಗವಿಕಲರು, ಆರ್ಥಿಕವಾಗಿ ಹಿಂದುಳಿದ ಸಮುದಾಯಗಳ ಅಭಿವೃದ್ಧಿಗಾಗಿ ಶ್ರಮಿಸುತ್ತಿದೆ ಎಂದರು.

ಎಸ್‌ಎಸ್‌ಎಲ್‌ಸಿ, ಪಿಯುಸಿ, ಐಟಿಐ, ಡಿಪ್ಲೊಮಾ, ಪದವಿ ಸ್ನಾತಕೊತ್ತರ ಅಧ್ಯಯನ ಪೂರ್ಣಗೊಳಿಸಿ ಉದ್ಯೋಗಕ್ಕಾಗಿ ಕಾಯುತ್ತಿರುವ ಅಂಗವಿಕಲರು, ವಾಕ್, ಶ್ರವಣ ದೋಷವುಳ್ಳವರು, ಅರೆ ಅಂಧತ್ವ ಹೊಂದಿರುವವರು, ಸಾಮಾನ್ಯ ಅಭ್ಯರ್ಥಿಗಳು ಉದ್ಯೋಗಗಳನ್ನು ಪಡೆಯಲು ಈ ಮೇಳದ ಸದುಪಯೋಗ ಪಡೆದುಕೊಳ್ಳಬೇಕು. ಮೇಳದಲ್ಲಿ 45ಕ್ಕೂ ಅಧಿಕ ಕಂಪನಿಗಳು ಪಾಲ್ಗೊಳ್ಳಲಿವೆ ಎಂದರು. ಮಾಹಿತಿಗಾಗಿ ಮೊ.9480809598, 9148157888 ಸಂಪರ್ಕಿಸಲು ತಿಳಿಸಿದ್ದಾರೆ.

ವಿಶ್ವಹಿಂದೂ ಪರಿಷತ್ ಮುಂಬರುವ ಕಾರ್ಯಕ್ರಮ ಬಗ್ಗೆ ಚರ್ಚೆ

• ಉದಯವಾಹಿನಿ, ಸಿಂಧನೂರು

ನಗರದಲ್ಲಿ ವಿಶ್ವ ಹಿಂದೂ ಪರಿಷತ್ ಮುಂಬರುವ ಕಾರ್ಯಕ್ರಮಗಳು ಕುರಿತು, ಸಂಘಟನೆಯ ಕಾರ್ಯ ವಿಸ್ತಾರದ ಬಗ್ಗೆ ವಿಶ್ವ ಹಿಂದೂ ಪರಿಷತ್ ರಾಯಚೂರ ಜಿಲ್ಲಾ ಬೈಠಕ್ ಮಾಡಲಾಯಿತು, ಈ ಬೈಠಕ ನಲ್ಲಿ ವಿಶ್ವ ಹಿಂದೂ ಪರಿಷತ್ ಕರ್ನಾಟಕ ಉತ್ತರ ಪ್ರಾಂತ ಅಧ್ಯಕ್ಷರಾದ ಪೂಜ್ಯಶ್ರೀ ಲಿಂಗರಾಜಪ್ಪ ಅಪ್ಪ ಅವರು. ಶ್ರೀಮತಿ ವಿಜಯಲಕ್ಷ್ಮಿ ಹಿರೇಮಠ್ ವಿಶ್ವ ಪ್ರಾಂತ ಉಪಾಧ್ಯಕ್ಷರು. ವಿನಾಯಕ್ ಜಿ ತಲೆಗೇರಿ ವಿಶ್ವ ಹಿಂದು ಪರಿಷತ್ ಉತ್ತರ ಪ್ರಾಂತ ಸಹ ಕಾರ್ಯದರ್ಶಿ ಕೆ. ಅಶೋಕ್ ಬಳ್ಳಾರಿ ವಿಭಾಗ ಕಾರ್ಯದರ್ಶಿ. ಶ್ರೀ ಪುಂಡಲಿಕ ದಳವಾಯಿ ಬಜರಂಗದಳ ಉತ್ತರ ಪ್ರಾಂತ ಸಂಯೋಜಕರು. ಮಲ್ಲಿಕಾರ್ಜುನ್ ಸತ್ತಿಗೇರಿ ಪ್ರಾಂತ ಧರ್ಮಪ್ರಸಾರ ಪ್ರಮುಖರು. ಡಿ. ರವಿಕೃಷ್ಣ ವಿಶ್ವ ಹಿಂದು ಪರಿಷತ್ ರಾಯಚೂರು ಜಿಲ್ಲಾ ಅಧ್ಯಕ್ಷರು. ರವಿಕುಮಾರ್ ವಿಶ್ವ ಹಿಂದು ಪರಿಷತ್ ರಾಯಚೂರು ಜಿಲ್ಲಾ ಕಾರ್ಯದರ್ಶಿ, ಬಸವರಾಜ್ ಸಾಲುಗುಂದ ಬಜರಂಗದಳ ರಾಯಚೂರು ಜಿಲ್ಲಾ ಸಂಯೋಜಕರು ಉಪಸ್ಥಿತರಿದ್ದರು.

ಹಿರಿಯರ ಉಪಸ್ಥಿತಿಯಲ್ಲಿ ಸಿಂಧನೂರು ನಗರದಲ್ಲಿ ವಿಶ್ವ ಹಿಂದು ಪರಿಷತ್ ಹಾಗೂ ಬಜರಂಗದಳದ ನೂತನ ಜವಾಬ್ದಾರಿಗಳನ್ನು ಘೋಷಣೆ ಮಾಡಲಾಯಿತು. ದೇವರಾಜ್ ಪಾಟೀಲ್ ವಿಶ್ವ ಹಿಂದೂ ಪರಿಷತ್ ತಾಲ್ಲೂಕ ಅಧ್ಯಕ್ಷರಾಗಿ ನೇಮಕ ಮಾಡಲಾಯಿತು.

ಉದಯವಾಹಿನಿ ಚಿತ್ರ

ಶಿವಪ್ರಸಾದ್ ನೆಕ್ಕಂಟಿ ಉಪಾಧ್ಯಕ್ಷರು. ಕಿಶೋರ್ ಕುಮಾರ್ ನಗರ ಅಧ್ಯಕ್ಷರು. ವಿಶ್ವನಾಥ್ ಚೌಧರಿ ಜಿಲ್ಲಾ ಧರ್ಮಪ್ರಚಾರ ಪ್ರಮುಖ. ಪ್ರವೀಣ್ ಭಗತ್ ಸಿಂಗ್ ಜಿಲ್ಲಾ ಮಾಧ್ಯಮ ಪ್ರಮುಖ್. ಯಮನೂರು ಬಜರಂಗದಳ ನಗರ ಸಹ ಸಂಯೋಜಕರು. ಪಕೀರಪ್ಪ ಗೋಮರ್ಸಿ ಬಜರಂಗದಳ ತಾಲ್ಲೂಕು ಸಹ ಸಂಯೋಜಕರು. ಹನುಮಂತ ಬಜರಂಗದಳ ತಾಲ್ಲೂಕು ಗೋರಕ್ಷಾ ಪ್ರಮುಖ್. ವಿನಯ್ ಬಿ ಬಜರಂಗದಳ ತಾಲ್ಲೂಕು ವಿದ್ಯಾರ್ಥಿ ಪ್ರಮುಖ. ಮೌನೇಶ್ ಬಜರಂಗದಳ ನಗರ ವಿದ್ಯಾರ್ಥಿ ಪ್ರಮುಖ. ಪುಟ್ಟರಾಜ್ ತಾಲ್ಲೂಕು ಮಾಧ್ಯಮ ಪ್ರಮುಖ. ಅಸಮುತ್ಮಾಲೆ ಆರ್‌ಎಚ್ ಕ್ಯಾಂಪ್ 5 ಬಜರಂಗದಳ ಸಂಯೋಜಕ. ದಿಲೀಪ್ ಸರ್ಕಾರ್ ಆರ್‌ಎಚ್ ಕ್ಯಾಂಪ್ 4 ಬಜರಂಗದಳ ಸಂಯೋಜಕ. ವಿಶ್ವ ಹಿಂದೂ ಪರಿಷತ್ ಬಜರಂಗದಳ ಹೊಸ ಜವಾಬ್ದಾರಿಗಳು ನೇಮಕ ಮಾಡಲಾಯಿತು.

ರಾಷ್ಟ್ರೀಯ ಹೆದ್ದಾರಿ ಮೇಲ್ಸೇತುವೆ ಸಂಚಾರಕ್ಕೆ ಶಿವಾನಂದ ಪಾಟೀಲ ಚಾಲನೆ

• ಉದಯವಾಹಿನಿ, ಬ್ಯಾಡಗಿ

ಹಲವಾರು ವರ್ಷಗಳಿಂದ ನೆನೆಗುದಿಗೆ ಬಿದ್ದಿದ್ದ ತಾಲ್ಲೂಕಿನ ಮೋಟೆಬೆನ್ನೂರ ಬಳಿಯ ರಾಷ್ಟ್ರೀಯ ಹೆದ್ದಾರಿ 48ರ ಮೇಲ್ಸೇತುವೆ ಏಕಮುಖ ಸಂಚಾರಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ಶಿವಾನಂದ ಪಾಟೀಲ ಮಳೆಯಲ್ಲಿಯೇ ಉದ್ಘಾಟಿಸಿದರು. ಬಳಿಕ ಮಾತನಾಡಿದ ಅವರು ಭೂಸ್

ಕೇರಳ ಮೂಲದ ನರ್ಸ್ ನಿಮಿಷಾ ಪ್ರಿಯಾ ಗಲ್ಲುಶಿಕ್ಷೆ ರದ್ದು

ಭಾರತ, ಯೆಮೆನ್ ಅಧಿಕಾರಿಗಳ ಹಗಲಿರುಳು ಶ್ರಮದಿಂದ ಈ ಯಶಸ್ಸು, ನಿಮಿಷಾ ಪ್ರಿಯಾ ಅವರನ್ನು ಭಾರತಕ್ಕೆ ಕರೆತರಲು ವ್ಯವಸ್ಥೆ

ಯೆಮನ್: ಕೇರಳ ಮೂಲದ ನರ್ಸ್ ನಿಮಿಷಾ ಪ್ರಿಯಾ ಅವರ ಗಲ್ಲು ಶಿಕ್ಷೆ ರದ್ದು ಮಾಡಲಾಗಿದೆ ಎಂದು ಇವಾಂಜೆಲಿಸ್ಟ್ ಕೆ.ಎ. ಪೌಲ್ ಮಾಹಿತಿ ನೀಡಿದ್ದಾರೆ. ನಿಮಿಷಾ ಪ್ರಿಯಾ ಅವರ ಬಿಡುಗಡೆಗಾಗಿ ಸಂತ್ರಸ್ತ ಕುಟುಂಬದ ಕ್ಷಮೆಯಾಚನೆ ಮತ್ತು ರಕ್ತದ ಹಣವನ್ನು ಪಾವತಿಸುವ ಬಗ್ಗೆ ಚರ್ಚೆಗಳು ನಡೆದಿದ್ದವು. ಆದರೆ ಅದು ಕೂಡ ವಿಫಲವಾಯಿತು ಎನ್ನಲಾಗಿತ್ತು. ಇದೀಗ ಎಲ್ಲವೂ ಬಗೆಹರಿದಿದೆ. ಹೌದು ಈ ಬಗ್ಗೆ ಗ್ಲೋಬಲ್ ಪೀಸ್ ಇನ್‌ಷಿಯೇಟಿವ್ ಸಂಸ್ಥಾಪಕ ಡಾ. ಕೆ.ಎ. ಪೌಲ್ ಮಾಹಿತಿ ನೀಡಿದ್ದಾರೆ. ಭಾರತ ಮತ್ತು ಯೆಮೆನ್ ಅಧಿಕಾರಿಗಳು ಹಗಲಿರುಳು ಶ್ರಮವಹಿಸಿ ಈ ಕೆಲಸ ಮಾಡಿದ್ದಾರೆ. ಇದರಿಂದಾಗಿ ಶಿಕ್ಷೆ ತಪ್ಪಿಸಲು ಸಾಧ್ಯವಾಗಿದೆ. ಹಲವು ದಿನಗಳ ಪ್ರಯತ್ನದ ನಂತರ ಈ ಯಶಸ್ಸು ಸಿಕ್ಕಿದೆ. ನಿಮಿಷಾ ಪ್ರಿಯಾ ಅವರನ್ನು ಬಿಡುಗಡೆ ಮಾಡಿ ಭಾರತಕ್ಕೆ ಕರೆತರಲು ವ್ಯವಸ್ಥೆ ಮಾಡಲಾಗುವುದು ಎಂದು ಗ್ಲೋಬಲ್ ಪೀಸ್ ಇನ್‌ಷಿಯೇಟಿವ್ ಸಂಸ್ಥಾಪಕ ಡಾ. ಕೆ.ಎ. ಪೌಲ್ ಹೇಳಿದ್ದಾರೆ.

ಮರದಂಡನೆ ಶಿಕ್ಷೆ ರದ್ದು: ದೇವರ ಆಶೀರ್ವಾದದಿಂದ ನಿಮಿಷಾ ಶೀಘ್ರದಲ್ಲೇ ಬಿಡುಗಡೆಯಾಗಲಿದ್ದಾರೆ. ಯೆಮೆನ್ ನಾಯಕರ ಪ್ರಯತ್ನದಿಂದ ಮರಣದಂಡನೆ ಶಿಕ್ಷೆ ರದ್ದುಗೊಳಿಸುವ ಪ್ರಯತ್ನ ಸಾಧ್ಯವಾಯಿತು. ನಿಮಿಷಾ ಪ್ರಿಯಾ ಅವರ ಪ್ರಾಣ ಉಳಿಸಲು ಹತ್ತು ದಿನಗಳಿಂದ ಪ್ರಯತ್ನಿಸುತ್ತಲೆ ಇದ್ದರು. ಶಿಕ್ಷೆ ಕಡಿತಗೊಳಿಸುವ

ಪ್ರಕ್ರಿಯೆಯಲ್ಲಿ ಭಾಗಿಯಾದ ಎಲ್ಲರಿಗೂ ಧನ್ಯವಾದ. ಯೆಮನ್ ಅಧಿಕಾರಿಗಳ ಭಾರತದ ಪ್ರಯತ್ನವೂ ಇದರಲ್ಲಿತ್ತು. ದೇವರ ದಯೆಯಿಂದ ನಿಮಿಷಾ ಬಿಡುಗಡೆಯಾಗಲಿದ್ದಾರೆ.

ಅವರನ್ನು ಕಾನೂನುಬದ್ಧವಾಗಿ ಮತ್ತು ಸುರಕ್ಷಿತವಾಗಿ ಕರೆದುಕೊಂಡು ಹೋಗಬಹುದು ಎಂದು ಡಾ. ಕೆ.ಎ ಪೌಲ್ ಸನಾದಿಂದ ಬಿಡುಗಡೆ ಮಾಡಿದ ವಿಡಿಯೋದಲ್ಲಿ ಮಾಹಿತಿ ಹಂಚಿಕೊಂಡಿದ್ದಾರೆ. ಸನಾ ಜೈಲಿನಲ್ಲಿರುವ ನಿಮಿಷಾ ಅವರನ್ನು ಒಮಾನ್, ಜೆಡ್ಡಾ, ಈಜಿಪ್ಟ್, ಇರಾನ್ ಅಥವಾ ಟರ್ಕಿಗೆ ಕರೆದೊಯ್ಯಲು ಭಾರತಕ್ಕೆ ಸಹಾಯ ಮಾಡಲಾಗುವುದು ಎಂದು ಡಾ. ಪೌಲ್ ತಿಳಿಸಿದ್ದಾರೆ.

ಇಲ್ಲಿಯವರೆಗೂ ಆಗಿದ್ದೇನು?: ಪ್ರಿಯಾ ಅವರ ಪರವಾಗಿ ಯೆಮೆನ್‌ನಲ್ಲಿ ವಕೀಲರನ್ನು ನೇಮಿಸಲಾಗಿದೆ. ಷರಿಯಾ ಕಾನೂನಿನಲ್ಲಿ ಕ್ಷಮೆಗೆ ಇರುವ ದಾರಿಗಳನ್ನು ಅವರು ಹುಡುಕುತ್ತಾರೆ. ಇದು ಸೂಕ್ಷ್ಮ

> ಇಸ್ಲಾಂನಲ್ಲಿ, ಕೊಲ್ಲುವ ಬದಲು ದಿಯಾ ಎಂದರೆ (ಪರಿಹಾರ) ನೀಡುವ ಪದ್ಧತಿಯೂ ಇದೆ. ದಿಯಾತ್ ಅನ್ನು ಸ್ವೀಕರಿಸಲು ನಾನು ವಿನಂತಿಸಿದ್ದೆ. ನನ್ನ ವಿನಂತಿಯನ್ನು ಸ್ವೀಕರಿಸಬೇಕೆ ಅಥವಾ ಬೇಡವೇ ಎಂಬುದರ ಬಗ್ಗೆ ಮಾತುಕತೆ ನಡೆಯುತ್ತಿದೆ. ನಾಳೆ ಗಲ್ಲು ಶಿಕ್ಷೆಯ ದಿನಾಂಕವಿತ್ತು, ಆದರೆ ಈಗ ಅದನ್ನು ಕೆಲವು ದಿನಗಳವರೆಗೆ ಮುಂದೂಡಲಾಗಿದೆ.
>
> – ಗ್ರ್ಯಾಂಡ್ ಮುಫ್ತಿ

ವಿಷಯವಾಗಿರುವುದರಿಂದ ಎಲ್ಲಾ ರೀತಿಯಿಂದಲೂ ಪರಿಶೀಲನೆ ನಡೆಸಲಾಗುತ್ತಿದೆ. ನಿಮಿಷಾ ಅವರ ಬಿಡುಗಡೆಗೆ ಸರ್ಕಾರ ಕೆಲಸ ಮಾಡುತ್ತಿದೆ ಎಂದು ಕಳೆದ ವಾರಗಳ ಹಿಂದೆ ವಿದೇಶಾಂಗ ವ್ಯವಹಾರಗಳ ಸಚಿವಾಲಯದ ವಕ್ತಾರ ರಣಧೀರ ಜೈಸ್ವಾಲ್ ಹೇಳಿದ್ದರು.

ಏನಿದು ಪ್ರಕರಣ?: 2017ರಲ್ಲಿ ಕೇರಳದ 37 ವರ್ಷದ ನರ್ಸ್ ನಿಮಿಷಾ ಪ್ರಿಯಾ ಅವರು ಯೆಮೆನ್‌ನ ಸ್ಥಳೀಯ ವ್ಯಕ್ತಿ ಯೆಮೆನ್ ಪ್ರಜೆಯನ್ನು ಕೊಲೆ ಮಾಡಿದ್ದಾರೆ ಎಂಬ ಆರೋಪವಿದೆ. ಆಕೆ ತನ್ನ ಪಾಲುದಾರನಾಗಿದ್ದ ತಲಾಲ್ ಅಬ್ದುಲ್ ಮಹ್ದಿಯನ್ನು ಹತ್ಯೆಗೈ ಆರೋಪದ ಮೇಲೆ ನ್ಯಾಯಾಲಯದಿಂದ ಶಿಕ್ಷೆಗೊಳಗಾಗಿದ್ದರು. 2020ರಲ್ಲಿ ಯೆಮೆನ್ ನ್ಯಾಯಾಲಯವು ನಿಮಿಷಾ ಪ್ರಿಯಾಗೆ

ಅಧಿಕಾರಿಗಳ ಪ್ರಯತ್ನದಿಂದ ಸಾಧ್ಯ

ಯೆಮೆನ್‌ನಲ್ಲಿ ಕೇರಳದ ನರ್ಸ್ ನಿಮಿಷಾ ಪ್ರಿಯಾ ಅವರ ಗಲ್ಲು ಶಿಕ್ಷೆಯನ್ನು ರದ್ದುಗೊಳಿಸಲಾಗಿದೆ ಎಂದು ಇವಾಂಜೆಲಿಸ್ಟ್ ಕೆ.ಎ. ಪೌಲ್ ತಿಳಿಸಿದ್ದಾರೆ. ಭಾರತ ಮತ್ತು ಯೆಮೆನ್ ಅಧಿಕಾರಿಗಳ ಪ್ರಯತ್ನದಿಂದ ಇದು ಸಾಧ್ಯವಾಗಿದೆ. ನಿಮಿಷಾ ಪ್ರಿಯಾ ಅವರನ್ನು ಬಿಡುಗಡೆ ಮಾಡಿ ಭಾರತಕ್ಕೆ ಕರೆತರಲು ವ್ಯವಸ್ಥೆ ಮಾಡಲಾಗುವುದು ಎಂದು ಡಾ. ಕೆ.ಎ. ಪೌಲ್ ಹೇಳಿದ್ದಾರೆ. ಈ ವಿಷಯದಲ್ಲಿ ಭಾರತ ಸರ್ಕಾರವು ಸಾಧ್ಯವಿರುವ ಎಲ್ಲಾ ಸಹಾಯವನ್ನು ಮಾಡುತ್ತಿದೆ.

ಮರಣದಂಡನೆ ವಿಧಿಸಿತು. ನವೆಂಬರ್ 2023 ರಲ್ಲಿ ಯೆಮೆನ್‌ನ ಸುಪ್ರೀಂ ಜ್ಯುಡಿಷಿಯಲ್ ಕೌನ್ಸಿಲ್ ಈ ಶಿಕ್ಷೆಯನ್ನು ಎತ್ತಿಹಿಡಿದಿತ್ತು. ಜುಲೈ 16 ರಂದು ನಿಮಿಷಾ ಪ್ರಿಯಾ ಅವರಿಗೆ ಮರಣದಂಡನೆಗೆ ದಿನಾಂಕ ನಿಗದಿ ಮಾಡಲಾಗಿತ್ತು. ಆದರೆ, ಯೆಮೆನ್ ಸರ್ಕಾರ ಅದನ್ನು ಮುಂದೂಡಿತ್ತು. ಕಳೆದ ವಾರ, ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರು ಗಲ್ಲುಶಿಕ್ಷೆಯನ್ನು ಮುಂದೂಡಿದ್ದಕ್ಕೆ ಸಂತೋಷ ವ್ಯಕ್ತಪಡಿಸಿದ್ದರು.

ಪ್ರವಾಸಕ್ಕೆ ಬಂದಿದ್ದ ಮಹಿಳೆಯ ಮೇಲೆ ಹೋಟಲ್ ಮಾಲೀಕನಿಂದ ಅತ್ಯಾಚಾರ

ಶಿಮ್ಲಾ: ಹಿಮಾಚಲ ಪ್ರದೇಶಕ್ಕೆ ಪ್ರವಾಸಕ್ಕೆ ಬಂದಿದ್ದ ಮಹಿಳಾ ಮೇಲೆ ಹೋಟೆಲ್‌ನ ಮಾಲೀಕ ಅತ್ಯಾಚಾರ ಎಸಗಿರುವ ಘಟನೆ ನಡೆದಿದೆ. ಘಟನೆ ಸಂಭಂದ ಆರೋಪಿ ಶುಭಂ ಎಂಬಾತನನ್ನು ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ತಮ ಮೂವರು ಸ್ನೇಹಿತೆಯರ ಜೊತೆ ಮಹಿಳೆ ಧರ್ಮಶಾಲಾ ಬಳಿಯ ಹೋಟೆಲ್‌ನಲ್ಲಿ ತಂಗಿದ್ದರು.ಸ್ನೇಹಿತರು ಪ್ರವಾಸಕ್ಕೆ ಹೋಗಿದ್ದಾಗ, ಹೋಟಲ್ ಮಾಲೀಕ ಶುಭಂ ಅವರ ಕೋಣೆಗೆ ನುಗ್ಗಿ ಅತ್ಯಾಚಾರ ಎಸಗಿದ ಎಂದು ದೂರಿನಲ್ಲಿ ತಿಳಿಸಲಾಗಿದೆ. ಶುಭಂ ಅವರ ಸ್ನೇಹಿತರಾಗಿರುವ ಮಹಿಳೆಯ ಉದ್ಯೋಗದಾತರು ಪ್ರವಾಸಕ್ಕಾಗಿ ಧರ್ಮಶಾಲಾ ಬಳಿಯ ಹೋಟೆಲ್‌ನಲ್ಲಿ ರೂಂ ಬುಕ್ ಮಾಡಿದ್ದರು. ಅತ್ಯಾಚಾರದ ಬಗ್ಗೆ ಯಾರಿಗಾದರೂ ಹೇಳಿದರೆ ಗಂಭೀರ ಪರಿಣಾಮಗಳನ್ನು ಎದುರಿಸಬೇಕಾಗುತ್ತದೆ ಎಂದು ಆರೋಪಿ ಬೆದರಿಕೆ ಹಾಕಿದ್ದಾನೆ ಎಂದು ದೂರುದಾರರು ಪೊಲೀಸರಿಗೆ ತಿಳಿಸಿದ್ದಾರೆ. ಆರೋಪಿಯನ್ನು ಬಂಧಿಸಲಾಗಿದೆ ಮತ್ತು ಮಹಿಳೆಯನ್ನು ವೈದ್ಯಕೀಯ ಪರೀಕ್ಷೆಗೆ ಕಳುಹಿಸಲಾಗಿದೆ. ಹೆಚ್ಚಿನ ತನಿಖೆ ನಡೆಯುತ್ತಿದೆ ಎಂದು ಪೊಲೀಸರು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಬಿಜೆಪಿ ಹನಿಟ್ರ್ಯಾಪ್ ಮಾಡಿ 2022ರಲ್ಲಿ ಎಂವಿಎ ಸರ್ಕಾರವನ್ನು ಉರುಳಿಸಿತು: ಸಾಮ್ನಾ

ಮುಂಬೈ: ಮಹಾ ವಿಕಾಸ್ ಆಘಾಡಿಯ ಶಾಸಕರು, ಸಂಸದರನ್ನು ಮಧುಬಲೆಯೊಳಗೆ ಸಿಲುಕಿಸಿದ್ದರಿಂದಲೇ 2022ರಲ್ಲಿ ಉದ್ಧವ್ ಠಾಕ್ರೆ ನೇತೃತ್ವದ ಮಹಾರಾಷ್ಟ್ರ ಸರ್ಕಾರವು ಪತನಗೊಂಡಿತು ಎಂದು ಶಿವಸೇನೆ ಮಂಗಳವಾರ ಆರೋಪಿಸಿದೆ. ಶಾಸಕರನ್ನು ಸಂಸದರನ್ನು ಮಧುಬಲೆಯೊಳಗೆ ಬೀಳಿಸಲಿಕ್ಕಾಗಿಯೇ ರಹಸ್ಯ ಕ್ಯಾಮೆರಾಗಳು ಹಾಗೂ ಪೆಗಾಸಸ್ ತರಹದ ಕಣ್ಣಾವಲು ವ್ಯವಸ್ಥೆಯನ್ನು ಬಳಸಲಾಗಿದೆ ಎಂದಿದೆ.

ಅವಿಭಜಿತ ಶಿವಸೇನೆ ಮತ್ತು ಎನ್‌ಸಿಪಿಯ ಕೆಲವು ಶಾಸಕರು ಕೇಂದ್ರದ ತನಿಖಾ ಸಂಸ್ಥೆಗಳ ಒತ್ತಡದಿಂದಾಗಿಯೇ ತಮ್ಮ ನಿಷ್ಠೆಯನ್ನು ಬದಲಿಸಿದರು. ಕನಿಷ್ಠ 18 ಶಾಸಕರು

ಹಾಗೂ ನಾಲ್ವರು ಸಂಸದರು ಮಧುಬಲೆಯೊಳಗೆ ಸಿಲುಕಿದ್ದು, ಇದರಿಂದ ಪಾರಾಗಲಿಕ್ಕಾಗಿಯೇ ಬಿಜೆಪಿ ಜೊತೆ ಕೈ ಜೋಡಿಸಿದರು ಎಂದು ಶಿವಸೇನೆಯ ಮುಖವಾಣಿ ಸಾಮ್ನಾ ತನ್ನ ಸಂಪಾದಕೀಯದಲ್ಲಿ ಉಲ್ಲೇಖಿಸಿದೆ. ಸಂಸದರು, ಶಾಸಕರನ್ನು ಬ್ಲಾಕ್‌ಮೇಲ್ ಮಾಡಲಾಗಿದೆ ಎಂಬ ವಿಧಾನಸಭೆಯ ವಿರೋಧ ಪಕ್ಷದ ಮಾಜಿ ನಾಯಕ, ಕಾಂಗ್ರೇಸ್ ಮುಖಂಡ ವಿಜಯ್ ವಾಡೆಟ್ಟಿವಾರ್ ಹೇಳಿಕೆಯನ್ನು ಗಂಭೀರವಾಗಿ ಪರಿಗಣಿಸಬೇಕು ಎಂದಿದೆ.

ಮಧುಬಲೆಯ ಜಾಲವನ್ನು ಹೊಂದಿರುವ ಬಿಜೆಪಿಯು, ಶಿವಸೇನೆಯ ಸಂಸದರು, ಶಾಸಕರಿದ್ದ ಪೆನ್‌ಡ್ರೈವ್ ಒಂದನ್ನು ಏಕನಾಥ ಶಿಂದೆ ಅವರಿಗೆ ನೀಡುತ್ತಿದ್ದಂತೆ, ಅವರು ಸೂರತ್, ಗುವಾಹಟಿ ನಂತರ ಗೋವಾಕ್ಕೆ ಪ್ರಯಾಣಿಸಿದರು. ಇದೆಲ್ಲವೂ ರೋಮಾಂಚನ ಕಥಾನಕ ಇದ್ದಂತಿದೆ ಎಂದು ಉಲ್ಲೇಖಿಸಿದೆ. ಏಕನಾಥ ಶಿಂದೆ ಅವರಿಗೆ ಶಾಸಕರ ಬೆಂಬಲವಿರಲಿಲ್ಲ. ಪೊಲೀಸರು, ಆಗ ವಿರೋಧ ಪಕ್ಷದ ನಾಯಕರಾಗಿದ್ದ ದೇವೇಂದ್ರ ಫಡಣವೀಸ್ ಅವರ ಬ್ಲಾಕ್‌ಮೇಲ್‌ನಿಂದಲೇ ಶಾಸಕರ ಸಂಖ್ಯೆ ಹೆಚ್ಚಿತು ಎಂದಿದೆ. ಶಿವಸೇನೆಯ ಸಚಿವರಾದ ಸಂಜಯ್ ಶಿರ್ಸಾಟ್, ಯೋಗೇಶ್ ಕದಂ, ದಾದಾ ಭೂಸೆ, ಎನ್‌ಸಿಪಿಯ ಮಾಣಿಕ್ ಕೊಕಟೆ ಅವರನ್ನು ಸಂಪುಟದಿಂದ ವಜಾಗೊಳಿಸಬೇಕು ಎಂದು ಸಂಪಾದಕೀಯ ಹೇಳಿದೆ. ಕೆಲವು ಸಚಿವರು ಮಧುಬಲೆಯೊಳಗೆ ಸಿಲುಕಿದ್ದು, ಅವರು ಸಹ ಸಂಪುಟದಿಂದ ಹೊರಹೋಗಬೇಕಾಗುತ್ತದೆ ಎಂದಿದೆ.

ಷೇರುಪೇಟೆ ಹೆಸರಲ್ಲಿ ಸೈಬರ್ ವಂಚನೆ 7.88 ಕೋಟಿ ರೂ. ಕಳೆದುಕೊಂಡ ಮಹಿಳೆ

ಮುಂಬೈ: ಷೇರುಪೇಟೆಯಲ್ಲಿ ಹಣ ತೊಡಗಿಸಿದರೆ, ಅಲ್ಪಾವಧಿಯಲ್ಲಿ ದುಪ್ಪಟ್ಟು ಲಾಭ ಸಿಗುತ್ತದೆ ಎಂಬ ಸೈಬರ್ ವಂಚಕರ ಮಾತಿಗೆ ಮರುಳಾಗಿ ಮುಂಬೈನ 62 ವರ್ಷದ ಗೃಹಿಣಿಯೊಬ್ಬರು 7.88 ಕೋಟಿ ಹಣ ಕಳೆದುಕೊಂಡಿದ್ದಾರೆ. ಷೇರುಪೇಟೆ ವಹಿವಾಟು ನಿರ್ವಹಿಸುವ ಹೆಸರಾಂತ ಹಣಕಾಸು ಸಂಸ್ಥೆಯೊಂದರ ಪ್ರತಿನಿಧಿಗಳು ಎಂಬ ಹೆಸರಿನಲ್ಲಿ ವಂಚಕರು ವಾಟ್ಸ್‌ಆ್ಯಪ್ ಮೂಲಕ ಮಹಿಳೆಗೆ ಲಿಂಕ್ ಕಳುಹಿಸಿದ್ದರು. ಮಹಿಳೆ ಹೂಡಿಕೆ ಬಗ್ಗೆ ಹೆಚ್ಚಿನ ಮಾಹಿತಿ ಕೋರಿದಾಗ, ಅವರ ಮೊಬೈಲ್ ಸಂಖ್ಯೆಯನ್ನು ವಾಟ್ಸ್‌ಆ್ಯಪ್ ಗ್ರೂಪ್ ಒಂದಕ್ಕೆ ಸೇರಿಸಲಾಗಿತ್ತು.

ಮಹಿಳೆ ಹಂತಹಂತವಾಗಿ ವಿವಿಧ ಬ್ಯಾಂಕ್ ಖಾತೆಗಳಿಂದ 7.88 ಕೋಟಿ ಮೊತ್ತವನ್ನು ವಂಚಕರು ಸೂಚಿಸಿದ್ದ ಖಾತೆಗಳಿಗೆ ವರ್ಗಾಯಿಸಿದ್ದರು. ಅಂತಿಮವಾಗಿ ಹಣವನ್ನು ಮರಳಿ ಪಡೆಯಲು ಮುಂದಾದಾಗ, ಒಟ್ಟು ಮೊತ್ತದ ಶೇ 10ರಷ್ಟನ್ನು ಕಮಿಷನ್ ರೂಪದಲ್ಲಿ ಕೇವಣಿ ಇಡುವಂತೆ ಸೂಚಿಸಲಾಗಿತ್ತು. ಇದರಿಂದ ಅನುಮಾನಗೊಂಡ ಮಹಿಳೆ ಪೊಲೀಸರಿಗೆ ದೂರು ನೀಡಿದಾಗ, ಸೈಬರ್ ವಂಚನೆಗೆ ಒಳಗಾಗಿರುವುದು ತಿಳಿದಿದೆ.

ಭಾರತಕ್ಕೆ ಯುಎಸ್ ಸೆನೆಟರ್ ಎಚ್ಚರಿಕೆ

ರಷ್ಯಾದಿಂದ ತೈಲ ಖರೀದಿ ನಿಲ್ಲಿಸದಿದ್ದರೆ ಆರ್ಥಿಕತೆಯನ್ನು ಪುಡಿ ಮಾಡುತ್ತೇವೆ

ವಾಷಿಂಗ್ಟನ್ ಡಿಸಿ: ಉಕ್ರೇನ್‌ನಲ್ಲಿ ರಷ್ಯಾ ಯುದ್ಧ ನಡೆಸುತ್ತಿರುವ ಹಿನ್ನೆಲೆಯಲ್ಲಿ, ರಷ್ಯಾದಿಂದ ತೈಲ ಖರೀದಿಯನ್ನು ನಿಲ್ಲಿಸದಿದ್ದರೆ, ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಭಾರತ ಮತ್ತು ಚೀನಾ ಸೇರಿದಂತೆ ಮಾಸ್ಕೋದ ವ್ಯಾಪಾರ ಪಾಲುದಾರರ ಮೇಲೆ ಭಾರೀ ಸುಂಕ ವಿಧಿಸುತ್ತಾರೆ ಎದು ಯುಎಸ್ ಸೆನೆಟರ್ ಲಿಂಡ್ಸೆ ಗ್ರಹಾಂ ಎಚ್ಚರಿಸಿದ್ದಾರೆ. ಟ್ರಂಪ್ ಆಡಳಿತವು ತೈಲ ಸಂಬಂಧಿತ ಆಮದುಗಳ ಮೇಲೆ ಶೇ. 100ರಷ್ಟು ಸುಂಕ ವಿಧಿಸಲು ಯೋಜಿಸುತ್ತಿದೆ. ಇದರಿಂದ ರಷ್ಯಾದಿಂದ ತೈಲ ಖರೀದಿಸುತ್ತಿರುವ ಭಾರತ ಮತ್ತು ಚೀನಾ ಸೇರಿದಂತೆ ಹಲವು ದೇಶಗಳ ಆರ್ಥಿಕತೆಯನ್ನು ಪುಡಿ ಮಾಡಲಿದೆ ಎಂದು ಲಿಂಡ್ಸೆ ಗ್ರಹಾಂ ಬಹಿರಂಗ ಎಚ್ಚರಿಕೆ ನೀಡಿದ್ದಾರೆ. ಭಾರತ ಚೀನಾ ಸೇರಿದಂತೆ ರಷ್ಯಾದಿಂದ ತೈಲ ಖರೀದಿಸುತ್ತಿರುವ ದೇಶಗಳು ಮತ್ತು ಖುದ್ದು ರಷ್ಯಾದ ಸರಕುಗಳ ಮೇಲೆ ಶೇ. 500ರಷ್ಟು ಸುಂಕ ವಿಧಿಸುವ ಮಸೂದೆಯನ್ನು ಜಾರಿಗೊಳಿಸಲು ಲಿಂಡ್ಸೆ ಗ್ರಹಾಂ ಈ ಹಿಂದೆ ಟ್ರಂಪ್ ಆಡಳಿತವನ್ನು ಒತ್ತಾಯಿಸಿದ್ದರು.

ಲಿಂಡ್ಸೆ ಬೆದರಿಕೆ ಏನು?: ಡೊನಾಲ್ಡ್ ಟ್ರಂಪ್ ಅವರು ರಷ್ಯಾದ ತೈಲವನ್ನು ಖರೀದಿಸುವ ದೇಶಗಳ ಮೇಲೆ ಸುಂಕ ವಿಧಿಸಲಿದ್ದಾರೆ. ಇದರಿಂದ ಚೀನಾ, ಭಾರತ, ಬ್ರೆಜಿಲ್ ದೇಶಗಳ ಆರ್ಥಿಕತೆಗಳು ನೆಲಕಚ್ಚಲಿವೆ.

ಈ ದೇಶಗಳಿಗೆ ನಾನು ಹೇಳುವುದೇನೆಂದರೆ, ರಷ್ಯಾದಿಂದ ಅಗ್ಗದ ದರದಲ್ಲಿ ತೈಲ ಖರೀದಿಸುವ ಮೂಲಕ ನೀವು ಉಕ್ರೇನ್ ವಿರುದ್ಧದ ಯುದ್ಧ ಮುಂದುವರೆಯಲು ಪರೋಕ್ಷವಾಗಿ ಸಹಕಾರ ನೀಡುತ್ತಿದ್ದೀರಿ. ನೀವು ಅಗ್ಗದ ರಷ್ಯಾದ ತೈಲವನ್ನು ಖರೀದಿಸುವುದನ್ನು ಮುಂದುವರಿಸಿದರೆ, ನಾವು ನಿಮ್ಮನ್ನು ಹರಿದು ಹಾಕುತ್ತೇವೆ ಮತ್ತು ನಿಮ್ಮ ಆರ್ಥಿಕತೆಯನ್ನು

ಪುಡಿಮಾಡುತ್ತೇವೆ ಎಂದು ಫಾಕ್ಸ್ ನ್ಯೂಸ್‌ಗೆ ನೀಡಿದ ಸಂದರ್ಶನದಲ್ಲಿ ಲಿಂಡ್ಸೆ ಗ್ರಹಾಂ ಎಚ್ಚರಿಸಿದ್ದಾರೆ.

ರಷ್ಯಾಗೆ ನೆರವಾಗುವ ಮೂಲಕ ಭಾರತ, ಚೀನಾ ಮತ್ತು ಬ್ರೆಜಿಲ್ ರಾಷ್ಟ್ರಗಳು ರಕ್ತದ ಹಣ ಗಳಿಕೆ ಮಾಡುತ್ತಿವೆ. ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರ ರಕ್ತದಾಹ ನೀಗಿಸುವಲ್ಲಿ ಈ ರಾಷ್ಟ್ರಗಳ ಪಾತ್ರವಿದೆ. ಯಾರಾದರೊಬ್ಬರು ಪುಟಿನ್ ಅವರನ್ನು ತಡೆಯಬೇಕಿದ್ದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಆ ಕೆಲಸ ಮಾಡಲಿದ್ದಾರೆ.

ಬೆದರಿಕೆ ಹಾಕಿದ್ದ ನ್ಯಾಟೋ ಮುಖ್ಯಸ್ಥ

ರಿಪಬ್ಲಿಕನ್ ಸೆನೆಟರ್ ಲಿಂಡ್ಸೆ ಗ್ರಹಾಂ ರೀತಿಯಲ್ಲೇ ಇತ್ತೀಚಿಗಷ್ಟೇ ನ್ಯಾಟೋ ಮುಖ್ಯಸ್ಥ ಮಾರ್ಕ್ ರುಟ್ಟೆ ಕೂಡ, ಭಾರತ, ಚೀನಾ ಮತ್ತು ಬ್ರೆಜಿಲ್ ರಾಷ್ಟ್ರಗಳಿಗೆ ಬೆದರಿಕೆ ಹಾಕಿದ್ದರು. ರಷ್ಯಾದಿಂದ ಅಗ್ಗದ ದರದಲ್ಲಿ ತೈಲ ಖರೀದಿಸುತ್ತಿರುವ ದೇಶಗಳು ಒಂದೋ ಆದೇಶದೊಂದಿಗೆ ವ್ಯಾಪಾರವನ್ನು ಸ್ಥಗಿತಗೊಳಿಸಬೇಕು. ಇಲ್ಲವೇ ಉಕ್ರೇನ್ ಯುದ್ಧ ನಿಲ್ಲಿಸುವಂತೆ ಪುಟಿನ್ ಮೇಲೆ ಒತ್ತಡ ಹಾಕಬೇಕು ಎಂದು ಮಾರ್ಕ್ ರುಟ್ಟೆ ಒತ್ತಾಯಿಸಿದ್ದರು. ಆದರೆ ಮಾರ್ಕ್ ರುಟ್ಟೆ ಬೆದರಿಕೆಗೆ ಭಾರತ ತಿರುಗೇಟು ನೀಡಿದ್ದು, ಮಾರ್ಕ್ ರುಟ್ಟೆ ಇದೇ ಬೆದರಿಕೆಯನ್ನು ಇಯು ಮೇಲೂ ಹಾಕಲಿ ಎಂದು ಸವಾಲು ಹಾಕಿತ್ತು.

- ಭಾರತಕ್ಕೆ ಗಂಭೀರ ಎಚ್ಚರಿಕೆ ಕೊಟ್ಟ ಅಮೆರಿಕದ ರಿಪಬ್ಲಿಕನ್ ಸೆನೆಟರ್ ಲಿಂಡ್ಸೆ ಗ್ರಹಾಂ
- ರಷ್ಯಾದಿಂದ ತೈಲ ಖರೀದಿ ನಿಲ್ಲಿಸದಿದ್ದರೆ ಆರ್ಥಿಕತೆ ಪುಡಿ ಮಾಡುವುದಾಗಿ ಲಿಂಡ್ಸೆ ಗ್ರಹಾಂ ಎಚ್ಚರಿಕೆ.
- ನ್ಯಾಟೋ ಮುಖ್ಯಸ್ಥ ಮಾರ್ಕ್ ರುಟ್ಟೆ ಧಾಟಿಯಲ್ಲಿ ಮಾತನಾಡಿದ ಯುಎಸ್ ಸೆನೆಟರ್ ಲಿಂಡ್ಸೆ ಗ್ರಹಾಂ.

ರಷ್ಯಾದಿಂದ ಅಗ್ಗದ ದರದಲ್ಲಿ ತೈಲ ಖರೀದಿಸುತ್ತಿರುವ ಭಾರತ, ಚೀನಾ, ಬ್ರೆಜಿಲ್ ಆರ್ಥಿಕತೆಗಳೂ ನಾಶವಾಗಲಿವೆ ಎಂದು ರಿಪಬ್ಲಿಕನ್ ಸೆನೆಟರ್ ಕಿಡಿಕಾರಿದ್ದಾರೆ. ರಷ್ಯಾಕ್ಕೆ ಗಂಭೀರ ಎಚ್ಚರಿಕೆ ನೀಡುತ್ತಾ, ಅಧ್ಯಕ್ಷ ಪುಟಿನ್ ಅವರ ಸಮಯ ಮುಗಿಯುತ್ತಾ ಬಂದಿದೆ. ಉಕ್ರೇನ್‌ನಲ್ಲಿ ಅವರ ಅಮಾನವೀಯ ದಾಳಿಗಳು ಶೀಘ್ರದಲ್ಲೇ ಅಂತ್ಯವಾಗಲಿದೆ. ಡೊನಾಲ್ಡ್ ಟ್ರಂಪ್ ಅವರ ತಾಳ್ಮೆಯನ್ನು ಪರೀಕ್ಷಿಸುತ್ತಿರುವ ವ್ಲಾಡಿಮಿರ್ ಪುಟಿನ್ ಇದಕ್ಕೆ ತಕ್ಕ ಬೆಲೆ ತೆರಲಿದ್ದಾರೆ ಎಂದು ಲಿಂಡ್ಸೆ ಗ್ರಹಾಂ ಹರಿಹಾಯ್ದಿದ್ದಾರೆ. ಪುಟಿನ್ ನೆರೆಯ ದೇಶಗಳನ್ನು ಆಕ್ರಮಿಸಲು ಹವಣಿಸುತ್ತಿದ್ದಾರೆ.

ರಷ್ಯಾ ಅಧ್ಯಕ್ಷರು ಹಿಂದಿನ ಸೋವಿಯತ್ ಒಕ್ಕೂಟವನ್ನು ಮರುಸೃಷ್ಟಿಸಲು ಪ್ರಯತ್ನ

ಉರ್ಫಿಗೆ ಇದೆಂಥಾ ಸ್ಥಿತಿ

ಗುರತೇ ಸಿಗದಂತಾದ ಉರ್ಫಿ ಜಾವೇದ್ ಮುಖ

ಬಾಲಿವುಡ್‌ನ ಕಿರುತೆರೆ ನಟಿ ಹಾಗೂ ಸೋಶಿಯಲ್ ಮೀಡಿಯಾದ ಸ್ಟಾರ್ ಉರ್ಫಿ ಜಾವೇದ್, ತಮ್ಮ ಫ್ಯಾಷನ್‌ನಿಂದಾಗಿ ಅವರು ಸದಾ ಸುದ್ದಿಯಲ್ಲಿರುತ್ತಾರೆ. ತಮ್ಮ ಚಿತ್ರ-ವಿಚಿತ್ರ ಉಡುಗೆಗಳಿಂದ ಫ್ಯಾಷನ್ ಜಗತ್ತಿನಲ್ಲಿ ತಮ್ಮದೇ ಆದ ಛಾಪನ್ನು ಮೂಡಿಸಿದ್ದಾರೆ. ಉರ್ಫಿಯ ಉಡುಗೆಗಳು ಆಗಾಗ ಟ್ರೋಲ್‌ಗೆ ಒಳಗಾಗುತ್ತವೆ, ಆದರೆ ಅವರು ಟೀಕಿಸುವವರಿಗೆ ತಲೆಕೆಡಿಸಿಕೊಳ್ಳುವುದಿಲ್ಲ, ಬದಲಿಗೆ ತಿರುಗೇಟು ನೀಡುತ್ತಾರೆ. ಇದೀಗ ಅವರ ತುಟಿ ಮತ್ತು ಮುಖ ಊದಿಕೊಂಡಿರುವ ವಿಡಿಯೋ ಸೋಶಿಯಲ್ ಮೀಡಿಯಾದಲ್ಲಿ ಸಖತ್ ವೈರಲ್ ಆಗಿದೆ. ಉರ್ಫಿ ಜಾವೇದ್ ತಮ್ಮ ಇನ್ಸ್ಟಾಗ್ರಾಮ್‌ನಲ್ಲಿ ಫಿಲ್ಲರ್ ಕರಗಿಸುವ ಪ್ರಕ್ರಿಯೆಯ ವಿಡಿಯೋವನ್ನು ಹಂಚಿಕೊಂಡಿದ್ದಾರೆ. ನನ್ನ ಫಿಲ್ಲರ್‌ಗಳು ಸರಿಯಾಗಿ ಇರಲಿಲ್ಲ, ಅದು ಮಿಸ್‌ಪ್ಲೇಸ್ಡ್ ಆಗಿದ್ದವು. ಹಾಗಾಗಿ ನನ್ನ ನಗುವಿನ ಗೆರೆಗಳು ಮತ್ತು ತುಟಿ ಫಿಲ್ಲರ್‌ಗಳನ್ನು ಕರಗಿಸಲು ನಿರ್ಧರಿಸಿದೆ. ಈ ಪ್ರಕ್ರಿಯೆ ತುಂಬಾ ನೋವಿನಿಂದ ಕೂಡಿತ್ತು. ನನ್ನ ತುಟಿಗಳು ತಕ್ಷಣವೇ ಊದಿಕೊಂಡವು, ನನ್ನ ಮುಖವೂ ಊದಿಕೊಂಡಿತು ಎಂದು ತಾವೇ ವಿಡಿಯೋ ಮಾಡಿ ಸೋಶಿಯಲ್ ಮೀಡಿಯಾದಲ್ಲಿ ಹಂಚಿಕೊಂಡಿದ್ದಾರೆ.



ಲಿಪ್ ಫಿಲ್ಲರ್ ತೆಗೆಸಿದ್ದೇಕೆ ಉರ್ಫಿ ಜಾವೇದ್: ನಾನು ನನ್ನನ್ನು ನೋಡಿಕೊಂಡು ನಗುತ್ತಿದ್ದೆ. ಕೊನೆಯಲ್ಲಿ ನನ್ನ ಸ್ಥಿತಿ ತುಂಬಾ ಕೆಟ್ಟದಾಗಿತ್ತು. ಹಾಗಾಗಿ ಫಿಲ್ಲರ್‌ಗಳನ್ನು ತೆಗೆಸಿದ್ದೇನೆ ಏಕೆಂದರೆ ಅವು ಸರಿಯಾಗಿ ಇರಲಿಲ್ಲ. ನಾನು ಅವುಗಳನ್ನು ಮತ್ತೆ ಹಾಕಿಸಿಕೊಳ್ಳುತ್ತೇನೆ, ಆದರೆ ಈ ಬಾರಿ ನೈಸರ್ಗಿಕವಾಗಿ. ನಾನು ಫಿಲ್ಲರ್‌ಗಳಿಗೆ ನಾನು ವಿರೋಧಿಯಲ್ಲ, ಫಿಲ್ಲರ್‌ಗಳಿಗಾಗಿ ಉತ್ತಮ ವೈದ್ಯರನ್ನು ಆಯ್ಕೆ ಮಾಡುವುದು ತುಂಬಾ ಮುಖ್ಯ. ಫ್ಯಾನ್ಸಿ ಕ್ಲಿನಿಕ್‌ಗಳನ್ನು ಹೊಂದಿರುವ ಕೆಲವು ವೈದ್ಯರಿಗೆ ಏನೂ ತಿಳಿದಿರುವುದಿಲ್ಲ ಎಂದಿದ್ದಾರೆ ಉರ್ಫಿ ಜಾವೇದ್.

ಅಂದಹಾಗೆ 18 ವರ್ಷಗಳಿಂದ ಉರ್ಫಿ ಜಾವೇದ್ ತಮ್ಮ ತುಟಿ ಫಿಲ್ಲರ್‌ಗಳನ್ನು ಹೊಂದಿದ್ದು, ಇದೀಗ ಒಂಬತ್ತು ವರ್ಷಗಳ ನಂತರ ಅವುಗಳನ್ನು ಕರಗಿಸಿಕೊಂಡಿರುವುದರ ಬಗ್ಗೆ ಅವರು ತಿಳಿಸಿದ್ದಾರೆ. ಫಿಲ್ಲರ್ ಕರಗಿರುವ ಪ್ರಕ್ರಿಯೆಯ ವಿಡಿಯೋವನ್ನು ಉರ್ಫಿ ತಮ್ಮ ಇನ್ಸ್ಟಾಗ್ರಾಮ್ ಖಾತೆಯಲ್ಲಿ ಹಂಚಿಕೊಂಡಿದ್ದಾರೆ. ಈ ವಿಡಿಯೋದಲ್ಲಿ, ಫಿಲ್ಲರ್ ತೆಗೆದ ನಂತರ ಅವರ ಮುಖ ಮತ್ತು ತುಟಿಗಳು ಊದಿಕೊಂಡಿರುವುದು ಕಾಣಿಸಿಕೊಂಡಿದೆ. ಉರ್ಫಿ ಜಾವೇದ್ ತಮ್ಮ ಬೋಲ್ಡ್ ನಿರ್ಧಾರಗಳು ಸೋಶಿಯಲ್ ಮೀಡಿಯಾದಲ್ಲಿ ಚರ್ಚೆಗೆ ಕಾರಣವಾಗಿದೆ.

ಕನ್ನಡದಲ್ಲಿ ಅವಕಾಶಗಳೇ ಇಲ್ಲ ದಿಯಾ ಸಿನಿಮಾ ನಟಿ ಬೇಸರ

ಖುಷಿ ರವಿ, ಕನ್ನಡ ಚಿತ್ರರಂಗದಲ್ಲಿ ತಮ್ಮ ನಟನೆಯಿಂದ ಗುರುತಿಸಿಕೊಂಡಿರುವ ಪ್ರತಿಭಾನ್ವಿತ ನಟಿ. ದಿ ಗ್ರೇಟ್ ಸ್ಟೋರಿ ಆಫ್ ಸೋಡಾಬುಡ್ಡಿ? ಚಿತ್ರದಿಂದ ಅವರ ನಟನಾ ಜರ್ನಿ ಆರಂಭವಾಯಿತು. ಆದರೆ ದಿಯಾ ಚಿತ್ರವು ಖುಷಿ ರವಿ ಅವರಿಗೆ ದೊಡ್ಡ ಮಟ್ಟದ ಜನಪ್ರಿಯತೆಯನ್ನು ತಂದುಕೊಟ್ಟಿತು. ಆ ನಂತರ ಹಲವಾರು ಸಿನಿಮಾಗಳಲ್ಲಿ ಖುಷಿ ರವಿ ನಟಿಸಿ ಪ್ರೇಕ್ಷಕರ ಮನ ಗೆದ್ದಿದ್ದಾರೆ. ಆದ್ರೀಗ ಅವರಿಗೆ ಕನ್ನಡದಲ್ಲಿ ಒಳ್ಳೆಯ ಸ್ಕ್ರಿಪ್ಟ್‌ಗಳು ಬರ್ತಿಲ್ಲ ಎಂದು ಬೇಸರ ವ್ಯಕ್ತಪಡಿಸಿದ್ದಾರೆ. ಖುಷಿ ರವಿ ಅವರು ಸನ್ ಆಫ್ ಮುತ್ತಣ್ಣ ಸಿನಿಮಾದಲ್ಲಿ ನಟಿಸುತ್ತಿದ್ದಾರೆ. ಇತ್ತೀಚೆಗೆ ಈ ಸಿನಿಮಾದ ಸಾಂಗ್ ಲಾಂಚ್ ಈವೆಂಟ್ ನಡೆಯಿತು. ಈ ವೇಳೆ ಮಾತನಾಡಿ, ನಾನು ಒಂದು ವಿಚಾರವನ್ನು ತುಂಬಾ ಪ್ರಾಮಾಣಿಕವಾಗಿ ಹೇಳೋಕೆ ಇಷ್ಟ ಪಡುತ್ತೇನೆ. ಈ ವಿಚಾರ ನನಗೆ ತುಂಬಾ ಕಾಡ್ತಿತ್ತು ಇತ್ತು. ಅಯ್ಯನ ಮನೆ ವೆಬ್ ಸೀರೀಸ್ ಬಂತು, ತುಂಬಾ ಚೆನ್ನಾಗಿ ಆಯ್ತು. ಬೇರೆ ಬೇರೆ ಭಾಷೆಗಳಿಗೂ ಡಬ್ ಆಯ್ತು. ಹೀಗೆ ಒಬ್ಬ ಪತ್ರಕರ್ತರು ಅಯ್ಯನ ಮನೆ ಚೆನ್ನಾಗಿ ಆಯ್ತು. ಹಾಗಾದ್ರೆ ಹೆಚ್ಚು ಆಫರ್ಸ್‌ಗಳು ಬರ್ತಿದ್ದಾವೆ ಅನ್ಸುತ್ತೆ ಅಂದ್ರು. ಆಫರ್ಸ್ ಬರ್ತಿವೆ ಆದರೆ, ಕನ್ನಡದಲ್ಲಿ ಬರ್ತಿಲ್ಲ ಎಂದಿದ್ದಾರೆ ಖುಷಿ ರವಿ. ಬೇರೆ ಭಾಷೆಗಳಿಂದ ಆಫರ್ಸ್ ಬರ್ತಿವೆ. ಇದು ಯಾಕೆ ಹೀಗೆ ಆಗ್ತಿದೆ ಗೊತ್ತಿಲ್ಲ, ಕನ್ನಡ ಬಿಟ್ಟು ಬೇರೆ ಭಾಷೆಗಳಿಂದೆಲ್ಲಾ ಆಫರ್ಸ್ ಬರ್ತಿವೆ ಹೊರತು, ಕನ್ನಡದಲ್ಲಿ ಒಂದು ಸ್ಕ್ರಿಪ್ಟ್ ಕೂಡ ನಾನು ಕೇಳಿಲ್ಲ. ನೋಡೋಣ ಮುಂದಕ್ಕೆ ಒಳ್ಳೊಳ್ಳೆ ಸ್ಕ್ರಿಪ್ಟ್ಸ್ ಕನ್ನಡದಲ್ಲಿ ಸಿಕ್ರೆ ಖುಷಿ ಎಂದು ಖುಷಿ ರವಿ ಹೇಳಿಕೊಂಡಿದ್ದಾರೆ.

ನಮ್ಮಲ್ಲಿ ರೈಟರ್ಸ್‌ಗಳ ಕೊರತೆ: ಕನ್ನಡದವಳಾಗಿ ಬೇರೆ ಭಾಷೆಯವರು ನಮ್ಮನ್ನು ಮೆಚ್ಚುಗೆ ಪಡೆದು, ನಮಗೆ ಅವಕಾಶ ಕೊಡ್ತಿದ್ದಾರೆ. ಮುಂಚೆಯಿಂದ ಅಂತ ಹೇಳ್ತಿಲ್ಲ, ಈಗ ಒಂದೂವರೆ ವರ್ಷದಿಂದ ಸಿಕ್ಕಾಪಟ್ಟೆ ಸ್ಕ್ರಿಪ್ಟ್ಸ್‌ಗಳು ಕಮ್ಮಿಯಾಗಿದೆ. ನನ್ನೊಬ್ಬಳಿಗೆ ಅಲ್ಲ, ಬೇರೆ ನಟಿಯರಿಗೂ ಹೀಗೆ ಆಗಿದೆ. ನಮ್ಮಲ್ಲಿ ರೈಟರ್ಸ್ ಕಮ್ಮಿ ಆಗಿದ್ದಾರೆ. ಬೇರೆ ಭಾಷೆಗಳಲ್ಲಿ ರೈಟರ್ಸ್‌ಗಳೇ ಹೀರೋ-ಹೀರೋಯಿನ್‌ನಂತೆ. ನಮ್ಮಲ್ಲಿ ರೈಟರ್ಸ್‌ನ ತರಬೇಕು ಎಂದು ಖುಷಿ ರವಿ ಹೇಳಿಕೊಂಡಿದ್ದಾರೆ. ಕನ್ನಡ ಸಿನಿಮಾಗಳಿಗೆ ಮೊದಲ ಆದ್ಯತೆ, ತುಂಬಾ ಸಿನಿಮಾಗಳನ್ನು ಮಾಡಿದ್ರೆ, ಯಾವುದ್ಯಾವುದೋ ಸಿನಿಮಾಗಳನ್ನು ಮಾಡ್ತಿದ್ದಾರೆ ಚೂಸಿಯಾಗಿ ಇಲ್ಲ ಅಂತ ಮಾತನಾಡಿಕೊಳ್ತಾರೆ. ಏನು ಮಾಡ್ತಿಲ್ಲ ಕಾಯೋಣ ಅಂತ ಅಂದ್ರೆ, ಸಿನಿಮಾಗಳೇ ಇಲ್ಲ ಇವ್ರಿಗೆ ಅಂತಾರೆ. ಹಾಗಾಗಿ ನಮಗೆ ಎಲ್ಲಿ ಅವಕಾಶಗಳು ಸಿಗುತ್ತದೆಯೋ ಎಲ್ಲಿ ತೇಲಿಕೊಂಡು ಹೋಗಬೇಕು ಅಷ್ಟೇ. ಹಾಗಂತ ನಮ್ಮ ತನವನ್ನು ನಾವು ಬಿಟ್ಟು ಕೊಡಬಾರದು. ನನ್ನ ಮೊದಲ ಆದ್ಯತೆ ಕನ್ನಡ ಸಿನಿಮಾಗೆ ಎಂದಿದ್ದಾರೆ ಖುಷಿ ರವಿ.

ಇನ್ಮುಂದೆ ಉಪ್ಪಿ ನೆಕ್ಸ್ಟ್ ಲೆವೆಲ್

ಸೈಲೆಂಟಾಗೇ ರಿಯಲ್ ಸ್ಟಾರ್ ಉಪೇಂದ್ರ ಅವರ ಹೊಸ ಸಿನಿಮಾ ಪ್ಲ್ಯಾನ್ ಆಗಿದೆ, ಟೀಮ್ ಕೂಡ ರಿವೀಲ್ ಆಗಿದೆ. ಇನ್ನುಳಿದ ಮಾಹಿತಿಗಳು ಇನ್ನಷ್ಟೇ ಹೊರಬೀಳಬೇಕಿದ್ದು, ಉಪೇಂದ್ರಗೆ ಈ ಬಾರಿ ಅರವಿಂದ್ ಕೌಶಿಕ್ ನಿರ್ದೇಶನ ಮಾಡುತ್ತಿದ್ದಾರೆ. ಚಿತ್ರವನ್ನು ತರುಣ್ ಸ್ಟುಡಿಯೋಸ್ ಬ್ಯಾನರ್‌ನಲ್ಲಿ ತರುಣ್ ಶಿವಪ್ಪ ನಿರ್ಮಿಸುತ್ತಿದ್ದಾರೆ. ಈ ನಯಾ ಕಾಂಬಿನೇಶನ್ ಆರಂಭದಲ್ಲೇ ಗಮನ ಸೆಳೆಯುತ್ತಿದೆ. ಸದ್ಯಕ್ಕೀಗ ಉಪೇಂದ್ರ, ಸೂರಪ್ಪ ಬಾಬು ನಿರ್ಮಾಣದ ನಾಗಣ್ಣ ನಿರ್ದೇಶನದಲ್ಲಿ ಭಾರ್ಗವ ಚಿತ್ರದಲ್ಲಿ ತೊಡಗಿದ್ದು ಇದರ ಶೂಟಿಂಗ್ ಮುಗಿದ ಬಳಿಕ ಹೊಸ ಸಿನಿಮಾ ಪ್ರಾರಂಭಿಸುವ ಪ್ಲ್ಯಾನ್ ಮಾಡಿಕೊಂಡಿದ್ದಾರೆ. ಹಲವು ದಿನಗಳಿಂದ ಅರವಿಂದ್ ಕೌಶಿಕ್ ನಿರ್ದೇಶನದಲ್ಲಿ ಉಪ್ಪಿ ನಟಿಸುವ ಸುದ್ದಿ ಇತ್ತು. ಇದೀಗ ನಿರ್ಮಾಣ ಸಂಸ್ಥೆಯಿಂದಲೇ ಅಧಿಕೃತ ಮಾಹಿತಿ ಸಿಕ್ಕಿದ್ದು ಚಿತ್ರಕ್ಕೆ ಶೀರ್ಷಿಕೆಯೇ ಮುಖ್ಯ ಆಕರ್ಷಣೆ ಆಗಿದೆ. ಚಿತ್ರಕ್ಕೆ ನೆಕ್ಸ್ಟ್ ಲೆವೆಲ್ ಎಂದು ಶೀರ್ಷಿಕೆ ಇಡಲಾಗಿದೆ. ಇದರ ಇನ್ನಷ್ಟು ಸೀಕ್ರೆಟ್‌ಗಳನ್ನ ಹಂತಹಂತವಾಗಿ ರಿವ್ಹೀಲ್ ಮಾಡುವ ಸುದ್ದಿ ಕೊಟ್ಟಿದೆ ಚಿತ್ರತಂಡ.

ಶಾಕಿಂಗ್ ವಿಚಾರ ರಿವೀಲ್ ಮಾಡಿದ ನಟಿ

ಧಾರಾವಾಹಿಗಳಲ್ಲಿ ಕಾಣಿಸಿಕೊಳ್ಳುವ ನಟ-ನಟಿಯರಿಗೆ ಹೆಚ್ಚಿನ ಪ್ರಾಮುಖ್ಯತೆ ನೀಡಲಾಗುತ್ತದೆ. ಇದರಿಂದಾಗಿ, ಅನೇಕ ನಟ-ನಟಿಯರು ವಿವಿಧ ಚಿಕಿತ್ಸೆಗಳಿಗೆ ಒಳಗಾಗುತ್ತಾರೆ. ಅದೇ ರೀತಿ, ನಟಿಯರು ಸುಂದರವಾಗಿ ಕಾಣಲು ಏನು ಮಾಡುತ್ತಾರೆ ಎಂಬುದನ್ನು ನಟಿಯೊಬ್ಬರು ಬಹಿರಂಗಪಡಿಸಿದ್ದಾರೆ. ಜನಪ್ರಿಯ ವೆಬ್ ಸರಣಿ ಪಂಚಾಯತ್‌ನಲ್ಲಿ ಕಾಣಿಸಿಕೊಂಡ ನಟಿ ತೃಪ್ತಿ ಸಾಹು, ಟಿವಿ ಉದ್ಯಮದಲ್ಲಿ ಅನೇಕರು ಸುಂದರವಾಗಿ ಕಾಣುವ ಗೀಳನ್ನು ಹೊಂದಿದ್ದಾರೆ ಎಂದು ಹೇಳಿದರು. ಇತ್ತೀಚಿನ ಸಂದರ್ಶನವೊಂದರಲ್ಲಿ, ಅವರು ಈ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ಮುಕ್ತವಾಗಿ ವ್ಯಕ್ತಪಡಿಸಿದ್ದಾರೆ. ಡಿಜಿಟಲ್ ಕಾಮೆಂಟರಿಗೆ ನೀಡಿದ ಸಂದರ್ಶನದಲ್ಲಿ ತೃಪ್ತಿ ಅವರಿಗೆ ಈ ಬಗ್ಗೆ ಕೇಳಲಾಗಿದೆ. ಸುಂದರವಾಗಿ ಕಾಣಲು ಹೀಗೆ ಮಾಡು, ಹಾಗೆ ಮಾಡು ಎಂದು ನನಗೆ ಅನೇಕ ಜನರಿಂದ ಸಲಹೆ ಸಿಕ್ಕಿತು. 2018 ರಲ್ಲಿ, ನನಗೆ ತಿಳಿದಿರುವ ಒಬ್ಬ ಹುಡುಗಿ ನನಗೆ ಇಂಜೆಕ್ಷನ್ ನೀಡಿ ಅದನ್ನು ತೆಗೆದುಕೊಳ್ಳಿ ಎಂದಿದ್ದಳು. ನೀನು ಸುಂದರವಾಗಿ ಕಾಣುತ್ತೀಯಾ ಎಂದು ಕೂಡ ಆಕೆ ಹೇಳಿದ್ದಳು' ಎಂದಿದ್ದಾರೆ ತೃಪ್ತಿ.

ನಿರ್ದೇಶನದ ಕಡೆ ರಂಜನಿ ರಾಘವನ್

ರಂಜನಿ ರಾಘವನ್ ಕಿರುತೆರೆ ಹಾಗೂ ಕನ್ನಡ ಚಿತ್ರರಂಗದಲ್ಲಿ ಗುರುತಿಸಿಕೊಂಡಿರುವ ನಟಿ. ಈಗ ಅವರು ಲೇಖಕಿ ಮತ್ತು ನಿರ್ದೇಶಕಿಯೂ ಆಗಿದ್ದಾರೆ. ಪುಟ್ಟಗೌರಿ ಮದುವೆ ಹಾಗೂ ಕನ್ನಡತಿ ಧಾರಾವಾಹಿಗಳ ಮೂಲಕ ಕನ್ನಡಿಗರ ಮನೆಮಾತಾದ ರಂಜನಿ, ತಮ್ಮ ನಟನೆ, ಬರವಣಿಗೆ ಮತ್ತು ಇದೀಗ ನಿರ್ದೇಶನದ ಮೂಲಕ ಕಲಾ ಲೋಕದಲ್ಲಿ ಹೊಸ ದಿಗಂತವನ್ನು ಸೃಷ್ಟಿಸುತ್ತಿದ್ದಾರೆ. ರಂಜನಿ ರಾಘವನ್ ಸದ್ಯ ನಿರ್ದೇಶನದ ಕಡೆ ಗಮನ ಹರಿಸಿದ್ದಾರೆ. ಅಲ್ಲದೇ ಬರಗೂರು ರಾಮಚಂದ್ರಪ್ಪ ಅವರ ನಿರ್ದೇಶನದ ಸ್ವಪ್ನ ಮಂಟಪ ಸಿನಿಮಾದಲ್ಲಿಯೂ ಅವರು ನಟಿಸಿದ್ದಾರೆ. ಈ ಸಿನಿಮಾ ಇದೇ ಜುಲೈ 25ಕ್ಕೆ ತೆರೆ ಕಾಣಲಿದೆ. ಹೀಗಾಗಿ ಮಾಧ್ಯಮಗಳಿಗೆ ರಂಜನಿ ರಾಘವನ್ ಸಂದರ್ಶನ ನೀಡಿದ್ದಾರೆ. ಈ ವೇಳೆ, ಜೀ ಕನ್ನಡ ವಾಹಿನಿಯಲ್ಲಿ ಕರ್ಣ ಧಾರಾವಾಹಿ ಅನೌನ್ಸ್ ಆದಾಗ ನಟ ಕಿರಣ್ ರಾಜ್‌ಗೆ ಕನ್ನಡತಿ ರಂಜನಿ ರಾಘವನ್ ಜೋಡಿಯಾಗಬೇಕು ಅಂತ ಅಭಿಮಾನಿಗಳು ಆಸೆ ಪಟ್ಟಿದ್ದರು. ಮತ್ತೆ ಧಾರಾವಾಹಿಗಳಲ್ಲಿ ನಟಿಸುತ್ತೀರಾ? ಎಂಬ ಪ್ರಶ್ನೆಗೆ, ಜನರು ಇಷ್ಟಪಡುತ್ತಿರುವುದಕ್ಕೆ ಒಂದು ಪವರ್ ಇರುತ್ತದೆ. ಆ ಪವರ್ ಅನ್ನು ಅವರು ನೋಡಿ ಬಿಟ್ಟಿದ್ದಾರೆ. ನಾವು ಮತ್ತೆ ಬಂದಾಗ ಅವರು ಹೀಗೆ ರಿಯಾಕ್ಟ್ ಮಾಡಲ್ಲ. ಅಯ್ಯೋ ಎಷ್ಟು ಸಲ ಇವರನ್ನೇ ನೋಡಬೇಕು ಅಂತಾರೆ ಎಂದಿದ್ದಾರೆ ರಂಜನಿ ರಾಘವನ್.

ಸ್ವಪ್ನ ಮಂಟಪ ಸಿನಿಮಾ ಬಗ್ಗೆ ಮಾತನಾಡುತ್ತಾ, ತಮ್ಮ ನನಸಾಗಿರುವ ಸ್ವಪ್ನದ ಬಗ್ಗೆ ಮಾತನಾಡಿ, ಸದ್ಯಕ್ಕೆ ನಾನು ನಿರ್ದೇಶನ ಮಾಡುತ್ತಿರುವ ಸಿನಿಮಾನೇ ದೊಡ್ಡ ಸ್ವಪ್ನ. ದೊಡ್ಡ ದೊಡ್ಡ ನಿರ್ದೇಶಕರ ಆಶೀರ್ವಾದದಿಂದ ಇಲ್ಲಿಯವರೆಗೂ ಬಂದಿದ್ದೇನೆ ಎಂದು ರಂಜನಿ ಹೇಳಿಕೊಂಡಿದ್ದಾರೆ.

ಭಾರತೀಯ ಆಟಗಾರರು ನಿಜವಾಗಿಯೂ ದೇಶಭಕ್ತರಾಗಿದ್ದರೆ ಹೀಗೆ ಮಾಡಿ



ವರ್ಲ್ಡ್ ಚಾಂಪಿಯನ್‌ಶಿಪ್ ಆಫ್ ಲೆಜೆಂಡ್ಸ್ ಟೂರ್ನಿಯಲ್ಲಿ ಭಾರತ ತಂಡವು ಪಾಕಿಸ್ತಾನ್ ವಿರುದ್ಧ ಆಡದಿರುವುದು ಹೊಸ ಚರ್ಚೆಗೆ ಕಾರಣವಾಗಿದೆ. ಬರ್ಮಿಂಗ್‌ಹ್ಯಾಮ್‌ನ ಎಡ್ಜ್ ಬಾಸ್ಟನ್ ಸ್ಟೇಡಿಯಂನಲ್ಲಿ ನಡೆಯಬೇಕಿದ್ದ ಪಾಕಿಸ್ತಾನ್ ಚಾಂಪಿಯನ್ಸ್ ವಿರುದ್ಧದ ಪಂದ್ಯದಿಂದ ಇಂಡಿಯಾ ಚಾಂಪಿಯನ್ಸ್ ತಂಡದ ಆಟಗಾರರು ಹಿಂದೆ ಸರಿದಿದ್ದರು. ಹೀಗಾಗಿ ಈ ಪಂದ್ಯವನ್ನು ರದ್ದುಗೊಳಿಸಲಾಯಿತು. ಹೀಗೆ ಪಂದ್ಯವನ್ನು ರದ್ದುಗೊಳಿಸಲು ಮುಖ್ಯ ಕಾರಣ ಏಪ್ರಿಲ್ 22ರಂದು ಜಮ್ಮು ಕಾಶ್ಮೀರದ ಪೆಹಲ್ಗಾಮ್‌ನಲ್ಲಿ ಪಾಕ್ ಪ್ರೇರಿತ ಉಗ್ರರು ದಾಳಿ ನಡೆಸಿರುವುದು. ಪಾಕಿಸ್ತಾನ್ ಬೆಂಬಲಿತ ಭಯೋತ್ಪಾದಕರು ಭಾರತದ ಮೇಲೆ ದಾಳಿ ನಡೆಸಿರುವುದನ್ನು ಖಂಡಿಸಿ ಇಂಡಿಯಾ ಚಾಂಪಿಯನ್ಸ್ ತಂಡದ ಕೆಲ ಆಟಗಾರರು ಪಾಕ್ ವಿರುದ್ಧ ಕಣಕ್ಕಿಳಿಯಲು ಹಿಂದೇಟು ಹಾಕಿದ್ದರು. ಹೀಗಾಗಿ ಮ್ಯಾಚ್ ಅನ್ನು ಕ್ಯಾನ್ಸಲ್ ಮಾಡಲಾಯಿತು. ಇದೀಗ ಇಂಡಿಯಾ ಚಾಂಪಿಯನ್ಸ್ ಆಟಗಾರರ ನಡೆಯನ್ನು ಪಾಕ್ ತಂಡದ ಮಾಜಿ ಆಟಗಾರ ಸಲ್ಮಾನ್ ಬಟ್ ಟೀಕಿಸಿದ್ದಾರೆ.

ಈ ಬಗ್ಗೆ ಮಾತನಾಡಿದ ಸಲ್ಮಾನ್ ಬಟ್, ಭಾರತೀಯ ಕ್ರಿಕೆಟಿಗರು ನಿಜವಾಗಿಯೂ ದೇಶಭಕ್ತರಾಗಿದ್ದರೆ ಯಾವುದೇ ಮಟ್ಟದಲ್ಲಿ ಪಾಕಿಸ್ತಾನದೊಂದಿಗೆ ಕ್ರಿಕೆಟ್ ಆಡುವುದಿಲ್ಲ, ಕ್ರಿಕೆಟ್ ಮಾತ್ರವಲ್ಲ.. ಅಂತರರಾಷ್ಟ್ರೀಯ ಮಟ್ಟದಲ್ಲಿ ಯಾವುದೇ ಕ್ರೀಡೆಯಲ್ಲಿ ಪಾಕಿಸ್ತಾನದೊಂದಿಗೆ ಸ್ಪರ್ಧಿಸುವುದಿಲ್ಲ ಎಂದು ಶಪಥ ಮಾಡಿ. ಅದು ಒಲಿಂಪಿಕ್ಸ್‌ನಲ್ಲಿಯೂ ಸಹ. ನೀವು ಹಾಗೆ ಮಾಡಲು ತಯಾರಿದ್ದೀರಾ? ಎಂದು ಪ್ರಶ್ನಿಸಿದ್ದಾರೆ. ಭಾರತ ತಂಡವು ಇನ್ಮುಂದೆ ಪಾಕಿಸ್ತಾನ್ ವಿರುದ್ಧ ವಿಶ್ವಕಪ್‌ನಲ್ಲಿ ಆಡುವುದಿಲ್ಲ, ಒಲಿಂಪಿಕ್ಸ್‌ನಲ್ಲೂ ಮುಖಾಮುಖಿಯಾಗಲ್ಲ ಎಂದು ಭರವಸೆ ನೀಡಿ. ಇದರ ಹೊರತಾಗಿ ಪ್ರತಿ ಬಾರಿ ಕ್ರಿಕೆಟ್ ಮ್ಯಾಚ್ ಬಂದಾಗ ಮಾತ್ರ ಈ ವಿಷಯ ಚರ್ಚೆಯಾಗುವುದಲ್ಲ. ಇತರ ಕ್ರೀಡೆಗಳಲ್ಲಿ ಅಂತಹ ಯಾವುದೇ ಸಮಸ್ಯೆ ಇರುವುದಿಲ್ಲ, ಯಾವಾಗಲೂ ಕ್ರಿಕೆಟ್ ಮ್ಯಾಚ್ ಬಂದಾಗ ಮಾತ್ರ ಆಡಲ್ಲ ಎನ್ನುವುದು ಎಷ್ಟರ ಮಟ್ಟಿಗೆ ಸರಿ. ನೀವು ಪಾಕಿಸ್ತಾನ್ ವಿರುದ್ಧ ಯಾವುದೇ ಕ್ರೀಡೆಯಲ್ಲೂ ಸ್ಪರ್ಧಿಸಲ್ಲ ಎಂಬುದನ್ನು ಖಚಿತಪಡಿಸಿ ಎಂದು ಸಲ್ಮಾನ್ ಬಟ್ ಆಗ್ರಹಿಸಿದ್ದಾರೆ.

ಬರೋಬ್ಬರಿ 17 ಕೆಜಿ ತೂಕ ಇಳಿಸಿಕೊಂಡ ಸರ್ಫರಾಜ್

ತೂಕ ಇಳಿಸಿಕೊಳ್ಳುವ ನಿಟ್ಟಿನಲ್ಲಿ ಬ್ಯಾಟರ್ ಸರ್ಫರಾಜ್ ಖಾನ್ ಅವರ ಅವಿರತ ಶ್ರಮವನ್ನು ಶ್ಲಾಘಿಸಿರುವ ಇಂಗ್ಲೆಂಡ್ ನ ಮಾಜಿ ಕ್ರಿಕೆಟಿಗ ಕೆವಿನ್ ಪೀಟರ್ಸನ್ ಇದನ್ನು ಪೃಥ್ವಿ ಶಾ ಅವರಿಗೆ ಉದಾಹರಣೆಯಾಗಿ ನೀಡಿದ್ದಾರೆ. ಹೌದು, ಫಿಟ್ನೆಸ್ ಕಾರಣಗಳಿಗಾಗಿ ಟೀಕೆಗೊಳಗಾಗಿದ್ದ ಸರ್ಫರಾಜ್ ಖಾನ್ ಅವರು ಒಂದಲ್ಲ, ಎರಡಲ್ಲ, ಬರೋಬ್ಬರಿ 17 ಕೆ.ಜಿ ತೂಕ ಇಳಿಸಿಕೊಂಡಿದ್ದಾರೆ. ಅವರ ಹೊಸ ಫೋಟೋ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದ್ದು ಅದನ್ನು ನೋಡಿದ ಕೆವಿನ್ ಪೀಟರ್ಸನ್ ಅವರು ಪೃಥ್ವಿ ಶಾ ಬಗ್ಗೆ ಪ್ರಶಂಸೆ ವ್ಯಕ್ತಪಡಿಸಿದ್ದಾರೆ.

ಪೀಟರ್ಸನ್ ಅವರು ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ: ಅದ್ಭುತ ಪ್ರಯತ್ನ ಸರ್ಫರಾಜ್ ನಿಮಗೆ ದೊಡ್ಡ ಅಭಿನಂದನೆಗಳು.ಇದು ಉತ್ತಮ ಮತ್ತು ಸ್ಥಿರ ಪ್ರದರ್ಶನಕ್ಕೆ ಕಾರಣವಾಗುತ್ತದೆ ಎಂದು ನನಗೆ ಖಾತ್ರಿಯಿದೆ. ನಿಮ್ಮ ಆದ್ಯತೆಗಳನ್ನು ಬದಲಾಯಿಸುವ ಸಲುವಾಗಿ ಸಮಯ ತೆಗೆದುಕೊಂಡಿದ್ದಕ್ಕೆ ನನಗೆ ಸಂತೋಷವಾಗಿದೆ. ದಯವಿಟ್ಟು ಯಾರಾದರೂ ಇದನ್ನು ಪೃಥ್ವಿ ಶಾಗೆ ತೋರಿಸಿ ಬಲವಾದ ದೇಹ, ಬಲವಾದ ಮನಸ್ಸು ಇದ್ದಾಗ ಖಂಡಿತ ಇದು ಸಾಧ್ಯ ಎಂದು ಪೋಸ್ಟ್ ಮಾಡಿದ್ದಾರೆ. ಇಂಗ್ಲೆಂಡ್ ಪ್ರವಾಸಕ್ಕೂ ಮುನ್ನ ಸರ್ಫರಾಜ್ ಖಾನ್ ಅವರು 10 ಕೆಜಿ ತೂಕ ಇಳಿಸಿಕೊಂಡದ್ದು ಸುದ್ದಿಯಾಗಿದ್ದರು. ಇದೀಗ ಮತ